# ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



ಮೂಲಭೂತವಾದಿಗಳಿಗೆ ಬಲಿಯಾದ ಹುತಾತ್ಮ ವಿದ್ಯಾರ್ಥಿ ನಾಯಕ

**ಅಭಿಮನ್ಯು ಲಾಲ್ ಸಲಾಂ!**

ಸಂಪುಟ 12 | ಸಂಚಿಕೆ 28 | ಜುಲೈ 9–15, 2018 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com

# ಉಳ್ಳವರಿಗೆ ಸಾಲಮನ್ನಾ ಬಡವರಿಗೆ ಬರೆ





## ಬೆಂಬಲ ಬೆಲೆ: 'ಚಾರಿತ್ರಿಕ ವಿಶ್ವಾಸಘಾತ'






## ಹಾಸ್ಟೆಲ್ ನೌಕರರಿಗೆ ಜಯ



## ಹಿಂದುಸ್ತಾನ 'ಲಿಂಚಿಸ್ತಾನ'ವಾಗುತ್ತಿದೆಯೆ



## ಏಕಕಾಲದಲ್ಲಿ ಚುನಾವಣೆ ಪ್ರಜಾಪ್ರಭುತ್ವ ವಿರೋಧಿ




**"ICDS ಉಳಿಸಿ" : ಅಂಗನವಾಡಿ ಬೇಡಿಕೆ ದಿನಾಚರಣೆ : ಜುಲೈ 10**

## ರೈತರಿಗೆ ಕನಿಷ್ಟ ಬೆಂಬಲ ಬೆಲೆಗಳಲ್ಲಿ ಏರಿಕೆ ಎಂಬ ಮೋದಿ ಸರಕಾರದ ಕ್ರೂರ ಮೋಸ

ರೈತರಿಗೆ ಕೇಂದ್ರ ಸರಕಾರ ಜೂನ್ 4 ರಂದು ಭತ್ತ ಮತ್ತು ಇತರ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆಗಳಲ್ಲಿ ಏರಿಕೆಯನ್ನು ಪ್ರಕಟಿಸುವ ಮೂಲಕ ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೆ ತರುವ ತನ್ನ ಆಶ್ವಾಸನೆಯನ್ನು ಈಡೇರಿಸಿದೆ ಎಂದು ಹೇಳಿಕೊಂಡಿದೆ. ಇದು ಮೋಸದಿಂದ ತುಂಬಿದ ದಾವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ. ಆಯೋಗ ಉತ್ಪಾದನಾ ಖರ್ಚನ್ನು ಹೇಗೆ ಲೆಕ್ಕ ಹಾಕಬೇಕು ಎಂಬುದನ್ನೂ ಶಿಫಾರಸು ಮಾಡಿದೆ ಮತ್ತು ಅದರ ಆಧಾರದಲ್ಲಿ ರೈತರಿಗೆ 50% ಲಾಭ ಸಿಗುವ ರೀತಿಯಲ್ಲಿ ಕನಿಷ್ಟ ಬೆಂಬಲ ಬೆಲೆಯನ್ನು ನಿಗದಿ ಮಾಡಬೇಕು ಎಂದು ಹೇಳಿದೆ ಎಂದು ಪೊಲಿಟ್‌ಬ್ಯುರೊ ನೆನಪಿಸಿದೆ.

ಇದು ಹೆಚ್ಚುತ್ತಿರುವ ಉತ್ಪಾದನಾ ವೆಚ್ಚಗಳಿಂದಾಗಿ ಭಾರೀ ಸಾಲಗಳ ಹೊರೆಯಿಂದ ನರಳುತ್ತಿರುವ ರೈತರೊಂದಿಗೆ ಮಾಡಿರುವ ಒಂದು ಕ್ರೂರ ತಮಾಷೆಯಾಗಿದೆ. ಏಕೆಂದರೆ ಮೋದಿ ಸರಕಾರ ಖರ್ಚುಗಳನ್ನು ಲೆಕ್ಕ ಹಾಕಲು ಉದ್ದೇಶಪೂರ್ವಕವಾಗಿಯೇ, ಮಹತ್ವಪೂರ್ಣ ಅಂಶಗಳನ್ನು ಕೈಬಿಟ್ಟಿರುವ ಒಂದು ಅಳತೆಯನ್ನು ಬಳಸಿ, ಆಮೂಲಕ ಖರ್ಚುಗಳ ಲೆಕ್ಕಾಚಾರವನ್ನು ಕಳೆದ ವರ್ಷ ರಾಜ್ಯಸರಕಾರಗಳು, ಬಿಜೆಪಿಯ ರಾಜ್ಯಸರಕಾರಗಳು ಕೂಡ ಪ್ರಸ್ತಾವಿಸಿದ್ದಕ್ಕಿಂತಲೂ ಕೆಳಗಿನ ಮಟ್ಟಕ್ಕೆ ತಂದಿದೆ. ಇದು ರೈತರು ವಾಸ್ತವವಾಗಿ ಮಾಡಿದ ಖರ್ಚುಗಳಿಗಿಂತಲೂ ಕಡಿಮೆಯಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ರೈತರಿಗೆ ಎಷ್ಟು ಬೆಲೆ ಸಿಗಬೇಕು ಎಂದು ಸ್ವಾಮಿನಾಥನ್ ಆಯೋಗ ಶಿಫಾರಸು ಮಾಡಿದೆಯೋ ಮತ್ತು ಮೋದಿ ಸರಕಾರ ಈಗ ಎಷ್ಟನ್ನು ಪ್ರಕಟಿಸಿದೆಯೋ ಇವುಗಳ ನಡುವೆ ಅಪಾರ ಅಂತರಗಳು ಕಾಣುತ್ತಿವೆ, ರೈತರಿಗೆ ಭತ್ತದಲ್ಲಿ ಕ್ವಿಂಟಾಲಿಗೆ 600ರೂ.ಗಳಿಂದ ಹಿಡಿದು, ವಿವಿಧ ಬೇಳೆ ಕಾಳುಗಳು, ನೆಲಗಡಲೆ ಮತ್ತು ಕಬ್ಬಿಗೆ 1800ರಿಂದ 2000ರೂ.ಗಳಷ್ಟು ನಷ್ಟವನ್ನು ಉಂಟಾಗುತ್ತಿದೆ.

ಅಲ್ಲದೆ, ರೈತರು ಈ ಬೆಲೆಯನ್ನು ಕೂಡ ಪಡೆಯುತ್ತಾರೆ ಎಂಬ ಗ್ಯಾರಂಟಿ ಇಲ್ಲ, ಏಕೆಂದರೆ ಕೇಂದ್ರ ಸರಕಾರದ ಧಾನ್ಯ ಖರೀದಿ ಕ್ರಮಗಳನ್ನು ಉದ್ದೇಶಪೂರ್ವಕವಾಗಿ ಕಡಿತ ಮಾಡಲಾಗಿದೆ, ಇದರಿಂದಾಗಿ ರೈತರು ಹತಾಶ ಬೆಲೆಗಳಲ್ಲಿ ಮಾರಾಟ ಮಾಡಬೇಕಾಗಿ ಬರುತ್ತಿದೆ.

ಇದು ರೈತರಲ್ಲಿ ಮೋದಿ ಸರಕಾರದ ವಿರುದ್ಧ ಹೆಚ್ಚುತ್ತಿರುವ ಅಸಂತೃಪ್ತಿಯನ್ನು ಒಂದು ಚುನಾವಣಾ ವರ್ಷದಲ್ಲಿ ಬೇರೆಡೆಗೆ ತಿರುಗಿಸುವ ಹತಾಶ ಪ್ರಯತ್ನವಲ್ಲದೆ ಬೇರೇನೂ ಅಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ರೈತರಿಗೆ ಮಾಡಿರುವ ಈ ಮೋಸವನ್ನು ಪಕ್ಷ ಬಯಲಿಗೆಳೆಯುತ್ತದೆ, ಬಹುಪಾಲು ಸಣ್ಣ ಮತ್ತು ಮಧ್ಯಮ ರೈತರಾಗಿರುವ ಬೇಸಾಯಗಾರರು ಸ್ವಾಮಿನಾಥನ್ ಆಯೋಗದ ಶಿಫಾರಸುಗಳ ಜಾರಿ ಮತ್ತು ಇತರ ತಮ್ಮ ನ್ಯಾಯಬದ್ಧ ಬೇಡಿಕೆಗಳ ಮೇಲೆ ನಡೆಸುವ ಎಲ್ಲ ಹೋರಾಟಗಳನ್ನು ಬೆಂಬಲಿಸುತ್ತದೆ ಎಂದು ಹೇಳಿದೆ.

## ತ್ರಿಪುರಾದಲ್ಲಿ ಆರೆಸ್ಸೆಸ್‌ನಿಂದ ಮುಂದುವರೆಯುತ್ತಿರುವ ಹಿಂಸಾಚಾರ ಮತ್ತು ಭಯೋತ್ಪಾದನೆ

ತ್ರಿಪುರಾದಲ್ಲಿ 'ಮಕ್ಕಳನ್ನು ಕದಿಯುವವರು' ಎಂಬ ಹೆಸರಿನಲ್ಲಿ ಆರೆಸ್ಸೆಸ್/ಬಿಜೆಪಿ ಕೊಲೆಗಡುಕ ಹಲ್ಲೆಗಳನ್ನು ಹರಿಯಬಿಟ್ಟಿವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಜೂನ್ 26ರಂದು ಪಶ್ಚಿಮ ತ್ರಿಪುರಾ ಜಿಲ್ಲೆಯಲ್ಲಿ ಒಬ್ಬ 11 ವರ್ಷದ ವಿದ್ಯಾರ್ಥಿಯನ್ನು ಅಮಾನುಷವಾಗಿ ಕೊಲೆ ಮಾಡಲಾಗಿದೆ. ಬಿಜೆಪಿ ರಾಜ್ಯ ಸರಕಾರದ ಒಬ್ಬ ಮಂತ್ರಿ ಈ ಬಾಲಕನ ಎರಡೂ ಮೂತ್ರಪಿಂಡಗಳನ್ನು ಕಾನೂನುಬಾಹಿರ ಮಾನವಾಂಗ ವ್ಯಾಪಾರಕ್ಕಾಗಿ ತೆಗೆಯಲಾಗಿದೆ ಎಂದು ಆಪಾದಿಸಿದರು. ಇದು ಭಯ–ಗಾಬರಿಯನ್ನು ಹರಡಿತು. ಆದರೆ ರಾಜ್ಯದ ಪೋಲೀಸ್ ಮಹಾನಿರ್ದೇಶಕರು(ಡಿಜಿಪಿ) ಮರಣೋತ್ತರ ಪರೀಕ್ಷೆಯ ಪ್ರಕಾರ ಎರಡೂ ಮೂತ್ರಪಿಂಡಗಳು ದೇಹದಲ್ಲಿ ಇದ್ದವು ಎಂದು ಹೇಳಿದ್ದಾರೆ.

ಜೂನ್ 28ರಂದು ತ್ರಿಪುರಾದಲ್ಲಿ ಕಳೆದ ಹತ್ತು ವರ್ಷಗಳಿಂದ ವ್ಯಾಪಾರ ಮಾಡುತ್ತಿರುವ ಮೂವರು ಮುಸ್ಲಿಂ ಬೀದಿ ಬದಿ ವ್ಯಾಪಾರಿಗಳ ಮೇಲೆ ಅವರು 'ಮಕ್ಕಳನ್ನು ಕದಿಯುವವರು' ಎಂದು ಹಲ್ಲೆ ಮಾಡಲಾಯಿತು. ಅವರಲ್ಲಿ ಒಬ್ಬರು ಕೊಲೆಯಾದರು, ಉಳಿದಿಬ್ಬರು ಗಂಭೀರವಾಗಿ ಗಾಯಗೊಂಡು ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು.

ಆನಂತರ ಸಿಪಿಐ(ಎಂ) ಮೇಲೆ ಹಿಂಸಾಚಾರ ಪ್ರಚೋದಿಸುತ್ತಿದ್ದಾರೆಂಬ ಸುಳ್ಳು ಆರೋಪ ಹಾಕಿ ಗುರುಯಿಡಲಾಗುತ್ತಿದೆ. ಆ ಪ್ರದೇಶದಲ್ಲಿ ಸಿಪಿಐ(ಎಂ) ಕಾರ್ಯಕರ್ತರ ಮನೆಗಳು ಮತ್ತು ಕಚೇರಿಗಳ ಮೇಲೆ ಹಲ್ಲೆ ಮಾಡಲಾಗಿದೆ, ಸಿಪಿಐ(ಎಂ) 'ದೈನಿಕ ಪತ್ರಿಕೆಯ ಒಬ್ಬ ವರದಿಗಾರರು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿದ್ದಾರೆ.

ಇದುವರೆಗೆ ನಾಲ್ಕು ಅಮಾಯಕ ಜೀವಗಳು ಕಳೆದುಹೋಗಿವೆ. ಬಿಜೆಪಿ ರಾಜ್ಯ ಸರಕಾರ 48 ಗಂಟೆಗಳ ಕಾಲ ಇಂಟರ್ನೆಟ್ ಮತ್ತು ಸಾಮಾಜಿಕ ಮಾಧ್ಯಮಗಳನ್ನು ತಡೆಯಿತು, ಹಿಂಸಾಚಾರದ ಹಲ್ಲೆಗಳ ಮಾಹಿತಿ ಜನಗಳಿಗೆ ತಲುಪದಂತೆ ಮಾಡಲು ಅದು ಈ ಕ್ರಮಕ್ಕೆ ಇಳಿಯಿತು.

ಇಂತಹ ಹಲ್ಲೆಗಳನ್ನು ತೀವ್ರಗೊಳಿಸಲಾಗುವುದು ಎಂಬ ಭೀತಿ ಹೆಚ್ಚುತ್ತಿದೆ. ಅಮಾಯಕ ಜನಗಳನ್ನು ರಕ್ಷಿಸುವುದು ಮತ್ತು ಅಪರಾಧಿಗಳನ್ನು ಶಿಕ್ಷಿಸುವುದು, ಆಮೂಲಕ ಕಾನೂನು ಮತ್ತು ಸುವ್ಯವಸ್ಥೆಯನ್ನು ಎತ್ತಿ ಹಿಡಿಯುವುದು ರಾಜ್ಯ ಸರಕಾರದ ಸಂವಿಧಾನಿಕ ಜವಾಬ್ದಾರಿ. ಇದರ ಬದಲು ಬಿಜೆಪಿ ರಾಜ್ಯ ಸರಕಾರ ಈ ಖಾಸಗಿ ಸೇನೆಗಳಿಗೆ ಪೋಷಣೆ ನೀಡುತ್ತಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯರೊ ಇದನ್ನು ಬಲವಾಗಿ ಖಂಡಿಸಿದೆ ಮತ್ತು ದೇಶಾದ್ಯಂತ ಪ್ರತಿಭಟನೆಗಳನ್ನು ಸಂಘಟಿಸಬೇಕು ಮತ್ತು ಆರೆಸ್ಸೆಸ್–ಬಿಜೆಪಿಯ ದುಷ್ಟ ಹುನ್ನಾರಗಳನ್ನು ಬಯಲಿಗೆಳೆಯಬೇಕು ಎಂದು ಪಕ್ಷದ ಘಟಕಗಳಿಗೆ ಕರೆ ನೀಡಿದೆ.

## ಶ್ರೀಮಂತ ಸುಸ್ತಿದಾರರನ್ನು ಪಾರುಮಾಡಲು ಎಲ್ಐಸಿ ದುರುಪಯೋಗವನ್ನು ನಿಲ್ಲಿಸಿ

ಸುಸ್ತಿಸಾಲಗಳಲ್ಲಿ ಅತ್ಯಂತ ಕೆಟ್ಟ ದಾಖಲೆ ಹೊಂದಿರುವ ಬ್ಯಾಂಕ್ ಐಡಿಬಿಐ ಯನ್ನು ಪಾರು ಮಾಡಬೇಕು ಎಂದು ಬಿಜೆಪಿ ಸರಕಾರವ ಭಾರತೀಯ ಜೀವ ವಿಮಾ ನಿಗಮ(ಎಲ್ಐಸಿ)ಕ್ಕೆ ಹೇಳಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಎಲ್ಐಸಿ ವಿಮಾ ಪಾಲಿಸಿಗಳ ಸ್ವರೂಪದಲ್ಲಿ ಜನಗಳ ಉಳಿತಾಯಗಳ ಭಂಡಾರ. ಈ ಬಂಡವಾಳವನ್ನು ಅತ್ಯಂತ ಕೆಟ್ಟ ಸುಸ್ತಿದಾರ ಬ್ಯಾಂಕನ್ನು ಪಾರು ಮಾಡಲು ಬಳಸುವುದು ಜನಗಳ ಉಳಿತಾಯಗಳ ಸಾರ್ವಜನಿಕ ಲೂಟಿಯೇ ಆಗುತ್ತದೆ. ಮೋದಿ ಸರಕಾರ ಶ್ರೀಮಂತ ಬಾಕಿದಾರರ ಹೆಸರುಗಳನ್ನು ಗುಟ್ಟಾಗಿಟ್ಟಿದೆ. ಆ ಬಾಕಿದಾರರಿಂದ ಸಾಲಗಳನ್ನು ವಸೂಲಿ ಮಾಡುವ ಬದಲು ಅವರನ್ನು ವಿಮಾಪಾಲಿಸಿಗಳಲ್ಲಿ ಇಟ್ಟಿರುವ ಹಣದಿಂದ ಪಾರು ಮಾಡಲಾಗುತ್ತಿದೆ ಎಂದು ಸಿಪಿಐ(ಎಂ) ಹೇಳಿದೆ.

ಎಲ್ಐಸಿ ಈ ರೀತಿ ವಹಿಸಿಕೊಳ್ಳಲು 13,000 ಕೋಟಿ ರೂ.ಗಳನ್ನು ಹೂಡುತ್ತಿದೆ. ಇದನ್ನು ಪಾಲಿಸಿದಾರರಿಗೆ ಒಂದು ಉತ್ತಮ ಪ್ರತಿಫಲ ನೀಡಲು ಹೂಡಬೇಕಾಗಿತ್ತು. ಅದರ ಬದಲಿಗೆ, ಬಾಕೀದಾರರನ್ನು ಪಾರು ಮಾಡಲು ಅದನ್ನು ಬಳಸಲಾಗುತ್ತಿದೆ. ಇದು ಅತ್ಯಂತ ಕೆಟ್ಟ ರೀತಿಯ ಚಮಚಾ ಬಂಡವಾಳಶಾಹಿ. ಶ್ರೀಮಂತರು ಲೂಟಿ ಮಾಡಿ ಪರಾರಿಯಾಗಬಹುದು, ಭಾರತದ ಜನಸಾಮಾನ್ಯ ಅವರ ಸಾಲಗಳನ್ನು ತನ್ನ ಉಳಿತಾಯದಿಂದ ರಕ್ಷಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವ್ಯಂಗ್ಯ ಮಾಡಿದೆ.

ಅಲ್ಲದೆ ಎಲ್ಐಸಿಗೆ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಪ್ರವೇಶಿಸಲು ಅವಕಾಶವಿಲ್ಲ. ಮೋದಿ ಸರಕಾರ ಇದ್ದಕ್ಕಿದ್ದಂತೆ ನಿಯಮಗಳಲ್ಲಿ ಬದಲಾವಣೆ ತರುತ್ತಿದೆ. ತಮ್ಮ ಸಾಲಗಳನ್ನು ತೀರಿಸದಿರುವ ಶ್ರೀಮಂತ ಸುಸ್ತಿದಾರರನ್ನು ಕಾಪಾಡಲು ಈ ಸರಕಾರ ನಿಯಂತ್ರಣ ವ್ಯವಸ್ಥೆಯನ್ನೇ ಧ್ವಂಸ ಮಾಡುತ್ತಿದೆ.

ಸರಕಾರ ಈ ನಿರ್ಧಾರವನ್ನು ರದ್ದು ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

## ಉಪರಾಜ್ಯಪಾಲರ ಪಾತ್ರದ ಬಗ್ಗೆ ಸುಪ್ರಿಂ ಕೋರ್ಟ್ ತೀರ್ಪು–ಒಕ್ಕೂಟತತ್ವದ ವಿಜಯ

ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರ ನೇತೃತ್ವದ ಐವರು ಸದಸ್ಯರಿರುವ ಸಂವಿಧಾನ ಪೀಠ ಚುನಾಯಿತ ರಾಜ್ಯ ಸರಕಾರಗಳ ಹಕ್ಕುಗಳನ್ನು ಎತ್ತಿ ಹಿಡಿದಿದೆ, ದಿಲ್ಲಿಯ ಉಪರಾಜ್ಯಪಾಲರು ಅದರ 'ಸಂವಿಧಾನಿಕ ಮುಖ್ಯಸ್ಥರು' ಎಂಬ ದಿಲ್ಲಿ ಹೈಕೋರ್ಟಿನ ನಿರ್ಧಾರವನ್ನು ಅದು ರದ್ದು ಮಾಡಿದೆ.

ಇದನ್ನು ಸ್ವಾಗತಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಉಪರಾಜ್ಯಪಾಲರು ಅಲ್ಲಿಯ ಚುನಾಯಿತ ದಿಲ್ಲಿ ಸರಕಾರದ ಮಂತ್ರಿಮಂಡಳದ ಸಲಹೆಗೆ ಬದ್ಧರಾಗಿರಬೇಕು ಎಂದು ಈಗ ಸರಿಯಾಗಿಯೇ ತೀರ್ಪಿತ್ತಿದೆ ಎಂದು ಹೇಳಿದೆ.

ಇಂದಿನ ತೀರ್ಪಿನಲ್ಲಿ ಉಪರಾಜ್ಯಪಾಲರುಗಳು ಮತ್ತು ರಾಜ್ಯಪಾಲರುಗಳ ಪಾತ್ರ ಮತ್ತು ಈ ಹುದ್ದೆಗಳ ದುರುಪಯೋಗದ ಬಗ್ಗೆ ತೀಕ್ಷ್ಣವಾದ ಗಮನ ಕೇಂದ್ರೀಕರಿಸಲಾಗಿದೆ. ಬಿಜೆಪಿ 'ಸಹಕಾರಿ ಒಕ್ಕೂಟತತ್ವ' ಎಂಬ ಪದಪುಂಜಗಳ ಮರೆಯಲ್ಲಿ ಮಾಡುತ್ತಿರುವ ನಟನೆ ವಾಸ್ತವವಾಗಿ ನಮ್ಮ ಒಕ್ಕೂಟ ರಚನೆಯನ್ನು ಧ್ವಂಸ ಮಾಡುತ್ತಿದೆ ಎಂದು ಪೊಲಿಟ್‌ಬ್ಯುರೊ ಅಭಿಪ್ರಾಯಪಟ್ಟಿದೆ.

ರಾಜ್ಯಪಾಲರುಗಳು ಮತ್ತು ಉಪರಾಜ್ಯಪಾಲರುಗಳು ಒಂದು ಚುನಾಯಿತ ರಾಜ್ಯಸರಕಾರದ ಅಧಿಕಾರಗಳನ್ನು ಕಸಿದುಕೊಳ್ಳಲು ಅಥವ ಅದರ ಹಕ್ಕುಗಳ ಅತಿಕ್ರಮಣ ಮಾಡುವುದು ಸಾಧ್ಯವಿಲ್ಲ ಎಂದು ಹೇಳಿರುವ ಸುಪ್ರಿಂ ಕೋರ್ಟ್ ತೀರ್ಪನ್ನು ಸ್ವಾಗತಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದು ಒಕ್ಕೂಟ ತತ್ವದ ವಿಜಯ ಎಂದು ವರ್ಣಿಸಿದೆ.

## ಯು.ಜಿ.ಸಿ.ಯನ್ನು ಕಳಚಿ ಹಾಕುವ ಅವಿವೇಕವನ್ನು ನಿಲ್ಲಿಸಿ

ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ)ವನ್ನು ಕಳಚಿ ಹಾಕಿ ಅದರ ಸ್ಥಾನದಲ್ಲಿ 'ಭಾರತದ ಉನ್ನತ ಶಿಕ್ಷಣ ಆಯೋಗ' ರಚಿಸುವ ಕೇಂದ್ರ ಸರಕಾರದ ಪ್ರಸ್ತಾವವನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ದೃಢವಾಗಿ ವಿರೋಧಿಸುವುದಾಗಿ ಹೇಳಿದೆ.

ಈ ಕುರಿತ ಮಸೂದೆಯನ್ನು ಆತುರಾತುರವಾಗಿ ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ಪಾಸು ಮಾಡಿಸಿ ಕೊಳ್ಳಬಯಸುವಂತೆ ಕಾಣುತ್ತದೆ. ಏಕೆಂದರೆ ಈ ಬಗ್ಗೆ ಚರ್ಚೆಗೆ ಮತ್ತು ಮಾಹಿತಿಗಳನ್ನು ಕೊಡಲು ಕೇವಲ ಹತ್ತು ದಿನಗಳನ್ನು ಕೊಡಲಾಗಿದೆ. 'ಕನಿಷ್ಟ ಸರಕಾರ, ಗರಿಷ್ಟ ಆಳ್ವಿಕೆ' ಎಂಬ ಪದಪುಂಜಗಳನ್ನು ಮತ್ತೆ–ಮತ್ತೆ ಬಳಸುತ್ತಿದ್ದರೂ ಈ ಕರಡು ಮಾತ್ರ ಅನುದಾನಗಳ ವಿತರಣೆಯ ಅಧಿಕಾರವನ್ನು ಕೇಂದ್ರ ಸರಕಾರದಲ್ಲೇ ಮತ್ತಷ್ಟು ಕೇಂದ್ರೀಕರಿಸುವ ಪ್ರಸ್ತಾವನೆಯನ್ನು ಹೊಂದಿದೆ. ಇದರಲ್ಲಿ ಅಡಕವಾಗಿರುವ ಶೈಕ್ಷಣಿಕ ಪ್ರಕ್ರಿಯೆಗೆ ಏನೇನೂ ಸಂಬಂಧವಿಲ್ಲದಂತಹ ಫಲಿತಾಂಶಗಳತ್ತ ಪಲ್ಲಟದ ಮೂಲಕ ವಿಪರೀತ ನಿಯಂತ್ರಣದ ಮೇಲೆ ಒತ್ತು ನೀಡಲಾಗಿದೆ. ಇದು ತಲೆಗೆಲ್ಲಾ ಒಂದೇ ಮಂತ್ರ ಎಂಬ ನಿಲುವನ್ನು ಅನುಸರಿಸಿ ಶಿಕ್ಷಣದ ಮತ್ತಷ್ಟು ವ್ಯಾಪಾರೀಕರಣದ ಗುರಿ ಹೊಂದಿರುವ ಪ್ರಯತ್ನವೂ ಆಗಿದೆ ಎಂದು ಪೊಲಿಟ್‌ಬ್ಯುರೊ ವಿಶ್ಲೇಷಿಸಿದೆ.

ಈಗಿರುವ ಯುಜಿಸಿಯಲ್ಲಿ ಬಹಳಷ್ಟು ಮಿತಿಗಳಿದ್ದರೂ ಶಿಕ್ಷಣ ಕ್ಷೇತ್ರದಲ್ಲಿರುವವರಿಗೆ ಸ್ವಲ್ಪ ಮಟ್ಟಿನ ಸ್ವಾಯತ್ತತೆ ಇತ್ತು; ಆದರೆ ಪ್ರಸ್ತಾವಿತ ಶಾಸನದಲ್ಲಿ ಅದನ್ನೂ ಕಳಚಿ ಹಾಕಿ, ಸಂಪೂರ್ಣ ಪ್ರಕ್ರಿಯೆಯನ್ನು ಅಧಿಕಾರಶಾಹಿಗಳು ಮತ್ತು ಸರಕಾರದ ಯಜಮಾನರುಗಳೇ ವಹಿಸಿಕೊಳ್ಳುತ್ತಾರೆ.

ದೇಶಕ್ಕೆ ಇಷ್ಟೊಂದು ಪ್ರಾಮುಖ್ಯತೆಯುಳ್ಳ ಒಂದು ಪ್ರಯತ್ನವನ್ನು ಇಂತಹ ಯೋಚನೆಯಿಲ್ಲದ ವೇಗದಲ್ಲಿ ತರಾತುರಿಯಿಂದ ನಡೆಸಲು ಸಾಧ್ಯವಿಲ್ಲ. ಈ ದೇಶದಲ್ಲಿ ಉನ್ನತ ಶಿಕ್ಷಣದ ಭವಿಷ್ಯದೊಂದಿಗೆ ನೇರ ಸಂಬಂಧವಿರುವ ಹಲವಾರು ಸಂಘಟನೆಗಳು ಆಗ್ರಹಿಸಿರುವಂತೆ ಈ ಮಸೂದೆಯನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

## 'ಮಕ್ಕಳ ಕಳವು' ಹೆಸರಲ್ಲಿ ವಿವೇಕಹೀನ ಹಿಂಸಾಚಾರ ನಿಲ್ಲಲಿ

ದೇಶದ ಹಲವೆಡೆಗಳಿಂದ 'ಮಕ್ಕಳನ್ನು ಕದಿಯುವವರು' ಎಂಬ ಹೆಸರಲ್ಲಿ ಹೆಚ್ಚುತ್ತಿರುವ ಹಿಂಸಾಚಾರದ ವರದಿಗಳು ಬರುತ್ತಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೋ ಗಂಭೀರ ಆತಂಕ ವ್ಯಕ್ತಪಡಿಸಿದೆ.

ಬಿಜೆಪಿಯ ಕೇಂದ್ರ ಸರಕಾರ ಮತ್ತು ರಾಜ್ಯಸರಕಾರಗಳು ಸಂವಿಧಾನ ವಿಧಿಸಿರುವಂತೆ ಕಾನೂನು ಮತ್ತು ಸುವ್ಯವಸ್ಥೆಯ ಮಟ್ಟವನ್ನು ಕಾಯ್ದುಕೊಳ್ಳುತ್ತಿಲ್ಲ ಎಂಬುದು ಸ್ಪಷ್ಟ. ಇದೇ ದೇಶಾದ್ಯಂತ ದ್ವೇಷದ ವಾತಾವರಣವನ್ನು, ಹಿಂಸಾಚಾರವನ್ನು ಹರಡಿಸುವ ಹಾಗೂ ಸಾಮೂಹಿಕ ಸನ್ನಿಯನ್ನು ಬಡಿದೆಬ್ಬಿಸುವ ಖಾಸಗಿ ಸೇನೆಗಳಿಗೆ ಪ್ರೋತ್ಸಾಹ ಹಾಗೂ ಪೋಷಣೆಯನ್ನು ಕೊಡುತ್ತಿದೆ. ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ನಡೆದಿರುವ ಆಘಾತಕಾರಿ ಘಟನೆ ಬಿಜೆಪಿ ಸರಕಾರಗಳ ಅಡಿಯಲ್ಲಿ ನಮ್ಮ ಸಮಾಜ ಎಷ್ಟೊಂದು ಪ್ರಮಾಣದಲ್ಲಿ ಮಾನವೀಯತೆಯನ್ನು ಕಳಕೊಳ್ಳುತ್ತಿದೆ ಎಂಬುದನ್ನು ಪ್ರದರ್ಶಿಸಿದೆ ಎಂದು ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳು ಅಪರಾಧಿಗಳನ್ನು ಶಿಕ್ಷಿಸಿ ಈ ರೀತಿಯ ಕಾನೂನುಹೀನತೆ ಮತ್ತು ಅರಾಜಕತೆಯ ಬೆಳವಣಿಗೆಯನ್ನು ಕೊನೆಗೊಳಿಸುವಂತೆ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ.

ಸಂಪಾದಕೀಯ

# ಉಳ್ಳವರಿಗೆ ಸಾಲಮನ್ನಾ, ಬಡವರಿಗೆ ಬರೆ

ಬಹು ನಿರೀಕ್ಷಿತ ಮತ್ತು ಬಹು ವಿವಾದಿತವಾಗಿದ್ದ ಮೈತ್ರಿ ಸರಕಾರದ ಮೊದಲ ಬಜೆಟ್ ಮಂಡಿತವಾಗಿದೆ. ನಿರೀಕ್ಷಿಸಿದಂತೆ ರೈತರ ಸಾಲಮನ್ನಾಕ್ಕೆ ಅತ್ಯಂತ ಹೆಚ್ಚಿನ ಆದ್ಯತೆ ಕೊಡಲಾಗಿದೆ. ಸತತ ಬರ, ತೀವ್ರ ಕೃಷಿ ಬಿಕ್ಕಟ್ಟು ಮತ್ತು ರೈತರ ಆತ್ಮಹತ್ಯೆಗಳ ಹಿನ್ನೆಲೆಯಲ್ಲಿ ಅದು ಸರಿಯಾಗೇ ಇತ್ತು. ಆದರೆ ಚುನಾವಣೆಯ ಭರದಲ್ಲಿ ನೀಡಿದ ಎಲ್ಲಾ ರೈತರ ಎಲ್ಲಾ ಸಾಲಗಳನ್ನು ಮನ್ನಾ ಮಾಡಲಾಗುತ್ತದೆ ಎಂಬ ಆಶ್ವಾಸನೆಗೆ ಹಲವು 'ಷರತ್ತುಗಳು ಅನ್ವಯವಾಗಿವೆ". ರಾಷ್ಟ್ರೀಕೃತ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು, ಪ್ರಾಥಮಿಕ ಸಹಕಾರ ಪತ್ತಿನ ಸಂಘಗಳು, ಕೃಷಿ ಸೇವಾ ಸಹಕಾರ ಸಂಘಗಳ ಬೆಳೆ ಸಾಲ ಮತ್ತು ಕಿಸಾನ್ ಕ್ರೆಡಿಟ್ ಕಾರ್ಡ್‌ಗಳ ಒಟ್ಟು ರೂ. 2 ಲಕ್ಷ ವರೆಗಿನ ಬೆಳೆಸಾಲಗಳಲ್ಲಿ ಸುಸ್ತಿಸಾಲಗಳನ್ನು ಸಾಲಮನ್ನಾ ಯೋಜನೆ ವ್ಯಾಪ್ತಿಯೊಳಗೆ ತರಲಾಗಿದೆ. ಇತರ ಹಲವು (ಒಟ್ಟು ಆದಾಯ ರೂ. 4 ಲಕ್ಷ, ತೆರಿಗೆ ಪಾವತಿದಾರ ಇತ್ಯಾದಿ) ಷರತ್ತುಗಳನ್ನೂ ವಿಧಿಸಲಾಗಿದೆ. ಹಲವು ಷರತ್ತುಗಳು ಸರಿಯಾಗೇ ಇವೆ. ಇದಕ್ಕೆ ಒಟ್ಟು 34 ಸಾವಿರ ಕೋಟಿ ರೂ. ವೆಚ್ಚವಾಗಲಿದೆ.

ಆದರೆ ಈ ಪತ್ರಿಕೆಯಲ್ಲಿ ಹಲವು ಬಾರಿ ಹಿಂದೆ ವಿಶ್ಲೇಷಿಸಿರುವಂತೆ ಈವರೆಗೆ ಕೇಂದ್ರ ಮತ್ತು ರಾಜ್ಯಗಳಲ್ಲಿ ಮಾಡಿರುವ ಸಾಲಮನ್ನಾದ ವಿಧಾನ ಕೃಷಿ ಬಿಕ್ಕಟ್ಟು ನಿವಾರಿಸಲಾಗಲಿ, ರೈತರ ಆತ್ಮಹತ್ಯೆ ತಡೆಗಟ್ಟಲಾಗಲಿ ಪ್ರಯೋಜನಕಾರಿಯಾಗುವುದಿಲ್ಲ. ಇದು ಪ್ರಯೋಜನವಾಗುವುದು ಸುಮಾರು ಶೇ.15 ರಷ್ಟು ಇರುವ ಶ್ರೀಮಂತ ಮತ್ತು ಉಚ್ಚ ಮಧ್ಯಮ ರೈತರಿಗೆ ಮಾತ್ರ. ಏಕೆಂದರೆ ಅವರಿಗೆ ಮಾತ್ರ ಮೇಲೆ ಹೇಳಿದ ವಿವಿಧ ಸಂಸ್ಥೆಗಳಿಂದ ಸಾಲ ಸಿಗುವುದು. ಬಡ–ಮಧ್ಯಮ ರೈತರ ಆತ್ಮಹತ್ಯೆಗಳಿಗೆ ನೇರವಾಗಿ ಕಾರಣವಾಗುವ ಕೃಷಿಯೇತರ ಮತ್ತು ಖಾಸಗಿ ಲೇವಾದೇವಿಗಾರರ ಸಾಲಗಳನ್ನು ಒಂದು ಬಾರಿಯಾದರೂ ಕೇರಳದಲ್ಲಿ ಮಾಡಿದಂತೆ ಋಣಮುಕ್ತ ಕಮಿಶನ್ ಮೂಲಕ ಸಮಗ್ರವಾಗಿ ಮನ್ನಾ ಮಾಡದೆ ಬೇರೆ ಯಾವುದೇ ಪರಿಹಾರ ಇದಕ್ಕಿಲ್ಲ. ಅಲ್ಲದೆ ಕೃಷಿ ಲಾಗುವಾಡುಗಳ ಬೆಲೆ ನಿಯಂತ್ರಿಸದೆ, ವೆಚ್ಚದ ಒಂದುವರೆ ಪಟ್ಟು ಬೆಂಬಲ ಬೆಲೆಯನ್ನು ಸ್ವಾಮಿನಾಥನ್ ಕಮಿಶನ್ ಶಿಫಾರಸು ಮಾಡಿದಂತೆ ಕಾನೂನುಬದ್ಧವಾಗಿ ಜಾರಿ ಮಾಡದೆ ಕೃಷಿಯ ಬಿಕ್ಕಟ್ಟು ಪರಿಹಾರವಾಗುವುದಿಲ್ಲ. ಮೈತ್ರಿ ಸರಕಾರದ ಸಾಲಮನ್ನಾ ಸಹ ಕಾಂಗ್ರೆಸ್–ಜೆಡಿ(ಎಸ್)ಗಳ ವರ್ಗನೆಲೆಯಾದ ಗ್ರಾಮೀಣ ಪಟ್ಟಭದ್ರರಿಗೆ ಅನುಕೂಲವಾಗುವ ರೀತಿಯಲ್ಲಿ ಮಾತ್ರ ಇದೆಯೆಂಬುದು ಅನಿರೀಕ್ಷಿತವೇನಲ್ಲ. ಸಾಲದ್ದಕ್ಕೆ ತೆರಿಗೆ ಬಾಕಿ ಉಳಿಸಿಕೊಂಡವರಿಗೆ ಶೇ 100 ದಂಡ ಮತ್ತು ಬಡ್ಡಿ ರಿಯಾಯಿತಿ ಘೋಷಿಸಿ ನಗರಗಳ ಶ್ರೀಮಂತರಿಗೆ ನೆರವು ನೀಡಿದೆ.

ಗ್ರಾಮೀಣ ಪಟ್ಟಭದ್ರರ ಸಾಲಮನ್ನಾ ಮತ್ತು ಇತರ ಶ್ರೀಮಂತ ತೆರಿಗೆಗಳ್ಳರಿಗೆ ಅನುಕೂಲ ಮಾಡಿಕೊಡುವ ಯೋಜನೆಯ ವೆಚ್ಚಕ್ಕೆ ಬೇಕಾದ ಸಾಲದ ಹೊರೆಯನ್ನು ರಾಜ್ಯದ ಸಾಮಾನ್ಯ ಜನತೆ ಮತ್ತು ಬಡವರು ಹೊರಬೇಕಾಗಿದೆ. ಈ ಬಜೆಟಿನ ಆದಾಯದ ಶೇ. 21 ರಷ್ಟು (ಸುಮಾರು 47,134 ಕೋಟಿ ರೂ.) ಸಾರ್ವಜನಿಕ ಸಾಲದ ಮೇಲೆ ಆಧಾರಿತವಾಗಿದೆ. ಬಜೆಟ್ ವೆಚ್ಚದಲ್ಲಿ ಶೇ. 13 ಸಾಲ ತೀರಿಕೆಗೆ ಹೋಗುತ್ತದೆ. ಸಾಲದ್ದಕ್ಕೆ ಸಾಲಮನ್ನಾ ಮತ್ತಿತರ ವೆಚ್ಚಗಳ ಹೊರೆಯನ್ನು ಸಾಮಾನ್ಯ ಜನತೆ ಮತ್ತು ಬಡವರ ಮೇಲೆ ತೆರಿಗೆ ಹೊರಿಸುವ ಮೂಲಕ ಭರಿಸಲಾಗುತ್ತಿದೆ. ರೈತರ ಸಾಲಮನ್ನಾಕ್ಕಾಗಿ ಎಲ್ಲರೂ 'ತ್ಯಾಗ' ಮಾಡಿ ಈ ಹೊರೆ ಹೊರಬೇಕು ಎಂದು ಸರಕಾರ ಮತ್ತು ಅದರ ಬೆಂಬಲಿಗರು ವಾದಿಸುತ್ತಿದ್ದಾರೆ. ಆದರೆ ನಾವು ಈಗಾಗಲೇ ನೋಡಿದ ಹಾಗೆ ಈ ಹೊರೆ ಕೊನೆಗೆ ಬೀಳುವುದು ಸಾಲಮನ್ನಾದ ಯಾವುದೇ ಪ್ರಯೋಜನ ಸಿಗದ ಬಡ–ಮಧ್ಯಮ ರೈತರು ಮತ್ತು ಇತರ ಬಡವರ ಮೇಲೆನೇ.

ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ಶೇ.2 ರಷ್ಟು (ಪೆಟ್ರೋಲಿಗೆ ಶೇ. 30ರಿಂದ 32ಕ್ಕೆ, ಡೀಸೆಲಿಗೆ ಶೇ. 19ರಿಂದ 21ಕ್ಕೆ) ಏರಿಸಲಾಗಿದ್ದು, ಅವುಗಳ ಬೆಲೆ ಅನುಕ್ರಮವಾಗಿ ಪ್ರತಿ ಲೀಟರಿಗೆ ರೂ. 1.14 ಮತ್ತು 1.12 ರಷ್ಟು ಏರಲಿದೆ. ಇವುಗಳಿಂದ ಎಲ್ಲರೂ ಬಳಸುವ ಖಾಸಗಿ/ಸಾರ್ವಜನಿಕ ಸಾರಿಗೆ ದುಬಾರಿಯಾಗುವುದಲ್ಲದೆ, ರೈತನ ಬೆಳೆಯ ವೆಚ್ಚ ಸಹ ಏರುವುದು. ಇದಲ್ಲದೆ ಸಾರಿಗೆ ವೆಚ್ಚ ಏರಿದಂತೆ ಎಲ್ಲಾ ಬಳಕೆಯ ವಸ್ತುಗಳ ಬೆಲೆ ಏರಿಕೆಯಾಗುವುದು ಎಲ್ಲರಿಗೂ ತಿಳಿದ ಸಂಗತಿ. ಇತ್ತೀಚಿಗಷ್ಟೇ ಏರಿಸಲಾಗಿದ್ದ ಗೃಹಬಳಕೆಯ ವಿದ್ಯುತ್ ಮೇಲಿನ ತೆರಿಗೆಯನ್ನು ಪ್ರತಿ ಯುನಿಟಿಗೆ 10 ಪೈಸೆಯಿಂದ ಇಮ್ಮಡಿಗೊಳಿಸಿ 20 ಪೈಸೆ ಮಾಡಲಾಗಿದೆ. ಈ ಹೆಚ್ಚಳದಿಂದಲೂ ಅಷ್ಟೇ ಮನೆ ನಿರ್ವಹಿಸುವ ವೆಚ್ಚವಲ್ಲದೆ ರೈತನ ಬೆಳೆಯ ವೆಚ್ಚ ಸಹ ಏರುವುದು. ಇದಲ್ಲದೆ ಖಾಸಗಿ ಸೇವಾ ವಾಹನ ತೆರಿಗೆಯನ್ನು ಶೇ. 50ರಷ್ಟು ಹೆಚ್ಚಿಸಲಾಗಿದೆ. ಇದನ್ನು ಸಾರಿಗೆದಾರರು ಬಳಕೆದಾರ ಮತ್ತು ವ್ಯಾಪಾರಿಗಳ ಮೇಲೆ ವರ್ಗಾಯಿಸುತ್ತಾರೆ. ವ್ಯಾಪಾರಿಗಳು ಬಳಕೆ ವಸ್ತುಗಳ ಬೆಲೆ ಏರಿಸುತ್ತಾರೆ. ಇದರ ಜತೆಗೆ ಅನ್ನಭಾಗ್ಯದ ಭಾಗವಾಗಿದ್ದ 7 ಕೆಜಿ ಅಕ್ಕಿಯನ್ನು 5 ಕೆಜಿಗೆ ಇಳಿಸಲಾಗಿದೆ. ಈ ಕಡಿತವೂ ಸಾಲಮನ್ನಾದ ಹತ್ತಿರವೂ ಸುಳಿಯದ ಬಡವರ ಸವಲತ್ತು ಕಸಿಯುವಂತಹುದು. ಮದ್ಯದ ಮೇಲಿನ ಅಬಕಾರಿ ಸುಂಕದ ದರವನ್ನೂ ಏರಿಸಲಾಗಿದೆ. ಮದ್ಯ ಬಿಟ್ಟರೆ ಉಳಿದ ನಾಲ್ಕೂ ತೆರಿಗೆ ಏರಿಕೆಗಳೂ ಬಡ–ಮಧ್ಯಮ ರೈತರ ಮೇಲೆ ಹೊರೆಯಾಗಲಿವೆ ಎಂಬುದು ಸ್ಪಷ್ಟ. ಬಜೆಟಿನ ವರ್ಗಸ್ವರೂಪ ಇದರಿಂದ ಸ್ಪಷ್ಟವಾಗುತ್ತದೆ. ಬಜೆಟಿನ ಸಾಲಮನ್ನಾ ಮತ್ತು ಅದಕ್ಕಾಗಿ ತೆರಿಗೆ ಏರಿಕೆಯ ಪ್ರಸ್ತಾವಗಳನ್ನು ನೋಡಿದರೆ "ಉಳ್ಳವರಿಗೆ ಸಾಲಮನ್ನಾ ಮಾಡಲು ಬಡವರಿಗೆ ಬರೆ ಎಳೆದಿರುವುದು" ಸ್ಪಷ್ಟ. ಈ ತೆರಿಗೆ ಪ್ರಸ್ತಾವಗಳನ್ನು ತಕ್ಷಣ ವಾಪಸು ತೆಗೆದುಕೊಳ್ಳಬೇಕು.

ಬಜೆಟಿನ ಪ್ರಕಾರ ಒಂದು ಕಿಲೋ ಮೀಟರ್ ವ್ಯಾಪ್ತಿಯಲ್ಲಿರುವ ಮತ್ತು ಕಡಿಮೆ ದಾಖಲಾತಿ ಹೊಂದಿರುವ 28,847 ಸರ್ಕಾರಿ ಮತ್ತು ಅನುದಾನಿತ ಶಾಲೆಗಳನ್ನು ಸಮೀಪದ 8,530 ಶಾಲೆಗಳೊಂದಿಗೆ ವಿಲೀನಗೊಳಿಸಲು ಸರ್ಕಾರ ಮುಂದಾಗಿದೆ. ಶಾಲೆಗಳ ವಿಲೀನ ಕುರಿತಂತೆ ಈ ಮೊದಲು ಕೂಡ ಹಲವು ಬಾರಿ ಪ್ರಯತ್ನಗಳು ನಡೆದಿದ್ದವು. ಆದರೆ, ಈ ಪ್ರಸ್ತಾವವನ್ನು ಪೋಷಕರು, ಶಿಕ್ಷಕರ ಒತ್ತಾಯದ ಮೇರೆಗೆ ಹಿಂದಿನ ಸರ್ಕಾರಗಳು ಕೈಬಿಟ್ಟಿದ್ದವು. ರಾಜ್ಯದಲ್ಲಿ 43,712 ಸರ್ಕಾರಿ ಪ್ರಾಥಮಿಕ ಶಾಲೆಗಳಿದ್ದು, 78 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರಿದ್ದಾರೆ. ಸರಕಾರದ ಈ ಪ್ರಸ್ತಾವ ಒಬ್ಬ ಶಿಕ್ಷಣ ಪರಿಣತ ಹೇಳಿದಂತೆ "ಆತ್ಮಹತ್ಯೆಯ ಪ್ರಸ್ತಾವ" ಇದ್ದಂತಿದೆ. ಇದನ್ನೂ ತಕ್ಷಣ ವಾಪಸು ತೆಗೆದುಕೊಳ್ಳಬೇಕು. ಇದೇ ಅವಧಿಯಲ್ಲಿ 1000 ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ಪ್ರಾಯೋಗಿಕವಾಗಿ ಆರಂಭಿಸುತ್ತಿದೆ. ಇದೂ ಪ್ರಶ್ನಾರ್ಹ ಪ್ರಸ್ತಾವವೇ. ಏಕೆಂದರೆ ಮಕ್ಕಳನ್ನು ಖಾಸಗಿ ಶಾಲೆಗಳಿಂದ ಸರಕಾರಿ ಶಾಲೆಗಳಿಗೆ ಆಕರ್ಷಿಸಲು ಇಂಗ್ಲಿಷ್ ಮಾಧ್ಯಮ ಅಗತ್ಯವೆಂದು ಹೇಳಲಾಗುತ್ತಿದೆ. ಸರಕಾರಿ ಶಾಲೆಗಳ ಮೂಲ ಸೌಕರ್ಯ ಒದಗಿಸಲು, ಕಲಿಕೆಯ ಗುಣಮಟ್ಟ ಏರಿಸಲು ಬೇಕಾದ ಕ್ರಮ ವಹಿಸಲು ಹಾಗೂ ಸಮಾನ ಗುಣಮಟ್ಟದ ಶಿಕ್ಷಣ ವ್ಯವಸ್ಥೆ ಜಾರಿಗೊಳಿಸಲು ರಾಜಕೀಯ ಬದ್ಧತೆಯ ಅಭಾವವೇ ಸರಕಾರಿ ಶಾಲೆಗಳು ಮುಚ್ಚಲು ಕಾರಣ. ಇದು ಆಳುವ ಪಕ್ಷಗಳ ಖಾಸಗಿ ಶಾಲಾ ಲಾಬಿಯ ಒತ್ತಡದಿಂದಲೂ ಆಗುತ್ತಿದೆ. ಆದ್ದರಿಂದ ವಿಲೀನ, ಇಂಗ್ಲಿಷ್ ಮಾಧ್ಯಮ ಇತ್ಯಾದಿಗಳು ಇದ್ದ ಬದ್ದ ಸಮಾನ ಗುಣಮಟ್ಟದ ಶಿಕ್ಷಣ ವ್ಯವಸ್ಥೆ ಕಳಚಿ ಹಾಕಿ ಖಾಸಗೀಕರಿಸುವ ಹುನ್ನಾರದ ಭಾಗವೇ ಎಂದು ಗ್ರಹಿಸಬೇಕಾಗುತ್ತದೆ.


ಪೂರ್ಣ ಅಥವಾ ಪೂರಕ ಬಜೆಟ್ ಎಂಬ ಮೈತ್ರಿ ಸರಕಾರದ ಒಳಗಿನ ಚರ್ಚೆಯ ಹಿನ್ನೆಲೆಯಲ್ಲಿ ಸಿದ್ಧರಾಮಯ್ಯ ಮಂಡಿಸಿದ ಬಜೆಟಿನ ಎಲ್ಲಾ ಜನಪರ ಯೋಜನೆಗಳನ್ನು ಮುಂದುವರೆಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಆದರೆ ರಾಜ್ಯಾದ್ಯಂತ ಪ್ರಗತಿಪರ ವಿದ್ಯಾರ್ಥಿಗಳ ಚಳುವಳಿ ನಂತರ ಸಿದ್ಧರಾಮಯ್ಯ ತಮ್ಮ ಬಜೆಟಿನಲ್ಲಿ ಘೋಷಿಸಿದ್ದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಬಗ್ಗೆ ಬಜೆಟಿನಲ್ಲಿ ಪ್ರಸ್ತಾಪವಿಲ್ಲ. ಇತ್ತ ಕಡೆ ಕೆ.ಎಸ್.ಆರ್.ಟಿ.ಸಿ. ಅದನ್ನು ಜಾರಿ ಮಾಡಲು ನಿರಾಕರಿಸುತ್ತಿದೆ.

ಹಲವು ಹೊಸ ಯೋಜನೆಗಳನ್ನು ಘೋಷಿಸಲಾಗಿದೆ. ಇಲಾಖಾವಾರು, ಕ್ಷೇತ್ರವಾರು ಅನುದಾನಗಳನ್ನು ಕೊಡಲಾಗಿದೆ. ಇವುಗಳನ್ನು ಒಟ್ಟಾಗಿ ಪರಿಶೀಲಿಸಿದಾಗ ಈಗಾಗಲೇ ಅಭಿವೃದ್ಧಿ ಸಾಧಿಸಿರುವ ದಕ್ಷಿಣ ಕರ್ನಾಟಕ (ಅಥವಾ ಹಳೆಯ ಮೈಸೂರು ಪ್ರದೇಶ) ಸಿಂಹಪಾಲು ಪಡೆದಿದೆ. ಇದು ಜೆಡಿ–ಎಸ್ ಪ್ರಬಲವಾಗಿರುವ ಪ್ರದೇಶವೂ ಹೌದು. ಅದೇ ರೀತಿ ಕೆಲವು ಇಲಾಖೆ ಕ್ಷೇತ್ರಗಳಿಗೆ ಹಿಂದಿನ ಬಜೆಟಿಗಿಂತ ಹೆಚ್ಚಿನ ಅನುದಾನ ಸಿಕ್ಕಿದೆ ಎಂಬ ಆಪಾದನೆಗಳನ್ನು ಬಿಜೆಪಿ ಮಾಡಿದೆ. ಬಿಜೆಪಿ ಇನ್ನೂ ಮುಂದೆ ಹೋಗಿ ಇದು ಅಣ್ಣ–ತಮ್ಮ ಬಜೆಟ್ ಎಂದಿದೆ. ಇಂತಹುದೇ ಕೆಲವೊಮ್ಮೆ ಮೆಲುದನಿಯ ಕೆಲವೊಮ್ಮೆ ಆಕ್ರೋಶದ ಆಪಾದನೆ ಕಾಂಗ್ರೆಸ್ ಶಾಸಕರಿಂದಲೂ ಬಂದಿದೆ. ಮೇಲುನೋಟಕ್ಕೆ ಹಲವು ಅನುದಾನ ಯೋಜನೆಗಳಲ್ಲಿ ಪ್ರಾದೇಶಿಕ ಅಸಮಾನತೆ ಮತ್ತು ಇಲಾಖಾ–ಕ್ಷೇತ್ರವಾರು ಏರುಪೇರು ಇರುವುದು ನಿಜವೆಂದು ಕಂಡು ಬಂದಿದೆ. ಇದನ್ನು ಮುಖ್ಯಮಂತ್ರಿ ಪರಿಶೀಲಿಸಿ ಸರಿಪಡಿಸಬೇಕಾಗಿದೆ.

ರಾಜ್ಯದಲ್ಲಿ ವಿವಿಧ ಸರಕುಗಳ ಬಿಡಿಭಾಗ ತಯಾರಿಕಾ ಘಟಕ ಸ್ಥಾಪಿಸುವ ಯೋಜನೆ ಹೊಸ ಐಡಿಯಾ ಇದ್ದಂತಿದೆ. ಹಳ್ಳಿಗಳಲ್ಲಿ ಬಿಡಿಭಾಗಗಳ ತಯಾರಿಕೆ, ತಾಲ್ಲೂಕು ಮಟ್ಟದಲ್ಲಿ ಜೋಡಣೆ ಮತ್ತು ಈ ಉತ್ಪನ್ನಗಳಿಗೆ ರಾಜ್ಯದಾದ್ಯಂತ ಮಾರುಕಟ್ಟೆ ವಿಸ್ತರಿಸುವ ಈ ವಿಕೇಂದ್ರೀಕೃತ ಕೈಗಾರೀಕರಣ ಆಲೋಚನೆಯನ್ನು ಸಮರ್ಪಕವಾಗಿ ಜಾರಿಗೆ ತಂದರೆ ರಾಜ್ಯದ ಅರ್ಥ ವ್ಯವಸ್ಥೆಯ ಚಿತ್ರಣ ಬದಲಾಗಬಹುದು. ಆದರೆ ಇದಕ್ಕೂ ಹೂಡಿಕೆಗೆ ನಿರ್ವಹಣೆಗೆ ಖಾಸಗಿ ವಿದೇಶಿ ಉದ್ಯಮಿಗಳನ್ನು ನೆಚ್ಚುವುದಾದರೆ ಮಾತ್ರ ಇದು ಸಾಧ್ಯವಾಗಲಿಕ್ಕಿಲ್ಲ. ಸರ್ಕಾರಿ ಒಡೆತನದಲ್ಲಿ ಇರುವ ಲಾಭದಾಯಕ ಉದ್ದಿಮೆಗಳನ್ನು ಷೇರುಪೇಟೆಗೆ ಕೊಂಡೊಯ್ಯುವ ಪ್ರಯತ್ನ ಬಿಟ್ಟರೆ, ಹೊಸ ಸಾರ್ವಜನಿಕ ವಲಯದ ಉದ್ಯಮದ ಬಗ್ಗೆ ಯಾವುದೇ ಪ್ರಸ್ತಾವ ಇಲ್ಲ. ಖಾಸಗಿ ಮತ್ತು ವಿದೇಶೀ ಬಂಡವಾಳವನ್ನು ನೆಚ್ಚಿ ಮೆಚ್ಚಿಸಿ ಕೈಗಾರಿಕೀಕರಣ ಸಾಧಿಸಬಹುದು ಎಂಬುದ ಆಗದ ಮಾತು.

ಅದೇ ರೀತಿ ಬೆಂಗಳೂರು ನಗರಕ್ಕೆ ಹಲವು ಕಾಮಗಾರಿಗಳನ್ನು ಮಾತ್ರ ಯೋಜಿಸಲಾಗಿದ್ದು ಸಾರಿಗೆ, ತ್ಯಾಜ್ಯ ನಿರ್ವಹಣೆ, ಕೆರೆ ಮತ್ತಿತರ ನೀರಿನ ಮೂಲಗಳ ರಕ್ಷಣೆ, ಪರಿಸರ ಮಾಲಿನ್ಯ ಮುಂತಾದ ಸಮಸ್ಯೆಗಳನ್ನು (ಅವು ತೀವ್ರ ಬಿಕ್ಕಟ್ಟಿನ ಸ್ವರೂಪ ಪಡೆದಿದ್ದರೂ) ಪರಿಹರಿಸಲು ದೂರಗಾಮಿ ಯೋಜನೆಗಳು ಕಂಡು ಬಂದಿಲ್ಲ. ಉದಾಹರಣೆಗೆ ಖಾಸಗಿ ಸಾರಿಗೆ ನಿಷೇಧಿಸಿ ಸಾರ್ವಜನಿಕ ಸಾರಿಗೆಯನ್ನು ಯುದ್ಧೋಪಾದಿಯಾಗಿ ಬೆಳೆಸದೆ "ಟ್ರಾಫಿಕ್ ಜಾಮ್"ಗಳನ್ನು ಪರಿಹರಿಸುವುದು, "ಬ್ರಾಂಡ್ ಬೆಂಗಳೂರು" ಉಳಿಸಿಕೊಳ್ಳುವುದು ಸಾಧ್ಯವಿಲ್ಲ. ಇನ್ನಷ್ಟು ಹೆಚ್ಚು ಹೆಚ್ಚು ಮೇಲ್ಸೇತುವೆಗಳು ಇದನ್ನು ಪರಿಹರಿಸಲಾರವು ಎಂಬುದು ಸರಕಾರದ ಅರಿವಿಗೆ ಬಂದಿಲ್ಲ. ಅಥವಾ ಕಾಂಟ್ರಾಕ್ಟರ್ ಲಾಬಿಯ ಪ್ರಭಾವ ಹಾಗೇ ಮುಂದುವರೆದಿದೆ.

ಒಟ್ಟಾರೆಯಾಗಿ ಮೈತ್ರಿ ಸರಕಾರದ ಬಜೆಟ್ ನವ–ಉದಾರೀಕರಣದ ಚೌಕಟ್ಟಿನಿಂದ ಹೊರಬಂದಿಲ್ಲ. ಆದ್ದರಿಂದ ಬಜೆಟಿನಿಂದ ಯಾವುದೇ ಸಮಸ್ಯೆಗಳು ಪರಿಹಾರವಾಗಬಹುದು ಎಂಬ ಭ್ರಮೆಯನ್ನು ಇಟ್ಟುಕೊಳ್ಳಬೇಕಾಗಿಲ್ಲ.




ವ್ಯಂಗ್ಯಚಿತ್ರ: ಪಿ. ಮಹಮ್ಮದ್, ವಿಜಯ ಕರ್ನಾಟಕ

# ಸತತ 8 ದಿನಗಳ ಧರಣಿ ನಂತರ ಹಾಸ್ಟೆಲ್ ಅನ್ನದಾತೆಯರ ವಿಜಯ





**ಸತತ ಎಂಟು ದಿನಗಳ ಕಾಲ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಯಾವ ಸೌಕರ್ಯವಿಲ್ಲದೆ, ಬಿಸಿಲು ಮಳೆಯನ್ನು ಲೆಕ್ಕಿಸದೆ ತಮ್ಮ ಕೆಲಸ ಉಳಿಸಿಕೊಳ್ಳಬೇಕು ಎಂದು ಪಟ್ಟು ಹಿಡಿದು ಕುಳಿತಿದ್ದ ಹಾಸ್ಟೆಲ್ ಹೊರ ಗುತ್ತಿಗೆ ನೌಕರರ ಈ ನಿರ್ಧಾರದ ಹಿಂದೆ ಒಂದೊಂದು ನೋವಿನ ಕತೆ ಇದೆ. "ಯಪ್ಪಾ ನಾನು ಗಂಡ ಬಿಟ್ಟಾಕಿ ಅದೀನಿ. ಎರಡು ಮಕ್ಕಳು ಅದಾವ. ಈ ನೌಕರಿನೇ ಹೊಟ್ಟೆಗೆ ಗಂಜಿ ತುಂಬಿಸೊದು. ಏನಾರ ಮಾಡಿ ಕೆಲಸ ಉಳಿಸಿ ಕೊಡಿಸ್ರಪ್ಪ" ಅಂತ ಕಣ್ಣೀರಿಟ್ಟು ತನ್ನ ಅಸಾಯಕತೆಯನ್ನು ಸಂಡೂರಿನ ಮಹಿಳೆಯೊಬ್ಬಳು ತೋಡಿಕೊಂಡಿದ್ದಾಳೆ. ಕೊನೆಗೆ ಧೀರ್ಘ ಹೋರಾಟಕ್ಕೆ ಮಣಿದ ಸರ್ಕಾರ ಮಾನವಿಯತೆ ದೃಷ್ಟಿಯಿಂದ ಪರಿಗಣಿಸಿ ಸದ್ಯ "ಯಥಾಸ್ಥಿತಿ"ಯಲ್ಲಿ (status quo) ನೌಕರರು ಮುಂದುವರೆಯುವಂತೆ ಆದೇಶ ಹೊರಡಿಸುತ್ತೇವೆ ಎಂದು ಭರವಸೆ ನೀಡಿದ ನಂತರ ಹರ್ಷವ್ಯಕ್ತಪಡಿಸಿದ ನೌಕರರು ಖುಷಿಯಿಂದ ಹಿಂತಿರುಗಿದ್ದಾರೆ.**

**– ಪ್ರಶಾಂತ್ ಹಟ್ಟಿ –**

ಬಯಲಲ್ಲಿ ಹಾಕಿದ್ದ ಪೆಂಡಾಲ್ ಕೆಳಕ್ಕೆ ಬೀಳುವಂತೆ ವಾಲಾಡುತ್ತಿತ್ತು, ಬೀಸುತ್ತಿದ್ದ ಗಾಳಿ ಮಣ್ಣು ಸೇರಿಸಿಕೊಂಡು ಕೆಳಗಡೆ ಕೂತ್ತಿದ್ದವರ ಮೇಲೆ ನುಗ್ಗುತಿತ್ತು. ಯಾವುದಕ್ಕೂ ಲೆಕ್ಕಿಸದೇ ಸೆರಗ ಅಡ್ಡಹೊಡ್ಡಿ ಗಟ್ಟಿಧ್ವನಿಯಲ್ಲಿ 'ಕೆಲಸ ಬೇಕು' ಎಂದು ಘೋಷಣೆ ಕೂಗುತ್ತಿದ್ದರು. ಇವರೆಲ್ಲಾ ಹಳ್ಳಿಗಾಡಿನ ಜನರು, ಸರ್ಕಾರಿ ಹಾಸ್ಟೇಲ್‌ನಲ್ಲಿ ಸರಿಸುಮಾರು 10–15 ವರ್ಷಗಳಿಂದ ಮಕ್ಕಳಿಗೆ ಅನ್ನ ಬೇಯಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಉಣಬಡಿಸಿದವರು. ತಮಗೆ ನೆರವಾಗಿದ್ದ ಈ ಒಂದು ಕೆಲಸಕ್ಕಾಗಿ ಇವತ್ತು ಅಕ್ಷರಶಃ ಬೀದಿಗೆ ಬಂದವರು. ಬೆಂಗಳೂರಿನಲ್ಲಿ ರಸ್ತೆಬದಿ ವ್ಯಾಪಾರಿಗಳ ಸಂಘದವರು ಮತ್ತಿತರ ಕಾರ್ಮಿಕರು ಕೊಟ್ಟ ತರಕಾರಿ, ಅಕ್ಕಿಯಿಂದ ಅಡುಗೆಮಾಡಿಕೊಂಡು ಹೊಟ್ಟೆ ತುಂಬಿಸಿಕೊಂಡಿದ್ದಾರೆ. ಫ್ರೀಡಂ ಪಾರ್ಕ್‌ನಲ್ಲಿರುವ ಬಾಥ್‌ರೂಂಗಳಲ್ಲಿ ಸ್ನಾನ, ಪೆಂಡಾಲ್ ಕೆಳಗೆ ರಾತ್ರಿಯೆಲ್ಲ ಅರೆಬರೆ ನಿದ್ರೆ, ಹೀಗೆ ಎಂಟುದಿನ ಕಳೆದಿದ್ದಾರೆ. ಜೊತೆಗೆ ಕರೆದುಕೊಂಡು ಬಂದ ಎಳೆಯ ಕಂದಮ್ಮಗಳಿಗೆ ಇದ್ದ ಪುಡಿಗಾಸು ಕೊಟ್ಟು ತಿಂಡಿ ಕೊಡಿಸಿದ್ದಾರೆ, ಮೈಕೋ ಫಾಕ್ಟರಿ ಕಾರ್ಮಿಕರು ನೀಡಿದ ಬ್ರೆಡ್ ಹಾಲು ಮಕ್ಕಳ ಹೊಟ್ಟೆ ತುಂಬಿಸಿದೆ. ಸರಿಯಾದ ಊಟ ನೀರು ಇಲ್ಲದೆ ಅಸ್ವಸ್ಥರಾಗಿ ಒಟ್ಟು 23 ಜನರನ್ನು ಅಂಬುಲನ್ಸ್ ಮೂಲಕ ನಗರದ ಕೆ.ಸಿ ಆಸ್ಪತ್ರೆಗೆ ಸೇರಿಸಿದ್ದಾರೆ, ಅಲ್ಲದೇ ಹೋರಾಟ ನಿರತ ಮಹಿಳೆಯೊಬ್ಬಳಿಗೆ ನಾಯಿ ಕಚ್ಚಿದೆ.

ಇಷ್ಟೆಲ್ಲಾ ನೋವುಗಳನ್ನುಂಡು ಪ್ರತಿಭಟಿಸುತ್ತಿರುವವರ ಹಿಂದೆ ಒಂದೊಂದು ಕರುಳ ಹಿಂಡುವ ಕಥೆಗಳಿವೆ. "ನಾನು ಒಚಿಟಿ ಮಹಿಳೆ ನನಗೆ ಇಬ್ಬರು ಮಕ್ಕಳಿದ್ದಾರೆ. ಈ ಕೆಲಸದಿಂದ ಜೀವನ ಸಾಗಿಸುತ್ತಿದ್ದೇನೆ. ಮಕ್ಕಳು ಓದುತ್ತಿದ್ದಾರೆ. ನಮಗೆ ಬೇರೆ ಕೆಲಸ ಗೊತ್ತಿಲ್ಲ, ಬಾಡಿಗೆ ಮನೆಯಲ್ಲಿ ಇದ್ದೀವಿ. ಮನೆಯಿಲ್ಲ, ಭೂಮಿಯಿಲ್ಲ. ಈ ಕೆಲಸದಿಂದಲೇ ಎಲ್ಲಾ" ಎಂದು ಕಾರವಾರದ ಜಿಲ್ಲೆಯ ಮಹಿಳೆಯೊಬ್ಬಳು ಕಣ್ಣೀರಿಟ್ಟಳು. ಹೀಗೆ ಇಲ್ಲಿರುವ ಬಹುತೇಕರು ವಿಧವೆ, ದೇವದಾಸಿ, ಒಚಿಟಿ ಮಹಿಳೆಯರೇ. ಕೆಲಸ ಇಲ್ಲದ ಕುಡುಕ ಗಂಡ ಇದ್ದಾನೆ. ಚಿಕ್ಕಮಕ್ಕಳು ಶಾಲೆಗೆ ಹೋಗ್ತಾ ಇದ್ದಾರೆ ಎಂದು ಕೆಲವರು ಹೇಳಿಕೊಂಡರು. "ನಾವೆಲ್ಲ 3000 ಸಾವಿರ ಪಗಾರಿದ್ದಾಗಿಂದ ಕೆಲಸ ಮಾಡಾಕತ್ತೀವಿ. ಈಗ 8000 ರೂಪಾಯಿ ಮಾಡ್ಯಾರ. ಆಗ್ಲೆ ಕೆಲಸದಿಂದ ತೆಗೆದು ಹಾಕಾಕತ್ತಾರ ಅಂತ ಕಮಲಾಪುರದ ಮಲ್ಲಮ್ಮ ಹೇಳಿದರು.

ಸರ್ಕಾರಿ ಹಾಸ್ಟೆಲ್ ಹೊರಗುತ್ತಿಗೆ ನೌಕರರು ತಮ್ಮನ್ನು ಕೆಲಸದಿಂದ ತೆಗೆದು ಹಾಕುತ್ತಿರುವುದನ್ನು ವಿರೋಧಿಸಿ ಜೂನ್ 27 ರಿಂದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಅನಿರ್ದಿಷ್ಟ ಸಾಮೂಹಿಕ ಧರಣಿಯಲ್ಲಿ ಪಾಲುಗೊಂಡಿದ್ದರು. ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳು ನಡೆಸುತ್ತಿರುವ ಬಾಲಕ ಬಾಲಕಿಯರ ಹಾಸ್ಟೆಲ್‌ಗಳಲ್ಲಿ ಹತ್ತಾರು ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಾ ಬಂದಿರುವ 'ಡಿ' ವರ್ಗದ ನೌಕರರು ಕೆಲಸ ಖಾಯಂಗೊಳಿಸಲು ಹಲವಾರು ವರ್ಷಗಳಿಂದ ಅವರು ಹಕ್ಕೊತ್ತಾಯ ಮಾಡುತ್ತಾ ಬಂದಿದ್ದಾರೆ. ಇವರಲ್ಲಿ ಹೆಚ್ಚಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು ಮಹಿಳೆಯರೇ ಹೆಚ್ಚಿನವರು. ರಾಜ್ಯಾದ್ಯಂತ 17 ಸಾವಿರಕ್ಕೂ ಹೆಚ್ಚು ಹಾಸ್ಟೆಲ್ ಹೊರಗುತ್ತಿಗೆ ನೌಕರರು ಕೆಲಸ ಮಾಡುತ್ತಿದ್ದಾರೆ.

ನೇಮಕಾತಿ ನಿಯಮಗಳನ್ನು ಸೂಕ್ತವಾಗಿ ಬದಲಾಯಿಸಿ ಬಡಪಾಯಿ ನೌಕರರ ಸೇವೆಯನ್ನು ಖಾಯಂ ಮಾಡಬಹುದಾಗಿತ್ತು. ಆದರೆ ಸರ್ಕಾರ 10 ನೇ ತರಗತಿ ಪಾಸಾಗುವುದು ಅಗತ್ಯ ಎಂಬ ಷರತ್ತಿನೊಂದಿಗೆ ನೇರ ನೇಮಕಾತಿ ಪ್ರಾರಂಭಿಸಿತು. ಇದರಿಂದ ರಾಜ್ಯದ 5000 ಹೊರಗುತ್ತಿಗೆ ನೌಕರರು ಕೆಲಸ ಕಳೆದು ಕೊಳ್ಳುತ್ತಿದ್ದರು. ಹೊಸದಾಗಿ ನೇಮಕಗೊಳ್ಳುವ ಕಾಯಂ ನೌಕರರನ್ನು ಹೊಸದಾಗಿ ನಿರ್ಮಾಣಗೊಂಡ ಹಾಸ್ಟೆಲುಗಳಿಗೆ ಮಾತ್ರ ನಿಯೋಜಿಸುತ್ತೇವೆ ಎಂಬ ಭರವಸೆ ನೀಡಲಾಗಿತ್ತು. ಹಾಲಿ ಎಲ್ಲಾ ಹೊರಗುತ್ತಿಗೆ ನೌಕರರು ನಿವೃತ್ತಿ ವಯಸ್ಸು ತಲುಪುವ ವರೆಗೆ ಅವರಿಗೆ ಸೇವಾ ಭದ್ರತೆ ನೀಡುವುದನ್ನು ಪರಿಶೀಲಿಸಲಾಗುವುದು ಎಂದೂ ಭರವಸೆ ನೀಡಲಾಗಿತ್ತು. ಆದರೆ ಕೊಟ್ಟ ಭರವಸೆಯಂತೆ ನಡೆಯದೆ ನೇರ ನೇಮಕಾತಿ ಮಾಡಿಕೊಂಡು ಹೊರಗುತ್ತಿಗೆ ನೌಕರರನ್ನು ಕೆಲಸದಿಂದ ತೆಗೆದು ಹಾಕಿದ್ದರಿಂದ ಈ ಕ್ರಮ ಅನಿವಾರ್ಯವಾಗಿತ್ತು.

ಈ ಹೋರಾಟವನ್ನು ಹಲವಾರು ಸಂಘಸಂಸ್ಥೆಗಳು ನಾಯಕರುಗಳು ಬಂದು ಬೆಂಬಲಿಸಿದ್ದಾರೆ. ಪ್ರಗತಿಪರ ಚಿಂತಕ ನಟ ಚೇತನ್, ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ವೀರಸಂಗಯ್ಯ. ಕರ್ನಾಟಕ ಪ್ರಾಂತ ರೈತ ಸಂಘದಿಂದ ಬೈಯ್ಯಾರೆಡ್ಡಿ, ಬಸವರಾಜ, ಸಿ.ಐ.ಟಿ.ಯು ಕಾರ್ಮಿಕ ಸಂಘಟನೆಯಿಂದ ಕೆ.ಎನ್ ಉಮೇಶ್. ಸಮುದಾಯ ದ ಸುರೇಂದ್ರ ರಾವ್, ಡಿಎಚ್‌ಎಸ್ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ, ಜಿ.ಎನ್ ನಾಗರಾಜ್, ಸಿಪಿಐ(ಎಂ) ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಮತ್ತಿತರರು ಈ ನ್ಯಾಯಯುತವಾದ ಹೋರಾಟಕ್ಕೆ ಬೆಂಬಲಿಸಿದ್ದಾರೆ. ಅಲ್ಲದೇ ಜುಲೈ 6 ರಂದು ಎಲ್ಲಾ ಪ್ರಗತಿಪರ ಸಂಘಟನೆಗಳು ಕೂಡಿ ಸೌಹಾರ್ದ ರ್‍ಯಾಲಿ ಮಾಡುವುದಾಗಿ ತೀರ್ಮಾನಿಸಿದ್ದರು. ಅಷ್ಟರಲ್ಲೇ ಸರ್ಕಾರವು ಮಣಿದಿತ್ತು.

ಮುಖ್ಯಮಂತ್ರಿಗಳ ಸೂಚನೆಯಂತೆ ಸ್ಥಳಕ್ಕೆ ಆಗಮಿಸಿದ ಸಮಾಜ ಕಲ್ಯಾಣ ಸಚಿವ ಪ್ರಿಯಾಂಕ ಖರ್ಗೆ, ಸರಕಾರದ ನಿರ್ಧಾರವನ್ನು ತಿಳಿಸಿದ ಅವರು ನಿಮ್ಮ ಕೆಲಸಕ್ಕೆ ಮೊದಲಿನ ಹಾಗೆ ಹೋಗಬಹುದು. ಆರು ತಿಂಗಳವರೆಗೆ ಸರ್ಕಾರ "ಯಥಾಸ್ಥಿತಿ" ಮುಂದುವರೆಸುವುದಾಗಿ ತೀರ್ಮಾನಿಸಿದ್ದು ಬಹುಬೇಗನೇ ಆದೇಶವನ್ನು ಹೊರಡಿಸಲಾಗುವುದು. ಸರ್ಕಾರಕ್ಕೆ ಆರು ತಿಂಗಳ ಕಾಲ ಸಮಯ ಬೇಕಾಗಿದ್ದು ಈ ಕಾಲಾವಧಿಯಲ್ಲಿ ಸರ್ವೆಮಾಡಿ ನಿಮ್ಮ ಸಂಘಟನೆಯ ಸಲಹೆ ಸಹಕಾರದೊಂದಿಗೆ ಉತ್ತಮ ತೀರ್ಮಾನಕ್ಕೆ ಬರಲಾಗುವುದು. ಇದಕ್ಕೆ ಸಹಕರಿಸುವಂತೆ ಮನವಿ ಮಾಡಿಕೊಂಡರು. ಇದಕ್ಕೆ ಸಂಬಂಧಿಸಿದಂತೆ ಜೂನ್ 12ರ ನಂತರ ಸಂಘಟನಾ ಮುಖಂಡರನ್ನು ಸಭೆಗೆ ಆಹ್ವಾನಿಸಿ ಚರ್ಚಿಸಲಾಗುವುದು ಎಂದರು. ಮಂತ್ರಿಗಳ ಬಾಯಿಂದ ಈ ಮಾತನ್ನು ಕೇಳಿದ ನೌಕರಿಗೆ ಸಮಾಧಾನವಾಯಿತು. ಮತ್ತೆ ತಮ್ಮ ಬದುಕಿನ ಕುರಿತು ವಿಶ್ವಾಸ ಮೂಡಿತು. ಎಂಟು ದಿನಗಳ ಧರಣಿ ಹಿಂತೆಗೆದು ಗೆಲುವಿನ ಸಂಭ್ರಮದ ಜೊತೆಗೆ ತಮ್ಮ ಊರುಗಳಿಗೆ ಹಿಂತಿರುಗಿದರು.








# TRMN ಕಾರ್ಮಿಕರ ಆಮರಣಾಂತ ಉಪವಾಸ ತಾತ್ಕಾಲಿಕ ಅಂತ್ಯ

ಕಾರ್ಮಿಕರು ಸಂಘಟಿತರಾಗುವುದನ್ನು ಮುರಿ ಯಲು ಟಿ.ಆರ್.ಎಮ್. ಎನ್. ಕಾರ್ಖಾನೆಯ 49 ಕಾರ್ಮಿಕರನ್ನು ಅಮಾನತ್ತು ಗೊಳಿಸಲಾಗಿತ್ತು. ಅವರನ್ನು ಕೆಲಸಕ್ಕೆ ಹಾಜರಾಗದಂತೆ ತಡೆಯಲಾಗಿತ್ತು. ಇದನ್ನು ವಿರೋಧಿಸಿ ಮುಖಕ್ಕೆ ಕಪ್ಪು ಪಟ್ಟಿ ಧರಿಸಿ ಧರಣಿ ನೆಡೆಸಲಾಗಿತ್ತು. ಯಾವ ಅಧಿಕಾರಿಗಳು ಸ್ಪಂದಿಸದಿದ್ದಕ್ಕೆ ಕೆಲವು ಕಾರ್ಮಿಕರು ಅಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸಿದ್ದರು.





ಸತ್ಯಾಗ್ರಹ ಮುಂದುವರೆಯುತ್ತಿದ್ದಂತೆ TRMN ಕಾರ್ಮಿಕರ ಹೋರಾಟದ ಸ್ಥಳಕ್ಕೆ ಹಾಗು ಕಾರ್ಖಾನೆಗೆ ಜಿಲ್ಲಾ ಅಧಿಕಾರಿ ಶ್ರೀ ಪಾಲಯ್ಯ ರವರು ಮತ್ತು ಜಿಲ್ಲಾ ಎಸ್.ಪಿ. ಭೀಮಾಶಂಕರ್ ರವರು ಭೇಟಿ ನೀಡಿದರು. ಮಾತುಕತೆಯ ಮುಖಾಂತರ ಪ್ರಸಕ್ತ ಕಾರ್ಮಿಕರ ಸಮಸ್ಯೆಯನ್ನು ಪರಿಹರಿಸಲು ಎರಡು ಪಕ್ಷದ ಜೊತೆ ಪ್ರತ್ಯೇಕ ಸಭೆ ನಡೆಸಿದರು. ಆನಂತರ ಕಾರ್ಮಿಕರ ಸಮಸ್ಯೆ ಪರಿಹರಿಸಲು ದಿನಾಂಕ 10–07–18 ರಂದು ಜಿಲ್ಲಾಧಿಕಾರಿ ಕಛೇರಿಯಲ್ಲಿ ಸಭೆ ನಡೆಸುವುದಾಗಿ ತಿಳಿಸಿ, ಉಪವಾಸ ನಿರತ ಸಂಗಾತಿಗಳಿಗೆ ಮಾನ್ಯ DC ಮತ್ತು SP ರವರು ನೀರು ಕುಡಿಸುವುದರ ಮುಖಾಂತರ ಅಮರಣಾಂತ ಉಪವಾಸವನ್ನು ತಾತ್ಕಲಿಕವಾಗಿ ಅಂತ್ಯಗೊಳಿಸಿದರು.

ಇದಕ್ಕೆ ಮುಂಚಿತವಾಗಿ ರಾಜ್ಯ ಮಹಿಳಾ ಆಯೋಗದ ಆಧ್ಯಕ್ಷರಾದ ನಾಗಲಕ್ಷ್ಮೀಬಾಯಿ ರವರು ಹೋರಾಟ ನಿರತ ಕಾರ್ಮಿಕರ ಕುಟೀರಕ್ಕೆ ಅಗಮಿಸಿ ಮಹಿಳೆಯ ಸಮಸ್ಯೆ, ನೋವಿನ ಸಂಕಷ್ಟಗಳನು ಆಲಿಸಿದರು. ಹಾಗೆಯೇ ಕಂಪನಿಯ ಒಳಗಡೆ ಕೂಡ ಭೇಟಿ ನೀಡಿ ಕೆಲಸ ಮಾಡುವ ಮಹಿಳೆಯರ ನೋವನ್ನು ಹಾಗು ಅವರ ಮೇಲೆ ಆಡಳಿತ ಮಂಡಳಿ ಮಾಡುತ್ತಿರುವ ದೌರ್ಜನ್ಯವನ್ನು ತಿಳಿದುಕೊಂಡು ಕಂಪನಿಯ ಸಿಬ್ಬಂದಿಗಳಿಗೆ ತೀಕ್ಷ್ಣ ಎಚ್ಚರಿಕೆ ನೀಡಿದರು. ಜನವಾದಿ ಮಹಿಳಾ ಸಂಘಟನೆಯ ಮುಖಂಡರು ಕೂಡ ಜೊತೆಗಿದ್ದು ಕಾರ್ಮಿಕರ ಸಂಕಷ್ಟ ಪರಿಹರಿಸಲು ಸಹಾಯಕವಾಗಿ ಕಾರ್ಯನಿರ್ವಹಿಸಿ ತಪಿತಸ್ಥ ಕಂಪನಿಯ ಮೇಲೆ ಕೇಸ್ ಮಾಡಲು ಪೂರಕ ಕೆಲಸ ಮಾಡಿದರು.

**ವರದಿ: ಮಂಗಳಕುಮಾರಿ (BNIWU)**

# ಹಮಾಲಿ ಕಾರ್ಮಿಕರಿಂದ ಹಕ್ಕೊತ್ತಾಯ







ಹಲವಾರು ವರ್ಷಗಳಿಂದ ಸರ್ಕಾರದ ನಿರ್ಲಕ್ಷಕ್ಕೆ ಒಳಗಾಗಿರುವ ಹಲವಾರು ಬೇಡಿಕೆಗಳನ್ನು ಈಡೇರಿಸುವಂತೆ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್(ರಿ) ಹಕ್ಕೊತ್ತಾಯ ಸಲ್ಲಿಸಿದರು. ರಾಜ್ಯದ ವಿವಿಧ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿ ನೂತನ ಸರಕಾರದ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಹುಬ್ಬಳ್ಳಿ, ರಾಯಚೂರು, ಸಿಂಧನೂರು, ಸಿರಗುಪ್ಪಾ, ಸಂಡೂರು, ಚೆಳ್ಳಕೇರೆ, ಹಾವೇರಿ, ಸವಣೂರು, ಹಿರೇಕೆರೂರು, ಲಕ್ಷ್ಮೇಶ್ವರ, ಮುಂಡರಗಿ, ಹುನಗುಂದ, ಸವದತ್ತಿ ಮುಂತಾದ ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದಿರುವ ಬಗ್ಗೆ ವರದಿಗಳು ಬಂದಿವೆ.

ಹುಬ್ಬಳ್ಳಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಹಮಾಲಿ ಕಾರ್ಮಿಕರ ಫೆಡರೇಶನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ "ನೂತನ ಸರಕಾರದ ಮುಂದೆ ನಮ್ಮ ಹಕ್ಕೊತ್ತಾಯಗಳನ್ನು ಮಂಡಿಸುತ್ತಿದ್ದು ಹಮಾಲಿ ಕಾರ್ಮಿಕರಿಗೆ ಭವಿಷ್ಯ ನಿಧಿ ಯೋಜನೆ ಜಾರಿಮಾಡಲು ಮುಖ್ಯಮಂತ್ರಿಗಳು ಪ್ರಸ್ತುತ ಮಂಡಿಸಲಿರುವ ಬಜೆಟ್‌ನಲ್ಲಿ ಕನಿಷ್ಠ 100 ಕೋಟಿಗಳ ಅನುದಾನವನ್ನು ಘೋಷಿಸಬೇಕು. ಈ ಹಿಂದೆ ಘೋಷಣೆಯಾದ ಸೌಲಭ್ಯಗಳನ್ನು ಕೂಡಲೇ ಜಾರಿಮಾಡಲು ಮುಂದಾಗಬೇಕು" ಎಂದು ಆಗ್ರಹಿಸಿದರು.

ವಿವಿಧ ಬೇಡಿಕೆಗಳಾದ "ಅಂಬೇಡ್ಕರ ಕಾರ್ಮಿಕರ ಸಹಾಯ ಹಸ್ತ" ಸ್ಮಾರ್ಟಕಾರ್ಡಗಳನ್ನು ಕೂಡಲೆ ಪಿಂಚಣಿ ಯೋಜನೆಯನ್ನು ಜಾರಿಮಾಡಬೇಕು. "ಅಸಂಘಟಿತ ಕಾರ್ಮಿಕರ ಭವಿಷ್ಯ ನಿಧಿ ಯೋಜನೆ"ಯನ್ನು ಕಾನೂನಾಗಿ ರೂಪಿಸಿ ಅಗತ್ಯವಿರುವ 100 ಕೋಟಿಗಳ ಅನುದಾನ ನೀಡಬೇಕು. ಎಪಿಎಂಸಿ"ಕಾಯಕ ನಿಧಿ"ಯಡಿ ರೂ. 50 ಸಾವಿರ ನಿವೃತ್ತಿ ಪರಿಹಾರ, ಪ್ರತಿ ವರ್ಷ ಎರಡು ಜೋತೆ ಸಮವಸ್ತ್ರ, ಪಿಂಚಣಿ, ವಿದ್ಯಾರ್ಥಿ ವೇತನ ನೀಡಬೇಕು. ಹಮಾಲಿ ಕಾರ್ಮಿಕರಿಗೆ ಯೋಗ್ಯ ವಸತಿ ಯೋಜನೆ ರೂಪಿಸಬೇಕು, ಎಂದೂ ಅವರು ಆಗ್ರಹಿಸಿದರು.

ಈ ಹಿಂದೆ ಘೋಷಿಸಲಾದ ಎಪಿಎಂಸಿ ಹಮಾಲಿ ಕಾರ್ಮಿಕರಿಗೆ 1000 ಮನೆ ನೀಡುವ ಯೋಜನೆಗೆ ಚಾಲನೆ ನೀಡಬೇಕು. ಆಮ್ ಆದ್ಮಿ ಬೀಮಾ ಯೋಜನೆಯನ್ನು ಪಿಎಂಜೆಜೆಬಿವೈ ಮತ್ತು ಪಿಎಂಜೆಎಸ್‌ಬಿವೈ ವಿಮಾ ಯೋಜನೆಗಳಲ್ಲಿ ವಿಲಿನಗೊಳಿಸುತ್ತಿದ್ದು, ವಿದ್ಯಾರ್ಥಿ ವೇತನ ಮುಂದುವರೆಸಬೇಕು. ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸಬೇಕು. ಎಲ್ಲಾ ಮಿಲ್, ಗೋಡೌನ್, ವೇರಹೌಸ್, ಬಜಾರ ಹಮಾಲಿ ಕಾರ್ಮಿಕರಿಗೆ ಪಿಎಫ್, ಇಎಸ್‌ಐ, ಬೋನಸ್, ಅಪಘಾತ ಪರಿಹಾರ ಮುಂತಾದ ಕಾರ್ಮಿಕ ಕಾನೂನುಗಳನ್ನು ಕಡ್ಡಾಯವಾಗಿ ಜಾರಿ ಮಾಡಬೇಕು, ಎಂದೂ ಹಕ್ಕೊತ್ತಾಯ ಮನವಿಯಲ್ಲಿ ಹೇಳಲಾಗಿದೆ.

## "ICDS ಉಳಿಸಿ" : ಅಂಗನವಾಡಿ ಹಕ್ಕೊತ್ತಾಯ ದಿನಾಚರಣೆ : ಜುಲೈ 10

* ಜಂಟಿ ಖಾತೆಯ ಸಮಿತಿಯ ಅಧ್ಯಕ್ಷರಾಗಿರುವ ಅಧಿಕಾರಗಳನ್ನು ಹಿಂಪಡೆಯಬೇಕು.
* ಮೇಲ್ವಿಚಾರಕಿಯರ ಹುದ್ದೆಗೆ 100 % ಮೀಸಲಾತಿ ಅಂಗನವಾಡಿ ನೌಕರರಿಗೆ ಕೊಟ್ಟ ಮುಂಬಡ್ತಿ ನೀಡಬೇಕು. ಕೆ.ಪಿ.ಎಸ್.ಸಿ ಆಯ್ಕೆಯಾಗಿರುವ ಪಟ್ಟಿಯನ್ನು ಕೂಡಲೇ ಬಿಡುಗಡೆ ಮಾಡಬೇಕು.
* ಈಗಾಗಲೇ ಅನಧಿಕೃತವಾಗಿ ಪ್ರಾರಂಭಿಸಲಾದ LKG-UKG ಯನ್ನು ರದ್ದು ಮಾಡಿ ಅಂಗನವಾಡಿ ಕೇಂದ್ರಗಳಲ್ಲಿಯೇ ಪ್ರಾರಂಭಿಸಬೇಕು.
* ಪ್ರತಿ ತಿಂಗಳು ಗೌರವಧನ ಪಾವತಿಯಾಗಬೇಕು.
* ಮೇಲ್ವೀಚಾರಕಿ ಹುದ್ದೆಗಳನ್ನು ಸಂಪೂರ್ಣ ಅಂಗನವಾಡಿ ನೌಕರರಿಗೆ ಮುಂಬಡ್ತಿ ಕೊಡಬೇಕು.
* ಮಿನಿ ಅಂಗನವಾಡಿ ಎಲ್ಲಾ ಕೇಂದ್ರಗಳಿಗೂ ಸಹಾಯಕಿಯರನ್ನು ಕಡ್ಡಾಯವಾಗಿ ನೇಮಕ ಮಾಡಬೇಕು. ಮಿನಿ ಅಂಗನವಾಡಿ ಕೇಂದ್ರಗಳನ್ನು ಸಂಪೂರ್ಣ ಅಂಗನವಾಡಿ ಕೇಂದ್ರಗಳನ್ನಾಗಿ ಪರಿವರ್ತಿಸಬೇಕು.
* ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ಹೆರಿಗೆ ರಜೆ, ಖಾಯಿಲೆಗಳು ಬಂದಾಗ ಪರ್ಯಾಯ ವ್ಯವಸ್ಥೆ ಮಾಡಬೇಕು.

ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೂ ವರ್ಗಾವಣೆ, ಮುಂಬಡ್ತಿ ಸಿಗಬೇಕು.

* ಸೇವಾ ಜೇಷ್ಠತೆಯ ಆಧಾರದಲ್ಲಿ ಕನಿಷ್ಠ ವೇತನ ಜಾರಿ ಮಾಡಬೇಕು: 45 ಎಲ್.ಐ.ಸಿ ಯ ಶಿಫಾರಸ್ಸಿನ ಪ್ರಕಾರ 18,000 ಕನಿಷ್ಠ ವೇತನ ಜಾರಿ ಮಾಡಬೇಕು.
* ಮಾತೃವಂದನಾ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ ಅಂಗನವಾಡಿ ನೌಕರರ ಮುಖಾಂತರ ಜಾರಿ ಮಾಡಿಸುತ್ತಿದೆ. ಈ ಕಾರ್ಯಕ್ರಮಕ್ಕೆ ಒಂದು ಕಂತಿನ 300 ರೂ ಗಳನ್ನು ನಿಗದಿಪಡಿಸಬೇಕು. ನಿಗದಿಯಾಗುವ ತನಕ ಉಚಿತವಾಗಿ ಮಾತೃವಂದನಾ ಕೆಲಸ ಮಾಡುವುದಿಲ್ಲ.
* ಅಂಗನವಾಡಿ ಸಹಾಯಕಿ ಕಾರ್ಯಕರ್ತೆಯಾಗಿ ಮುಂಬಡ್ತಿ ಪಡೆಯಲು ಇರುವ ವಯಸ್ಸಿನ ಭೌಗೋಳಿಕ ವಿಸ್ತೀರ್ಣದ ಮಿತಿಯನ್ನು ಸಡಿಲಿಸಬೇಕು.
* ಅನುಕಂಪದ ಆಧಾರದಲ್ಲಿರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಮದುವೆಯಾಗದ ಹೆಣ್ಣು ಮಕ್ಕಳಿಗೆ ಎಂಬ ಷರತ್ತನ್ನು ತೆಗೆದು ಕುಟುಂಬದವರಿಗೆ ಎಂದು ತಿದ್ದುಪಡಿಯಾಗಬೇಕು.
* ಹೊಸ ನಿವೃತ್ತಿ ಯೋಜನೆಯಲ್ಲಿ ಸದಸ್ಯರಿಗೆ ಇದುವರೆಗೂ ಪಾನ್ ಕಾರ್ಡ್ ಕೊಟ್ಟಿಲ್ಲ, ನಿವೃತ್ತಿ ಹೊಂದಿ 5–6 ತಿಂಗಳಾದರೂ ನಿವೃತ್ತಿ ಸೌಲಭ್ಯ ಸಿಗುವುದಿಲ್ಲ ಕೂಡಲೇ ಕ್ರಮ ವಹಿಸಬೇಕು.
* ಖಾಲಿಯಿರುವ ಸಹಾಯಕಿ ಮತ್ತು ಕಾರ್ಯಕರ್ತೆಯರ ಹುದ್ದೆಗಳನ್ನು ತುಂಬಬೇಕು.
* ಹಲವು ಯೋಜನೆಗಳಿಗೆ ಡಿಡಿ, ಡಿಪಿ, ಸಿಡಿಪಿಒ, ಮೇಲ್ವಿಚಾರಕಿಯರನ್ನು ಖಾಯಂ ಆಗಿ ನೇಮಕ ಮಾಡಬೇಕು.
* ಅಂಗನವಾಡಿ ಕಾರ್ಯಕರ್ತೆಯರಿಗೆ ಸೇವಾ ನಿಯಮಾವಳಿ ರಚಿಸಬೇಕು.
* ಕೇಂದ್ರ ಸರ್ಕಾರ ಕಡಿತ ಮಾಡಿರುವ ಅನುದಾನ ವಾಪಸ್ಸು ಆಗಬೇಕು.
* ಅಂಗನವಾಡಿ ಕೇಂದ್ರದ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆಯನ್ನು ಸೂಚನೆಯನ್ನು ರಾಜ್ಯ ಸರ್ಕಾರ ಒಪ್ಪಬಾರದು

## ಮಾಸಿಕ ರೂ 5000 ಪಿಂಚಣಿಗಾಗಿ ಒತ್ತಾಯಿಸಿ ಸಹಿಸಂಗ್ರಹ ಚಳುವಳಿ

ಮಂಡ್ಯ/ಮಳವಳ್ಳಿ: ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ, ಸಾಲ ಮನ್ನಾ, ವೃದ್ಧ ರೈತ ಕೂಲಿಕಾರರಿಗೆ ಮಾಸಿಕ ರೂ 5000 ಪಿಂಚಣಿಗಾಗಿ ಒತ್ತಾಯಿಸಿ ಸಹಿಸಂಗ್ರಹ ಚಳುವಳಿ ಕಾರ್ಯಕ್ರಮವನ್ನು ಕರ್ನಾಟಕ ಪ್ರಾಂತ ರೈತ ಸಂಘ ವತಿಯಿಂದ ಮಳವಳ್ಳಿ ಪಟ್ಟಣದಲ್ಲಿ ನಡೆಸಲಾಯಿತು. ಮಳವಳ್ಳಿ ಪಟ್ಟಣದ ಕೆಎಸ್ ಆರ್ ಟಿಸಿ ಬಸ್ ನಿಲ್ದಾಣದ ಮುಂಭಾಗದಲ್ಲಿ ತಾಲ್ಲೂಕು ಅಧ್ಯಕ್ಷ ಎನ್ .ಎಲ್ ಭರತ್ ರಾಜ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ರೈತರ ಕೃಷಿ ಉತ್ಪನ್ನಗಳಿಗೆ ಡಾ. ಸ್ವಾಮಿನಾಥನ್ ಆಯೋಗದ ವರದಿಯಂತೆ ಒಟ್ಟು ವೆಚ್ಚದ ಮೊತ್ತದ ಜೊತೆಗೆ ಶೇ50 ರಷ್ಟು ಲಾಭಾಂಶ ಸೇರಿಸಿ ಎಲ್ಲಾ ಬೆಳೆಗಳಿಗೂ ಬೆಂಬಲ ಬೆಲೆ ನೀಡಬೇಕು ಮತ್ತು ರೈತ ಕೂಲಿಕಾರರಿಗೆ ವೃದ್ಧಾಪ್ಯದಲ್ಲಿ ಮಾಸಿಕ ರೂ 5000 ಪಿಂಚಣಿಯನ್ನು ನೀಡಬೇಕೆಂದು ಒತ್ತಾಯಿಸಿ ದೇಶದಾದ್ಯಂತ 10 ಕೋಟಿ ರಾಜ್ಯದೆಲ್ಲೆಡೆ 5 ಲಕ್ಷ ಸಹಿ ಸಂಗ್ರಹಿಸಿ ಕೇಂದ್ರ ಸರ್ಕಾರ ಪ್ರದಾನ ಮಂತ್ರಿ ನರೇಂದ್ರಮೋದಿರವರಿಗೆ ಅದರ ನಕಲು ಪತ್ರವನ್ನು ಸಲ್ಲಿಸಲಾಗುವುದು. ರೈತ, ಕೂಲಿಕಾರರ, ಕಾರ್ಮಿಕರ ದಲಿತರು ಹಾಗೂ ಆದಿವಾಸಿ ಸಂಘಟನೆಗಳು ಸೇರಿದಂತೆ ಹಲವು ಸಂಘಟನೆ ಆಗಸ್ಟ್ 9 ರಂದು ಜೈಲ್ ಭರೋ ಹಾಗೂ ಸೆಪ್ಟೆಂಬರ್ 5 ರಂದು ಪಾರ್ಲಿಮೆಂಟ್ ಚಲೋ ಕಾರ್ಯಕ್ರಮ ಹಮ್ಮಿಕೊಂಡಿವೆ. ಇದಲ್ಲದೆ ಮಂಡ್ಯ ಜಿಲ್ಲೆ ಸಿಲ್ಕ್ ಅಂಡ್ ಮಿಲ್ಕ್ ಗೆ ಹೆಸರುವಾಸಿ. ಆದರೆ ಇತ್ತೀಚಿನ ದಿನಗಳಲ್ಲಿ ಬೆಲೆ ಕುಸಿತವಾಗಿ ರೈತರು ಕಂಗಾಲಾಗಿದ್ದಾರೆ. ಕೂಡಲೇ ಸಂಬಂಧಪಟ್ಟ ಅಧಿಕಾರಿ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಉಗ್ರಹೋರಾಟ ಮಾಡಬೇಕಾಗಿದೆ ಎಂದು ಎಚ್ಚರಿಸಿದರು. ಕಾರ್ಯಕ್ರಮದಲ್ಲಿ ಜನವಾದಿ ಮಹಿಳೆ ಸಂಘಟನೆ ಜಿಲ್ಲಾಧ್ಯಕ್ಷೆ ದೇವಿ, ರಾಮಕೃಷ್ಣ, ಸಂಘದ ಕಾರ್ಯದರ್ಶಿ ಎನ್. ಲಿಂಗರಾಜಮೂರ್ತಿ, ದೊಡ್ಡಮರಿಗೌಡ ಸೇರಿದಂತೆ ಮತ್ತಿತ್ತರರು ಇದ್ದರು

## ವಿಲೀನದ ಸೋಗಿನಲ್ಲಿ ಖಾಸಗೀಕರಣದ ಹುನ್ನಾರ: ಎಸ್.ಎಸ್.ಐ. ಪ್ರತಿಭಟನೆ

ಸಮಿಶ್ರ ಸರ್ಕಾರ ಚೊಚ್ಚಲ ರಾಜ್ಯ ಬಜೆಟ್ ಮಂಡಿಸಿದ ಕುಮಾರಸ್ವಾಮಿ ಶಿಕ್ಷಣ ಕ್ಷೇತ್ರವನ್ನು ಕಡೆಗಣಿಸಿದ್ದಾರೆ, ಕಳೆದ ಸಿದ್ದಾರಾಮಯ್ಯ ಸರ್ಕಾರ ಕಾರ್ಯಕ್ರಮಗಳನ್ನು ಮುಂದುವರೆಸುವುದಾಗಿ ಭರವಸೆ ಕೊಟ್ಟು ಶಿಕ್ಷಣ ಕ್ಷೇತ್ರಕ್ಕೆ 11.78% ನಲ್ಲಿ .78% ನಷ್ಟು ಕಡಿತಗೋಳಿಸಿದ್ದಾರೆ. ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ಕಾರ್ಯಕ್ರಮ ಕನಸಾಗಿಯೇ ಉಳಿದಿದ್ದು ಈ ಕ್ರಮ ಶಿಕ್ಷಣ ವಿರೋಧಿಯಾಗಿದೆ. ಎಂದು ಎಸ್. ಎಫ್.ಐ ಯಲಬುರ್ಗಾ, ಶಿಗ್ಗಾವಿ, ರಾಣೆಬೆನ್ನೂರು ಕೋಲಾರ ಸೇರಿದಂತೆ ರಾಜ್ಯಾದ್ಯಾಂದ ಪ್ರತಿಭಟನೆ ನಡೆಸಿದೆ.

ಜನಶಕ್ತಿಯೊಂದಿಗೆ ಮಾತನಾಡಿದ ಎಸ್.ಎಫ್.ಐ ವಿದ್ಯಾರ್ಥಿ ಸಂಘಟನೆಯ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ ರಾಜ್ಯಾದ್ಯಾಂತ ಸಂವಾದ, ವಿಚಾರ ಸಂಕೀರ್ಣ, ಚರ್ಚೆ ಸೇರಿದಂತೆ ಶಿಕ್ಷಣ ತಜ್ಞರ ಅಭಿಪ್ರಾಯಗಳನ್ನು ಕ್ರೋಢಿಕರಿಸಿ ಲಿಖಿತ ವರದಿಯನ್ನು ಸಲ್ಲಿಸಲಾಗುವುದು ಎಂದು ಹೇಳಿದರು. ಈ ಕ್ರಮ ಶಿಕ್ಷಣ ವಿರೋಧಿಯಾಗಿದ್ದು ಚಳುವಳಿಯನ್ನು ರೂಪಿಸುವುದಾಗಿ ಹೇಳಿದರು.

ಬಹುಮುಖ್ಯವಾಗಿ 8,530 ಸಮೀಪದ ಶಾಲೆಗಳೊಂದಿಗೆ ವಿಲೀನ ಗೋಳಿಸಿ 28,847 ಸರ್ಕಾರಿ ಶಾಲೆಗಳನ್ನು ಮುಚ್ಚುವ ಉದ್ದೇಶವನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಿರುವುದು ಶಿಕ್ಷಣಕ್ಷೇತ್ರವನ್ನು ಖಾಸಗಿಕರಣಗೊಳಿಸುವ ದುರುದ್ದೇಶ ಸ್ಪಷ್ಟವಾಗಿ ಗೋಚರಿಸುತ್ತದೆ. ಕಳೆದ 2011 ಡಿಸೆಂಬರ್‌ನಲ್ಲಿ ಸದಾನಂದ ಗೌಡ ನೇತೃತ್ವದ ಬಿ.ಜೆ.ಪಿ ಸರ್ಕಾರ ಸಹ 201 ಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು 'ಭಾರತ ವಿದ್ಯಾಥಿ ಫೆಡರೇಷನ್' (ಎಸ್.ಎಫ್.ಐ) ತೀವ್ರವಾಗಿ ಪ್ರತಿಭಟಿಸಿತ್ತು. ಸರ್ಕಾರ 22 ಎಸ್.ಎಫ್.ಐ ಕಾರ್ಯಕರ್ತರನ್ನು ಬಂಧಿಸಿ ಕೇಸುಗಳನ್ನು ಹಾಕಿತ್ತು. 2012 ರ ಜಗದೀಶ್ ಶೆಟ್ಟರ್ ಅವಧಿಯಲ್ಲಿ ಮತ್ತೆ 1,200 ಶಾಲೆಗಳನ್ನು ಮುಚ್ಚುವುದಾಗಿ ಹೇಳಿದ್ದ ಸಂದರ್ಭದಲ್ಲಿ ರಾಯಚೂರು, ಬೆಂಗಳೂರು, ದಕ್ಷಿಣ ಕನ್ನಡ, ಚಿಕ್ಕಬಳ್ಳಾಪುರ, ಕೊಪ್ಪಳ ದ ಎಸ್. ಎಫ್.ಐ ಮುಖಂಡರುಗಳ ಮೇಲೆ ಸರ್ಕಾರ ಕೇಸುಗಳನ್ನು ಹಾಕಿತ್ತು.

ಸರ್ಕಾರಿ ಸ್ವಾಮ್ಯದ 28,847 ಶಾಲೆಗಳನ್ನು ಮುಚ್ಚುವ ಸರ್ಕಾರದ ನಿರ್ಧಾರವನ್ನು ವೈಜ್ಞಾನಿಕವಾಗಿ ತುಲನೆಗೆ ಒಳಪಡಿಸುವ ತುರ್ತುಇದೆ. ಈ ನಿರ್ಧಾರದಿಂದ ಅಂದಾಜು 10 ಲಕ್ಷ ಹೆಚ್ಚು ಗ್ರಾಮೀಣ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದಾರೆ.



ಅತಿಥಿ ಅಂಕಣ




ಪ್ರೊ. ಟಿ. ಆರ್. ಚಂದ್ರಶೇಖರ

# ಸಾಮಾಜಿಕ ಅಸಹಿಷ್ಣುತೆ ಮತ್ತು ಆರ್ಥಿಕತೆ ಅಸ್ಥಿರತೆ

**ಉತ್ಪಾದನೆಯನ್ನು, ಬಂಡವಾಳವನ್ನು, ವರಮಾನವನ್ನು ಹೆಚ್ಚಿಸುವುದೇ ಅಭಿವೃದ್ಧಿಯಲ್ಲ. ಮಹಿಳೆಯರನ್ನು ಸೇರಿಸಿಕೊಂಡು ಜನರ ಬದುಕನ್ನು ಉತ್ತಮಪಡಿಸುವುದು ಅಭಿವೃದ್ಧಿ. ತೂತುಕುಡಿಯ ಸಂತ್ರಸ್ಥರು ಅಪರಾಧಿಗಳಾಗಿದ್ದಾರೆ. ಮುಂಬೈನ ಮಾಹುಲ್‌ನ ಮೂಲನಿವಾಸಿಗಳನ್ನು ಮೂಲೋತ್ಪಾಟನೆ ಮಾಡಿ ವಿಷ ಉಗುಳುವ ಕಾರ್ಖಾನೆಗಳಿಗೆ ರಕ್ಷಣೆ ನೀಡಲಾಗುತ್ತಿದೆ. ಭೀಮಕೋರೆಗಾಂವ್ ವಿಜಯೋತ್ಸವವು ಮೇಲುವರ್ಗದ ವಿರುದ್ಧವಾದುದು ಅನ್ನುವ ಒಂದೇ ಕಾರಣಕ್ಕೆ ದೇಶದ್ರೋಹದ ವಿದ್ಯಮಾನವಾಗಿಬಿಟ್ಟಿದೆ.**

**ಸಾಮಾಜಿಕ ಅಸಮಾನತೆಯನ್ನು, ಅಸಹಿಷ್ಣುತೆಯನ್ನು ಉಲ್ಬಣಗೊಳಿಸುತ್ತಿರುವ ಪ್ರಭುತ್ವದ ನೀತಿಗಳು ಬಡವರಿಗೆ, ಕೂಲಿಕಾರರಿಗೆ, ರೈತಾಪಿ ವರ್ಗಕ್ಕೆ ಮೃತ್ಯುಪಾಯವಾಗಿ ಪರಿಣಮಿಸಿವೆ. ಇಂದಿನ ಕೇಂದ್ರ ಸರ್ಕಾರದ ಅಭಿವೃದ್ಧಿ ನೀತಿಯು ಉಳ್ಳವರಿಗೆ ಮನ್ನಣೆ: ಉಳಿದವರಿಗೆ ಸೆರೆಮನೆ ಅನ್ನುವಂತಾಗಿದೆ. ಇದಕ್ಕೆ ಕೊನೆ ಹಾಡಬೇಕಾಗಿದೆ.**

ಭಾರತದ ಸಾಮಾಜಿಕ ವ್ಯವಸ್ಥೆಯು ಆತಂಕ, ಭಯ–ಭೀತಿ ಹುಟ್ಟಿಸುವ ರೀತಿಯಲ್ಲಿ ಬದಲಾಗುತ್ತಿದೆ. ಸಮಾಜವು ತನ್ನ ತಾಳ್ಮೆಯ ಗುಣವನ್ನು ಕಳೆದುಕೊಂಡಿರುವಂತೆ ಕಾಣುತ್ತಿದೆ. ಬೀದಿ ಬೀದಿಯಲ್ಲಿ ಜನರು ಕಾನೂನನ್ನು ಕೈಗೆ ತೆಗೆದುಕೊಂಡು ಅಪರಿಚಿತರನ್ನು, ಮುಗ್ಧರನ್ನು ತುಂಡು ತುಂಡಾಗಿ ಕುರಿ–ಕೋಳಿಗಳಂತೆ ಕತ್ತರಿಸಿ ಹಾಕುತ್ತಿದ್ದಾರೆ. ಮಕ್ಕಳನ್ನು ಎತ್ತಿಕೊಂಡು ಹೋಗುವವರು, ಮಾಟ–ಮಂತ್ರ ಮಾಡುವವರು, ಕಳ್ಳರು ಮುಂತಾದ ನೆಪಗಳ ಮೇಲೆ ಇವು ನಡೆಯುತ್ತಿವೆ. ಅವರು ಮಕ್ಕಳನ್ನು ಕಳವು ಮಾಡುವವರಿರಬಹುದು. ಆದರೆ ಅವರನ್ನು ಕೊಲ್ಲುವುದಕ್ಕೆ ಯಾರು ಅಧಿಕಾರ ಕೊಟ್ಟವರು? ಇದು ನಮ್ಮ ಸಂವಿಧಾನದ ಪರಿಚ್ಛೇದ 21ರ ಬದುಕುವ ಹಕ್ಕಿನ ಉಲ್ಲಂಘನೆಯಾಗಿದೆ. ಆದರೆ ಕಾನೂನು, ಪೊಲೀಸ್ ವ್ಯವಸ್ಥೆ ಮತ್ತು ನ್ಯಾಯಾಂಗಗಳನ್ನು ಅಪ್ರಸ್ತುತ ಮಾಡುವ ಇಂತಹ ಕ್ರಮಗಳು ನಾಗರಿಕ ಸಮಾಜಕ್ಕೆ ಶೋಭಿಸುವುದಿಲ್ಲ. ಧರ್ಮದ ಹೆಸರಿನಲ್ಲಿ ಜನರನ್ನು ಕೊಲ್ಲಲಾಗುತ್ತಿದೆ ಮತ್ತು ಧರ್ಮ ರಕ್ಷಣೆಯ ಹೆಸರಿನಲ್ಲಿ ಸಂಘಟನೆಗಳು ಅವುಗಳನ್ನು ಸಮರ್ಥಿಸುತ್ತಿವೆ. ನಾಗರಿಕ ಸಮಾಜದ ಸಂದರ್ಭದಲ್ಲಿ ಮೊದಲನೆಯದಕ್ಕಿಂತ ಎರಡನೆಯದು ಹೆಚ್ಚು ಅಪಾಯಕಾರಿಯೂ ಮತ್ತು ಆತಂಕಕಾರಿಯೂ ಆಗಿ ಕಾಣುತ್ತದೆ.






ಈ ಬಗೆಯ ಸಾಮಾಜಿಕ ಉಗ್ರವಾದವು ಕಳೆದ ನಾಲ್ಕು–ಐದು ವರ್ಷಗಳ ಅವಧಿಯಲ್ಲಿ ಅಧಿಕವಾಗಿದೆ. ಅಸಹಿಷ್ಣುತೆಯನ್ನು ಅನೇಕ ಸಾಮಾಜಿಕ ಸಂಘಟನೆಗಳು, ರಾಜಕೀಯ ಪಕ್ಷಗಳು ಪ್ರೋತ್ಸಾಹಿಸುತ್ತಿವೆ. ಅನೇಕ ಶಾಸಕರು ಮತ್ತು ಸಂಸದರು ಅಪರಾಧಿಗಳ ಪರವಾಗಿ ನಿಲ್ಲುತ್ತಿದ್ದಾರೆ. ಮಹಿಳೆಯರ ಮೇಲಿನ ಆಕ್ರಮಣ, ಅತ್ಯಾಚಾರ, ಕೊಲೆ, ದೌರ್ಜನ್ಯ ಇನ್ನಿಲ್ಲದಂತೆ ನಡೆಯುತ್ತಿವೆ. ಇಂತಹ ವಿಷಯಗಳ ಬಗ್ಗೆ ಸಮಾಜವು ಸೂಕ್ಷ್ಮ ಭಾವನೆಯನ್ನು ಕಳೆದುಕೊಂಡು ಬಿಟ್ಟಿದೆ. ಸಾಮಾಜಿಕ ಕೊಲೆಗಡುಕತನವು ಇಂದು ಗೌರವದ, ಧರ್ಮ ರಕ್ಷಣೆಯ, ದೇಶಭಕ್ತಿಯ ಸಂಗತಿಯಾಗಿ ಬಿಟ್ಟಿದೆ. ಇದನ್ನು ಸಮರ್ಥಿಸುವ ಸಂಘಟನೆಗಳಿಗೆ ಬೆಂಬಲವಾಗಿ ಅನೇಕ ಬರಹಗಾರರು, ಕೆಲವು ಕವಿಗಳು ಮತ್ತು ಬಹುಪಾಲು ಸಾಧು–ಸಂತರು ನಿಂತಿರುವುದು ಭಯವನ್ನುಂಟು ಮಾಡುವ ಸಂಗತಿಯಾಗಿದೆ. ಅಚ್ಚರಿಯ ಸಂಗತಿಯೆಂದರೆ ಕೆಲವು ಸಾಧು–ಸಂತರು ಇಂದು ಸಾಮಾಜಿಕ ಕ್ಷೋಭೆಯ ಮೂಲವೂ ಆಗಿದ್ದಾರೆ. ಆಶ್ರಮಗಳಲ್ಲಿ ದೇವರ ಉಪಾಸನೆ ನಡೆಸಬೇಕಾದ ಇವರು ಇಂದು ಸೆರೆಮನೆಯ ಬಂದಿಗಳಾಗುತ್ತಿದ್ದಾರೆ. ಪ್ರಭುತ್ವವು ಹೆಚ್ಚು ಹೆಚ್ಚು ಮಿಲಿಟರಿ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ.

ಸಾಮಾಜಿಕ ಅಸಹಿಷ್ಣುತೆ, ಪರಿಸರ ಮಾಲಿನ್ಯ, ಕೂಲಿಕಾರ ಶೋಷಣೆ, ಮಹಿಳೆಯ ಮೇಲಿನ ದೌರ್ಜನ್ಯಗಳ ವಿರುದ್ಧ ನಡೆಯುವ ಹೋರಾಟಗಳನ್ನು ಒಂದೋ ನಕ್ಸಲೀಯರು, ಮಾವೋವಾದಿಗಳು ಎಂಬ ಹೆಸರಿನಲ್ಲಿ ಹತ್ತಿಕ್ಕಲಾಗುತ್ತಿದೆ ಇಲ್ಲವೇ ಪೋಲೀಸ್ ಶಕ್ತಿಯನ್ನು ಬಳಸಿಕೊಂಡು ಜನರ ಪ್ರಾಣವನ್ನು (ರಕ್ತ) ಚೆಲ್ಲಾಡಲಾಗುತ್ತಿದೆ. ರಾಜಕೀಯದ ಬಗ್ಗೆ ವಿಮರ್ಶೆ ಮಾಡುವುದು ಸಾಧು ಸಂತರಿಗೆ ಇಂದು ಅಪಥ್ಯದ ಸಂಗತಿಯೇನಲ್ಲ. ಉದಾಹರಣೆಗೆ 2014ರ ಮಾರ್ಚ್ 20 ರಂದು ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರು 'ಮೋದಿಯವರು ಅಧಿಕಾರಕ್ಕೆ ಬಂದರೆ ರೂಪಾಯಿಯು ರೂ.40 ದರದಲ್ಲಿ ಬಲಿಷ್ಠವಾಗುತ್ತದೆ ಅನ್ನುವುದು ಸ್ವಾಗತಾರ್ಹ' ಎಂದು ಆಶೀರ್ವಾದ ನೀಡಿದ್ದರು. ಇಂದು ಅವರು ಯಾರ ಪರವಾಗಿ ಪ್ರಚಾರ ಮಾಡಿದ್ದರೋ ಅವರ ಸರ್ಕಾರದ ನಾಲ್ಕು ವರ್ಷಗಳ ಆಡಳಿತದ ಪರಿಣಾಮವಾಗಿ ರೂಪಾಯಿಯ ಅಂತಾರಾಷ್ಟ್ರೀಯ ಮೌಲ್ಯವು ಒಂದು ಡಾಲರಿಗೆ ಹಿಂದೆಂದೂ ಕಾಣದ ರೂ.68 ಕ್ಕೆ ಕುಸಿದಿದೆ. ಇಂದು ಅವರಾಗಲಿ ಅಥವಾ ಇದೇ ರೀತಿಯ ಅಂದಿನ ಸರ್ಕಾರವನ್ನು ಟೀಕಿಸುತ್ತಿದ್ದ ಪ್ರಸಿದ್ಧ ಬರಹಗಾರ ಚೇತನ್ ಭಗತ್ ಅವರಾಗಲಿ ಮಾತನಾಡುತ್ತಿಲ್ಲ.

ಇನ್ನು ಹತ್ತಾರು ವರ್ಷ ಮೋದಿಯವರು ಅಧಿಕಾರದಲ್ಲಿರಬೇಕು ಅನ್ನುವ ಎಸ್. ಎಲ್. ಭೈರಪ್ಪ ಅವರು ಅಮಾಯಕರ ಹಿಂಸಾತ್ಮಕ ಕೊಲೆಗಳ ಬಗ್ಗೆ, ಅನಾಣ್ಯೀಕರಣವು ಬಡ ದುಡಿಮೆಗಾರರಿಗೆ ಉಂಟು ಮಾಡಿರುವ ಅಘಾತಕಾರಿ ಪರಿಣಾಮಗಳ ಬಗ್ಗೆ, ಜಿಎಸ್‌ಟಿಯು ಸಣ್ಣ–ಪುಟ್ಟ ವ್ಯಾಪಾರಿಗಳ ಮೇಲೆ ಮಾರಣಾಂತಿಕ ಪರಿಣಾಮ ಉಂಟು ಮಾಡುತ್ತಿರುವುದರ ಬಗ್ಗೆ ಚಕಾರವೆತ್ತುತ್ತಿಲ್ಲ. ಅರಿಶಿಣ–ಕುಂಕುಮ, ಬಳೆ, ಕರ್ಪೂರ ಮುಂತಾದವುಗಳನ್ನು ಗುಡಿಯ ಮುಂದೆ ಮಾರಾಟ ಮಾಡುತ್ತಿರುವ ಬಡ ಮಹಿಳೆಯರು ಇಂದು ಜಿಎಸ್‌ಟಿ ಜಾಲಕ್ಕೆ ಒಳಗಾಗಬೇಕಾಗಿದೆ. ಡಿಜಿಟಲೈಸೇಶನ್ ಅನ್ನುವುದು ದೇಶಭಕ್ತಿಯ ಸಂಗತಿಯಾಗಿ ಬಿಟ್ಟಿದೆ. ದಿನನಿತ್ಯದ ಬದುಕಿಗಾಗಿ ನಗದನ್ನು ಬಡವರು, ರೈತಾಪಿ ಜನರು, ಕೂಲಿಕಾರರು ಬಳಸುವುದು ಪ್ರಭುತ್ವಕ್ಕೆ ದೇಶದ್ರೋಹವಾಗಿ ಕಾಣುತ್ತಿದೆ.

ದಯವೇ ಧರ್ಮದ ಮೂಲವೆಂದು, ಅಹಿಂಸೆಯೆ ಪರಮ ಧರ್ಮವೆಂದು ಹೇಳಿದ ನಾಡಿನಲ್ಲಿ ಪ್ರಗತಿಪರರ, ವಿದ್ವಾಂಸರ, ಸಾಮಾಜಿಕ ಹೋರಾಟಗಾರರ ಕೊಲೆಗಳು ನಡೆಯುತ್ತಿವೆ. ಈ ಕೊಲೆಗಾರರೂ ಸಹ ತಳವರ್ಗಕ್ಕೆ ಸೇರಿದ ಮುಗ್ಧರಾಗಿದ್ದಾರೆ. ಆದರೆ ಅವರನ್ನು ಪ್ರಚೋದಿಸುವಂತಹ ವಾತಾವರಣವನ್ನು ಸೃಷ್ಟಿಸುವ ಶಕ್ತಿಗಳು ತೆರೆಮರೆಯಲ್ಲಿ ಉಳಿದು ಬಿಡುತ್ತವೆ. ಇವರ ತಲೆಗಳಲ್ಲಿ ಹುಳ ಬಿಡುವ ಜನರು ಮತ್ತು ಸಂಸ್ಥೆಗಳು ತಮ್ಮ ಕಾರ್ಯವನ್ನು ಮುಂದುವರಿಸುತ್ತಿರುತ್ತವೆ. ಕೊಲೆಗಡುಕತನದಲ್ಲಿ ನಿರತರಾಗಿರುವವರನ್ನು ಶಿಕ್ಷಿಸುವುದು ಒಂದು ಬಗೆ: ಆದರೆ ಅವರನ್ನು ಇಂತಹ ಕೃತ್ಯಗಳಿಗೆ ತರಬೇತಿ ನೀಡಿ ಪ್ರಚೋದಿಸುತ್ತಿದ್ದಾರಲ್ಲ, ಆ ಶಕ್ತಿಗಳನ್ನು ಗುರುತಿಸುವುದು ಮತ್ತೊಂದು ಬಗೆ. ಎರಡೂ ಸಂಗತಿಗಳು ಬಹಳ ಮುಖ್ಯ. ಈ ಬಗೆಯ ಕೃತ್ಯಗಳು ವ್ಯಕ್ತಿಗತ ನೆಲೆಯಲ್ಲಿ ನಡೆಯುವುದು ಸಾಧ್ಯವಿಲ್ಲ. ಇವುಗಳ ಹಿಂದೆ ಸಂಘಟಿತ ಶಕ್ತಿಗಳಿರುತ್ತವೆ. ಅದಿಲ್ಲದೆ ಇಂತಹ ಕೊಲೆ, ರಕ್ತಪಾತ, ಹಿಂಸೆ ನಡೆಯುವುದು ಸಾಧ್ಯವಿಲ್ಲ. ಅತ್ಯಂತ ದುರದೃಷ್ಟದ ಸಂಗತಿಯೆಂದರೆ ಇಂದು ಸುದ್ದಿ ಮಾಧ್ಯಮಗಳು ನಾಡಿನಲ್ಲಿ ಇಂತಹ ವಾತಾವರಣವನ್ನು ಸೃಷ್ಟಿಸುವುದಕ್ಕೆ, ಅದಕ್ಕೆ ಪರವಾದ ರೀತಿಯಲ್ಲಿ ಸುದ್ದಿಯನ್ನು ತಿರಿಚಲು ಸಿದ್ಧ ಅನ್ನುವುದನ್ನು ಮುಗುಮ್ಮಾಗಿ ಒಪ್ಪಿಕೊಂಡಿರುವ ಮಾಧ್ಯಮ ಪ್ರಭುಗಳ ಕ್ರಮಗಳು ಪ್ರಜಾಪ್ರಭುತ್ವಕ್ಕೆ, ಸ್ವಾತಂತ್ರ್ಯಕ್ಕೆ ಅಘಾತಕಾರಿಯಾಗಿ ಪರಿಣಮಿಸಿವೆ. ಸುದ್ದಿಯನ್ನು ನಿರ್ಲಿಪ್ತವಾಗಿ, ಆಲಿಪ್ತವಾಗಿ ನೀಡುವುದಕ್ಕೆ ಪ್ರತಿಯಾಗಿ ಇವು ತಮ್ಮದೇ ಪೂರ್ವಗ್ರಹಪೀಡಿತ ಟೀಕೆ ಟಿಪ್ಪಣಿ ಮೂಲಕ ಭಯ–ಭೀತಿಯ ವಾತಾವರಣವನ್ನು ಹುಟ್ಟಿಸುವ ಕೆಲಸವನ್ನು ಮಾಡುತ್ತಿವೆ. ಸಾಮಾಜಿಕ ವಿದ್ಯಮಾನಗಳ ಬಗ್ಗೆ ಕೇಂದ್ರ ಸರ್ಕಾರವು ಮೌನದಿಂದಿರುವುದು ಸರಿಯಲ್ಲ. ಅದು ಇಂತಹ ಕೃತ್ಯಗಳ ಬಗ್ಗೆ ಮಾತನಾಡುತ್ತಿಲ್ಲ. ಇದರಿಂದ ಈ ಶಕ್ತಿಗಳಿಗೆ ಮತ್ತಷ್ಟು ಪ್ರೋತ್ಸಾಹ ದೊರೆತಂತಾಗುತ್ತದೆ.

ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ ನಾಡಿನಲ್ಲಿ ಕಾರ್ಪೋರೇಟ್ ಶಕ್ತಿಗಳು ಅಕರಾಳ–ವಿಕರಾಳ ಬೆಳೆಯುತ್ತಿವೆ. ಪ್ರಭುತ್ವವು ಅವುಗಳಿಗೆ ಬೆಂಬಲವಾಗಿ ನಿಂತಿರುವಂತೆ ಕಾಣುತ್ತದೆ. ತಮಿಳು ನಾಡಿನ ತೂತುಕುಡಿಯಲ್ಲಿ ತಾಮ್ರ ಕಾರ್ಖಾನೆ ವಿರುದ್ಧ ನಡೆದ ಚಳುವಳಿಯಲ್ಲಿ ಜನತೆಯ ಪರವಾಗಿ ನಿಲ್ಲುವುದಕ್ಕೆ ಪ್ರತಿಯಾಗಿ ಕಾರ್ಪೋರೇಟ್ ಪರವಾಗಿ ನಿಂತು ಪ್ರಭುತ್ವ ಅಮಾಯಕರ ಸಾವಿಗೆ ಕಾರಣವಾಗಿಬಿಟ್ಟಿತು. ವಿಷವನ್ನು ಉಗುಳುತ್ತಿರುವ ಕಾರ್ಖಾನೆಗಳನ್ನು ಮುಚ್ಚುವುದಕ್ಕೆ ಅಥವಾ ಅವುಗಳಿಂದ ಜರ್ಜರಿತರಾಗಿರುವ, ವಿಷದ ಗಾಳಿಯನ್ನು ಕುಡಿದು ಅನೇಕ ರೋಗ ರುಜಿನಗಳಿಗೆ ತುತ್ತಾಗಿರುವ ಜನರ ಪುನರ್ವಸತಿ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರ ಅಭಿವೃದ್ಧಿ ಹೆಸರಿನಲ್ಲಿ ಉದ್ದಿಮೆ ಪರವಾಗಿ ನಿಂತಿರುವುದು ಏನನ್ನು ಸೂಚಿಸುತ್ತದೆ? ಸಾಮಾನ್ಯ ಜನರನ್ನು ಇಂದು ಪ್ರಭುತ್ವವು ಅಪರಾಧಿಗಳಂತೆ ನೋಡುತ್ತಿದೆ. ಅದನ್ನು ಪ್ರಶ್ನೆ ಮಾಡುವವರನ್ನು ನಕ್ಸಲೀಯರೆಂದು, ಮಾವೋವಾದಿಗಳೆಂದು, ಅಭಿವೃದ್ಧಿ ವಿರೋಧಿಗಳೆಂದು ಪೊಲೀಸ್ ಶಕ್ತಿಯನ್ನು ಬಳಸಿಕೊಂಡು ಹಿಂಸಾತ್ಮಕವಾಗಿ ಹತ್ತಿಕ್ಕುತ್ತಿದೆ. ಭಿಮಕೊರೆಗಾಂವ್ ಚಳುವಳಿಯ ನೇತಾರರನ್ನು ಇದೇ ನೆಪದಲ್ಲಿ ಸೆರೆಮನೆಗೆ ಅಟ್ಟಲಾಗಿದೆ.

ಆದರೆ ಈ ಪ್ರಭುತ್ವಕ್ಕೆ ಸಾವಿರಾರು ಕೋಟಿ ಬ್ಯಾಂಕ್ ಸಾಲವನ್ನು ಹಿಂತಿರುಗಿಸದೆ ಬ್ಯಾಂಕುಗಳ ಬಿಕ್ಕಟ್ಟಿಗೆ ಕಾರಣವಾಗಿರುವ ಕಾರ್ಪೋರೇಟ್ ಶಕ್ತಿಗಳು ಅಪರಾಧಿಗಳಾಗಿ ಕಾಣುತ್ತಿಲ್ಲ. ಅವರನ್ನು ಅಭಿವೃದ್ಧಿಯ ಹರಿಕಾರರೆಂದು ಪ್ರಭುತ್ವ ಪೋಷಿಸುತ್ತಿದೆ. ರೈತರ ಸಾಲ ಮನ್ನಾ ಇದಕ್ಕೆ ವಿತ್ತೀಯ ಅಶಿಸ್ತಿನ ಸಂಗತಿಯಾಗಿ ಕಾಣುತ್ತದೆ. ಉದ್ದಿಮೆಗಳಿಗೆ ವಾರ್ಷಿಕ ನೀಡುತ್ತಿರುವ ರೂ.5.5. ಲಕ್ಷ ಕೋಟಿ ತೆರಿಗೆ ವಿನಾಯಿತಿಯು(ರೆವಿನ್ಯೂ ಪೋರ್‌ಗಾನ್) ವಿತ್ತೀಯ ಶಿಸ್ತಾಗಿ ಕಾಣುತ್ತಿದೆ. ವಾಪಸ್ಸಾಗದ ಬ್ಯಾಂಕ್ ಸಾಲದ ಮೊತ್ತ ರೂ.8.5 ಲಕ್ಷ ಕೋಟಿ ವಿತ್ತೀಯ ಅಶಿಸ್ತಾಗಿ ಕಾಣುತ್ತಿಲ್ಲ. ಬ್ಯಾಂಕುಗಳ ಸಾವಿರಾರು ಕೋಟಿ ಸಾಲವನ್ನು ವಾಪಸ್ಸು ಮಾಡದೆ ಅವುಗಳಿಗೆ, ಸಮಾಜಕ್ಕೆ ಮೋಸ ಮಾಡಿ ದೇಶದಿಂದ ಪಲಾಯನ ಮಾಡುತ್ತಿರುವವರನ್ನು ಹೆಡೆಮುಡಿ ಕಟ್ಟಿ ಕಾನೂನು ಪ್ರಕಾರ ಶಿಕ್ಷಿಸುವುದು ಪ್ರಭುತ್ವಕ್ಕೆ ಸಾಧ್ಯವಾಗುತ್ತಿಲ್ಲ. ಸ್ವಿಸ್ ಬ್ಯಾಂಕುಗಳಲ್ಲಿ ಠೇವಣಿ ಮಾಡಿರುವ ಭಾರತೀಯರನ್ನು ದಂಡಿಸುವುದಾಗಿ ಆಶ್ವಾಸನೆ ನೀಡಿ ಅಧಿಕಾರಕ್ಕೆ ಬಂದ ಪ್ರಭುತ್ವವು ಇಂದು ಅಲ್ಲಿ ಠೇವಣಿಯಾಗಿರುವ ರೂ. 7000 ಕೋಟಿ ಹಣ ಕಪ್ಪುಹಣವೆಂದು ಹೇಳಲು ಬರುವುದಿಲ್ಲವೆಂದು, ಅದು ಕಾನೂನುಬದ್ಧವೇ ಆಗಿರಬಹುದೆಂದು ಸಮಜಾಯಿಷಿ ನೀಡುತ್ತಿದೆ. ಅಂದರೆ ವಿದೇಶಗಳಿಗೆ ಇಲ್ಲಿನ ಹಣವನ್ನು ಕೊಂಡ್ಯೊಯುವುದು ಪ್ರಭುತ್ವಕ್ಕೆ ಅಪರಾಧವಲ್ಲ. ಕಪ್ಪುಹಣದ ಸಂಕಥನದ ಮೂಲಕ ಅಧಿಕಾರಕ್ಕೆ ಬಂದ ಪ್ರಭುತ್ವಕ್ಕೆ ಇಂದು ಅದು ಸಮಸ್ಯೆಯಾಗಿ ಉಳಿದಿಲ್ಲ. ಕಪ್ಪುಹಣ ವಿರೋಧಿ ಕ್ರಮ ಅನ್ನುವುದು ಇಂದು ರಾಜಕೀಯ ವಿರೋಧಿಗಳನ್ನು ಹತ್ತಿಕ್ಕುವ ಅಸ್ತ್ರವಾಗಿ ಮಾತ್ರ ಪರಿಣಮಿಸಿದೆ.

ಇಂದು ಬಡವರು ಅಪರಾಧಿಗಳಾಗಿ ಬಿಟ್ಟಿದ್ದಾರೆ. ಉದ್ಯಮಪತಿಗಳು ಅಭಿವೃದ್ಧಿಯ ಹರಿಕಾರರಾಗಿದ್ದಾರೆ. ಉಳ್ಳವರನ್ನು ಓಲೈಸುವುದು ಇಂದಿನ ಪ್ರಭುತ್ವದ ನೀತಿಯಾಗಿದೆ. ಉಳಿದವರನ್ನು ಧರ್ಮದ ಹೆಸರಿನಲ್ಲಿ, ದೇಶಭಕ್ತಿಯ ನೆಪದಲ್ಲಿ ಭಾವನಾತ್ಮಕ ಸುಳ್ಳುಗಳ ಮೂಲಕ 'ಸುಮ್ಮನೆ' ಮಾಡಲಾಗುತ್ತಿದೆ. ಪ್ರಭುತ್ವದ ವಿರುದ್ಧ ಮಾತನಾಡುವವರು, ಸಾಮಾಜಿಕ ಹೋರಾಟಗಾರರು, ಸ್ವಾತಂತ್ರ್ಯವನ್ನು ಒತ್ತಾಯಿಸುವವರು ಇಂದು ನಕ್ಸಲೀಯರಂತೆ, ಮಾವೋವಾದಿಗಳಂತೆ, ಉಗ್ರವಾದಿಗಳಂತೆ, ಕಮ್ಯೂನಿಷ್ಟರಂತೆ ಕಾಣುತ್ತಿದ್ದಾರೆ. ಸೆರೆಮನೆಗಳಿಗೆ ಸಾಲುಸಾಲಾಗಿ ಹೋಗುತ್ತಿರುವ ಸಾಧು–ಸಂತರು ಇವರಿಗೆ ದೇವರ ಅಪರಾವತರಾಗಿ ಕಾಣುತ್ತಾರೆ. ಪ್ರಭುತ್ವದ ವಿರುದ್ಧ ಮಾತನಾಡುವವರನ್ನೆಲ್ಲ ಪಾಕಿಸ್ಥಾನಕ್ಕೆ ದೂಡಲು ಅನೇಕ ಶಕ್ತಿಗಳು ಭಾರತದಲ್ಲಿ ಸಿದ್ಧವಾಗಿದ್ದಾವೆ. ಮಹಾತ್ಮ ಗಾಂಧಿಯನ್ನು ಕೊಂದ ಗೋಡ್ಸೆಯು ಇಂದು ದೇವರಾಗಿ ಬಿಟ್ಟಿದ್ದಾನೆ. ಅವನಿಗೆ ಗುಡಿಯನ್ನು ಕಟ್ಟಲು ಜನರು ಸಿದ್ಧರಾಗಿದ್ದಾರೆ. ಜವಾಹರಲಾಲ್ ನೆಹರು ಅವರನ್ನು ಒಬ್ಬ ಭಯೋತ್ಪಾದಕನಂತೆ ಚಿತ್ರಿಸಲಾಗುತ್ತಿದೆ. ನೆಹರು ಅವರನ್ನು ಟೀಕಿಸದಿದ್ದರೆ ತಿಂದ ಕೂಳು ಅರಗುವುದಿಲ್ಲವೇನೋ ಅನ್ನುವಂತೆ ಪ್ರಭುತ್ವ ವರ್ತಿಸುತ್ತಿದೆ.

ಅಭಿವೃದ್ಧಿ ಅನ್ನುವುದು ಕೇವಲ ಆರ್ಥಿಕ ಸಮೃದ್ಧಿಯಲ್ಲ ಅನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಉತ್ಪಾದನೆಯನ್ನು, ಬಂಡವಾಳವನ್ನು, ವರಮಾನವನ್ನು ಹೆಚ್ಚಿಸುವುದೇ ಅಭಿವೃದ್ಧಿಯಲ್ಲ. ಮಹಿಳೆಯರನ್ನು ಸೇರಿಸಿಕೊಂಡು ಜನರ ಬದುಕನ್ನು ಉತ್ತಮಪಡಿಸುವುದು ಅಭಿವೃದ್ಧಿ. ತೂತುಕುಡಿಯ ಸಂತ್ರಸ್ಥರು ಅಪರಾಧಿಗಳಾಗಿದ್ದಾರೆ. ಮುಂಬೈನ ಮಾಹುಲ್‌ನ ಮೂಲನಿವಾಸಿಗಳನ್ನು ಮೂಲೋತ್ಪಾಟನೆ ಮಾಡಿ ವಿಷ ಉಗುಳುವ ಕಾರ್ಖಾನೆಗಳಿಗೆ ರಕ್ಷಣೆ ನೀಡಲಾಗುತ್ತಿದೆ. ಭೀಮ ಕೋರೆಗಾಂವ್ ವಿಜಯೋತ್ಸವವು ಮೇಲು ವರ್ಗದ ವಿರುದ್ಧವಾದುದು ಅನ್ನುವ ಒಂದೇ ಕಾರಣಕ್ಕೆ ದೇಶದ್ರೋಹದ ವಿದ್ಯಮಾನವಾಗಿಬಿಟ್ಟಿದೆ.

ಸಾಮಾಜಿಕ ಅಸಮಾನತೆಯನ್ನು, ಅಸಹಿಷ್ಣುತೆಯನ್ನು ಉಲ್ಬಣಗೊಳಿಸುತ್ತಿರುವ ಪ್ರಭುತ್ವದ ನೀತಿಗಳು ಬಡವರಿಗೆ, ಕೂಲಿಕಾರರಿಗೆ, ರೈತಾಪಿ ವರ್ಗಕ್ಕೆ ಮೃತ್ಯುಪಾಯವಾಗಿ ಪರಿಣಮಿಸಿವೆ. ಇಂದಿನ ಕೇಂದ್ರ ಸರ್ಕಾರದ ಅಭಿವೃದ್ಧಿ ನೀತಿಯು ಉಳ್ಳವರಿಗೆ ಮನ್ನಣೆ: ಉಳಿದವರಿಗೆ ಸೆರೆಮನೆ ಅನ್ನುವಂತಾಗಿದೆ. ಇದಕ್ಕೆ ಕೊನೆ ಹಾಡಬೇಕಾಗಿದೆ. ●



# ಹೊಡೆದು ಸಾಯಿಸುವ ಕ್ರೌರ್ಯಗಳು ಆಳುವವರ ಅಭಯಹಸ್ತದ ದುಷ್ಫಲಗಳು

**ಮಕ್ಕಳ ಕಳ್ಳರ ಬಗೆಗಿನ ಆತಂಕದಿಂದ ಉದ್ಭವಿಸುವ ಪೈಶಾಚಿಕ ಮತ್ತು ಬರ್ಬರ ಹಿಂಸೆ ಆಳವಾದ ಸಾಮಾಜಿಕ ರೋಗಲಕ್ಷಣ'ಗಳನ್ನು ಹೊರಗೆಡಹಿದೆ. ಬಹುತೇಕ ಪ್ರಕರಣಗಳಲ್ಲಿ ಸಂತ್ರಸ್ತರು ಬಡವರು, ವಲಸೆ ಕಾರ್ಮಿಕರು, ಮಾನಸಿಕ ಅಸ್ವಸ್ಥರು ಅಥವಾ ಸುಲಭವಾಗಿ ಗುರುತಿಸಬಹುದಾದ ಮುಸ್ಲಿಮರೇ ಆಗಿದ್ದಾರೆ. 2015ರಲ್ಲಿ ಮಹಮದ್ ಅಖ್ಲಾಕ್‌ರನ್ನು ಹೊಡೆದು ಸಾಯಿಸಿದ ಘಟನೆಯೊಂದಿಗೆ ದೇಶದ ವಿವಿಧ ಭಾಗಗಳಲ್ಲಿ ಹಬ್ಬಿರುವ ಇದು ನಮ್ಮ ಸಮಾಜದಲ್ಲಿ ಕೋಮುವಾದಿ ಮತ್ತು ಸಂಕುಚಿತ ಭಾವನೆಗಳು ತೆರೆದಿರುವ ಲೋಪ-ದೋಷಗಳು ಯಾವ ರೀತಿಯಲ್ಲಿ ಅಮಾನವೀಯಗೊಳಿಸುತ್ತಿದೆ ಹಾಗೂ ಅರಾಜಕ ಹಿಂಸೆಗೆ ದಾರಿ ಮಾಡಿಕೊಡುತ್ತಿದೆ ಎಂಬುದರ ಒಂದು ಗಂಭೀರ ಎಚ್ಚರಿಕೆಯಾಗಿದೆ.**



**ಪ್ರಕಾಶ ಕಾರಟ್**

ಕಳೆದ ಎರಡು ತಿಂಗಳಲ್ಲಿ ದೇಶದ ನಾನಾ ಭಾಗಗಳಲ್ಲಿ ಜನಜಂಗುಳಿಗಳ ಹಲ್ಲೆಗಳು ಹಾಗೂ ಹೊಡೆದು ಸಾಯಿಸಿದ ಅನೇಕ ಪ್ರಕರಣಗಳು ನಡೆದಿವೆ. ಇಂಥ ಆಘಾತಕಾರಿ ಹಿಂಸೆಯ ಅಲೆಯಿಂದಾಗಿ ಮೇ ಹಾಗೂ ಜೂನ್ ತಿಂಗಳಲ್ಲಿ 10 ರಾಜ್ಯಗಳಲ್ಲಿ ಕನಿಷ್ಟ ಪಕ್ಷ 30 ಮುಗ್ಧ ಜನರ ಹತ್ಯೆಯಾಗಿದೆ.

ವಾಟ್ಸಾಪ್ ಸಂದೇಶ ಸೇವೆ ಮೂಲಕ 'ಮಕ್ಕಳ ಕಳ್ಳರ' ಬಗ್ಗೆ ಕಳಿಸಿದ ವದಂತಿಗಳುಈ ಹಲ್ಲೆಗಳನ್ನು ಪ್ರಚೋದಿಸಿವೆ. ಹಳ್ಳಿಗಳು ಅಥವಾ ಸಣ್ಣ ಪಟ್ಟಣಗಳಲ್ಲಿ ಕಾಣಿಸಿಕೊಳ್ಳುವ 'ಅಪರಿಚಿತರು' ಮಕ್ಕಳ ಕಳ್ಳರೆಂಬ ಗುಮಾನಿಯಿಂದ ಅವರ ಮೇಲೆ ಎರಗುವ ಜನಜಂಗುಳಿ ಅವರನ್ನು ಅಮಾನುಷವಾಗಿ ಹೊಡೆದು ಸಾಯಿಸುವ ಅಥವಾ ಗಂಭೀರವಾಗಿ ಗಾಯಗೊಳಿಸುವ ಘಟನೆಗಳು ಒಂದರ ಹಿಂದೆ ಒಂದರಂತೆ ನಡೆಯುತ್ತಿವೆ.

ಈ ಹಿಂದೆ ಕೂಡ ಈ ರೀತಿಯ ಘಟನೆಗಳು ನಡೆದಿದ್ದವು. ಆದರೆ ಈಗ ನಡೆಯುತ್ತಿರುವ ಬರ್ಬರ ದಾಳಿಯ ಪ್ರಮಾಣ ಮತ್ತು ತೀವ್ರತೆ ಅಭೂತಪೂರ್ವವಾದುದಾಗಿದೆ. ಈಶಾನ್ಯ ರಾಜ್ಯಗಳಾದ ಅಸ್ಸಾಂ ಮತ್ತು ತ್ರಿಪುರಾ, ಗುಜರಾತ್, ಮಧ್ಯ ಪ್ರದೇಶ, ಬಂಗಾಳ, ಕರ್ನಾಟಕ, ತೆಲಂಗಾಣ ಮತ್ತು ಆಂಧ್ರ ಪ್ರದೇಶದಲ್ಲಿ ಹೊಡೆದು ಸಾಯಿಸಿದ ಗಂಭೀರ ಘಟನೆಗಳು ನಡೆದಿವೆ. ಆದರೆ ಜಾರ್ಖಂಡ್ ಮತ್ತು ಮಹಾರಾಷ್ಟ್ರ ಹೆಚ್ಚು ಪೀಡಿತವಾದ ರಾಜ್ಯಗಳಾಗಿವೆ. ಅಲ್ಲಿ ಅನುಕ್ರಮವಾಗಿ ಏಳು ಮತ್ತು ಒಂಭತ್ತು ಮುಗ್ಧರ ಹತ್ಯೆಗಳಾಗಿವೆ.

ಇಂಥ ಹಿಂಸಾಚಾರದ ಅಲೆಯನ್ನು ಒಂದು ಅಪರೂಪದ ಘಟನೆಯನ್ನಾಗಿ ಕಾಣಬಾರದು. ಗೋಹತ್ಯೆ ಅಥವಾ ಗೋಮಾಂಸ ಸೇವನೆಯ ಹೆಸರಿನಲ್ಲಿ ಮುಸ್ಲಿಮರನ್ನು ಗುರಿಯಾಗಿಸಿಕೊಂಡು ನಡೆದ ಗುಂಪು ಹಿಂಸಾಚಾರ ಹಾಗೂ ಹೊಡೆದು ಸಾಯಿಸಿದ ಹಿನ್ನೆಲೆಯಲ್ಲಿ ಈಗ ಇಂಥ ಘಟನೆಗಳು ನಡೆಯುತ್ತಿವೆ. 2015ರಲ್ಲಿ ಮಹಮದ್ ಅಖ್ಲಾಕ್‌ರನ್ನು ಹೊಡೆದು ಸಾಯಿಸಿದ್ದೇ ಇಂಥ ಮೊದಲ ಘಟನೆಯಾಗಿದ್ದು ನಂತರ ದೇಶದ ವಿವಿಧ ಭಾಗಗಳಲ್ಲಿ ಅದು ಹಬ್ಬಿತು. 'ಗೋ ರಕ್ಷಕ'ರೆಂಬ ಗುಂಪುಗಳು ಕಾನೂನಿನ ಯಾವುದೇ ಭಯವಿಲ್ಲದೆ ಜನರ ಕೈ-ಕಾಲು ಕತ್ತರಿಸುವ ಹಾಗೂ ಕೊಲ್ಲುವ ಕೆಲಸ ಮಾಡಲು ಆರಂಭಿಸಿದರು.

ಮುಸ್ಲಿಮರು ಮತ್ತು ದಲಿತರನ್ನು ಗುರಿಯಾಗಿಸಿಕೊಂಡು ಆರಂಭಿಸಿದ ಭಯದ ವಾತಾವರಣ ಈಗ 'ಮಕ್ಕಳ ಕಳ್ಳತನ' ಎಂಬ ವದಂತಿ ಹಬ್ಬಿಸುವಲ್ಲಿ ಹಾಗೂ ಅದರ ಫಲವಾಗಿ ಗುಂಪು ಹಿಂಸಾಚಾರದ ಸಮೂಹ ಸನ್ನಿಯಲ್ಲಿ ಪರ್ಯವಸಾನಗೊಳ್ಳುತ್ತಿದೆ.

ಬಿಜೆಪಿ ನೇತೃತ್ವದ ಸರಕಾರಗಳು ಮತ್ತು ಆರ್‌ಎಸ್‌ಎಸ್-ಬಿಜೆಪಿ ಕೂಟವು ಗೋರಕ್ಷಕರು ನಡೆಸಿದ ಹಿಂಸಾಚಾರಗಳನ್ನು ಒಂದೋ ಸಮರ್ಥಿಸಿಕೊಳ್ಳುತ್ತಿವೆ ಇಲ್ಲವೇ ಅದನ್ನು ಮಹತ್ವದ್ದಲ್ಲದ ವಿಷಯ ಎಂದು ತಳ್ಳಿಹಾಕುತ್ತಿವೆ. ಹಿಂದೂತ್ವವಾದಿ ಶಕ್ತಿಗಳು 'ಅನ್ಯರ' ವಿರುದ್ಧ ಆರಂಭಿಸಿದ ಪ್ರಚಾರ ಆಗಲೇ ಸಾಕಷ್ಟು ಬಲಿ ಪಡೆದುಕೊಂಡಿದೆ. ಇದುವೇ ಕಾನೂನಿನ ಭಯವಿಲ್ಲದ ಒಂದು ಸಾರ್ವತ್ರಿಕ ವಾತಾವರಣ ಹಾಗೂ ಸಾಮಾಜಿಕ ಮೌಲ್ಯಗಳ ಕುಸಿತಕ್ಕೆ ಇಂಬು ನೀಡಿದೆ.

ಜಾರ್ಖಂಡ್‌ನಲ್ಲಿ ಇಬ್ಬರು ಮುಸ್ಲಿಂ ವರ್ತಕರನ್ನು ಹೊಡೆದು ಸಾಯಿಸಿದ ನಂತರ, ಈ ಹೇಯ ಪ್ರಕರಣದ ನಾಲ್ವರು ಆರೋಪಿಗಳ ಕಾನೂನು ವೆಚ್ಚವನ್ನು ತಾನು ಭರಿಸುವುದಾಗಿ ಗೊಡ್ಡಾದ ಬಿಜೆಪಿ ಸಂಸತ್ ಸದಸ್ಯ ನಿಶಿಕಾಂತ್ ಚೌಧರಿ ಜೂನ್ 13ರಂದು ಪ್ರಕಟಿಸಿದ. ಇದು ಇಂಥ ಹೀನ ಕೃತ್ಯಗಳಿಗೆ ನೀಡಿದ ಒಂದು ಬಹಿರಂಗ ಅನುಮೋದನೆ.

ತ್ರಿಪುರಾದಲ್ಲಿ 11 ವರ್ಷದ ಮಗುವೊಂದರ ಕೊಲೆಯ ನಂತರ, ಮಗುವಿನ ಕುಟುಂಬವನ್ನು ಭೇಟಿ ಮಾಡಿದ ಅಲ್ಲಿನ ಸಚಿವ ರತನ್ ಲಾಲ್ ನಾಥ್ ಮಗುವಿನ ಎರಡೂ ಮೂತ್ರಪಿಂಡಗಳನ್ನು ತೆಗೆಯಲಾಗಿದೆ ಎಂದು ಹೇಳಿದರು. ಈ ಸುಳ್ಳು ಆರೋಪವು ಈಗಾಗಲೇ ಜನರಲ್ಲಿ ಹಬ್ಬಿರುವ ಮಕ್ಕಳ ಕಳ್ಳರ ಕುರಿತ ಆತಂಕವನ್ನು ಹೆಚ್ಚಿಸಿ ಹೊಡೆದು ಸಾಯಿಸುವ ಜನಜಂಗುಳಿ ಹಲ್ಲೆಗಳಿಗೆ ಮೂರು ಜನ ಬಲಿಯಾಗುವಂತಾಯಿತು.


ಬಹಳಷ್ಟು ದಾಳಿಗಳು ಬುಡಕಟ್ಟು ಜನರು ವಾಸಿಸುವ ಒಳನಾಡು ಪ್ರದೇಶಗಳಲ್ಲಿ ನಡೆದಿವೆ. ಮಕ್ಕಳ ಕಳ್ಳರ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಬರುವ ಸಂದೇಶಗಳು ಅಕ್ಷರಶಃ ನಿಜವೆಂದು ಜನರು ನಂಬಿ ಹೊರಗಿನಿಂದ ಯಾರೇ ತಮ್ಮ ಪ್ರದೇಶಗಳಿಗೆ ಬಂದರೂ ಅವರ ವಿರುದ್ಧ ಉನ್ಮಾದಕ್ಕೆ ಒಳಗಾಗಿ ದಾಳಿ ನಡೆಸುತ್ತಾರೆ. ಬಹುತೇಕ ಪ್ರಕರಣಗಳಲ್ಲಿ ಸಂತ್ರಸ್ತರು ಬಡವರು, ವಲಸೆ ಕಾರ್ಮಿಕರು, ಮಾನಸಿಕ ಅಸ್ವಸ್ಥರು ಅಥವಾ ಸುಲಭವಾಗಿ ಗುರುತಿಸಬಹುದಾದ ಮುಸ್ಲಿಮರೇ ಆಗಿದ್ದಾರೆ.

ಆಡಳಿತ ಮತ್ತು ಪೊಲೀಸ್ ವ್ಯವಸ್ಥೆಯ ಪ್ರತಿಕ್ರಿಯೆ ಮಾಮೂಲಿನಂತೆ ತುಂಬಾ ದುರ್ಬಲವಾಗಿದೆ. ಆದರೆ ನಿಜವಾದ ವೈಫಲ್ಯತೆ ಎಂದರೆ ರಾಜಕೀಯ ಮಟ್ಟದಲ್ಲಿ. ಸಂತ್ರಸ್ತ ರಾಜ್ಯಗಳಲ್ಲಿ ರಾಜ್ಯ ಸರಕಾರಗಳ ರಾಜಕೀಯ ನಾಯಕತ್ವ ಸುಳ್ಳು ಪ್ರಚಾರಗಳನ್ನು ಪರಿಣಾಮಕಾರಿಯಾಗಿ ನಿರಾಕರಿಸುವಲ್ಲಿ ಮುಂದೆ ಬರಲಿಲ್ಲ. ಇಂಥ ವಿಚಾರಹೀನ ಜನಜಂಗುಳಿ ಹಿಂಸಾಚಾರವನ್ನು ತಹಬಂದಿಗೆ ತರುವ ದೃಢಸಂಕಲ್ಪವನ್ನು ಅವರು ಸಾರಲಿಲ್ಲ. ಸಾಮಾಜಿಕ ಮಾಧ್ಯಮದ ಬಳಕೆಯಲ್ಲಿ ಪ್ರವೀಣರಾಗಿರುವ ಪ್ರಧಾನಿ ನರೇಂದ್ರ ಮೋದಿ ಈ ವಿಚಾರದಲ್ಲಿ ಮೌನ ತಳೆದಿರುವುದು ಎದ್ದು ಕಾಣುತ್ತದೆ.

ಮಕ್ಕಳ ಕಳ್ಳರ ಬಗೆಗಿನ ಆತಂಕದಿಂದ ಉದ್ಭವಿಸುವ ಪೈಶಾಚಿಕ ಮತ್ತು ಬರ್ಬರ ಹಿಂಸೆ ಆಳವಾದ ಸಾಮಾಜಿಕ ರೋಗಲಕ್ಷಣಗಳನ್ನು ಹೊರಗೆಡಹಿದೆ. ಇದು ನಮ್ಮ ಸಮಾಜದಲ್ಲಿ ಕೋಮುವಾದಿ ಮತ್ತು ಸಂಕುಚಿತ ಭಾವನೆಗಳು ತೆರೆದಿರುವ ಲೋಪ-ದೋಷಗಳು ಯಾವ ರೀತಿಯಲ್ಲಿ ಅಮಾನವೀಯಗೊಳಿಸುವ ಹಾಗೂ ಅರಾಜಕ ಹಿಂಸೆಗೆ ದಾರಿ ಮಾಡಿಕೊಡುತ್ತಿದೆ ಎಂಬುದರ ಒಂದು ಗಂಭೀರ ಎಚ್ಚರಿಕೆಯಾಗಿದೆ.

**ಅನು: ವಿಶ್ವ**

ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ | ವ್ಯಂಗ್ಯಚಿತ್ರಗಳು: | ಪಿ.ಮಹಮ್ಮದ್, ವಿಜಯ ಕರ್ನಾಟಕ






## ಯು.ಜಿ.ಸಿ. ಯ ಸ್ಥಾನದಲ್ಲಿ ಹೆಚ್.ಇಸಿ.ಐ: ಶಿಕ್ಷಣದ ವ್ಯಾಪಾರೀಕರಣದ ಸೌಕರ್ಯಕ್ಕಾಗಿ -ಎಸ್‌ಎಫ್‌ಐ

ಯು.ಜಿ.ಸಿ. ಯ ಸ್ಥಾನದಲ್ಲಿ 'ಭಾರತದ ಉನ್ನತ ಶಿಕ್ಷಣ ಆಯೋಗ' (ಹೆಚ್‌ಇಸಿಐ)ರಚಿಸುವ ನಿರ್ಧಾರ ಉನ್ನತ ಶಿಕ್ಷಣದ ಈಗಿರುವ ರಚನೆಯನ್ನು ಬದಲಿಸಿ ಅದನ್ನು ಅನಿಯಂತ್ರಿತಗೊಳಿಸಲು ಬಿಜೆಪಿ ಸರಕಾರದ ಹತಾಶ ಪ್ರಯತ್ನವನ್ನು ತೋರಿಸುತ್ತದೆ ಎಂದು ಈ ನಿರ್ಧಾರವನ್ನು ವಿರೋಧಿಸುತ್ತ ಎಸ್‌ಎಫ್‌ಐನ ಕೇಂದ್ರೀಯ ಕಾರ್ಯಕಾರಿ ಸಮಿತಿ ಹೇಳಿದೆ.

**ಈ ಹೊಸ ಸಂಸ್ಥೆ ಏಕೆ ಬೇಕಾಗಿದೆ ಎಂಬುದನ್ನು ವಿವರಿಸಲು ಸರಕಾರಕ್ಕೆ ಸಾಧ್ಯವಾಗುತ್ತಿಲ್ಲ ಎಂಬುದನ್ನು ಅದು ಈ ಕರಡಿನ ಮೇಲೆ 10ದಿನಗಳ ಒಳಗೆ ಪತ್ರಿಕ್ರಿಯೆಯನ್ನು ಕೊಡಬೇಕು ಎಂದು ಹೇಳಿರುವುದರಿಂದಲೇ ಸ್ಪಷ್ಟವಾಗುತ್ತದೆ.** ಈ ಹಿಂದೆ ಯುಜಿಸಿ ಮತ್ತು ಎಐಸಿಟಿಇಯನ್ನು ರದ್ದು ಮಾಡಿ ಎಚ್‌ಇಇಆರ್‌ಎ ಎಂಬುದನ್ನು ತರಲು ಈ ಸರಕಾರ ಯೋಜಿಸಿತ್ತು. ಆದರೆ ಅದಕ್ಕೆ ಎಲ್ಲೆಡೆಗಳಿಂದಲೂ ವಿರೋಧ ಬಂತು. ಈಗ ಇನ್ನೊಂದು ಪ್ರಸ್ತಾವವನ್ನು ಹಿಡಿದುಕೊಂಡು ಅದು ಮತ್ತೆ ಬಂದಿದೆ ಎಂದು ಎಸ್‌ಎಫ್‌ಐ ಹೇಳಿದೆ.

ಸರಕಾರದ ಕರಡು ಮೇಲ್ನೋಟಕ್ಕೇ ಹಲವು ಗಂಭೀರ ಆತಂಕಗಳನ್ನು ಹುಟ್ಟಿಸಿದೆ. ಪ್ರಸ್ತಾವಿತ ಆಯೋಗ ಶೈಕ್ಷಣಿಕ ಸಂಸ್ಥೆಗಳಿಗೆ ಅನುದಾನಗಳನ್ನು ಹಂಚುವುದಿಲ್ಲ. ಈ ಪಾತ್ರವನ್ನು ಮಂತ್ರಾಲಯ ವಹಿಸಿಕೊಳ್ಳುತ್ತದೆ , ಈ ಮೂಲಕ ಕೇಂದ್ರ ಸರಕಾರದ ನೇರ ಹಸ್ತಕ್ಷೇಪಕ್ಕೆ ದಾರಿ ಮಾಡಿಕೊಡುತ್ತದೆ.

ಈಗ ಮಾನವ ಸಂಪನ್ಮೂಲ ಇಲಾಖೆ (ಹೆಚ್‌ಆರ್‌ಡಿ)ಯ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿರುವ ಯುಜಿಸಿ ಮೂಲಕ ಅನುದಾನದ ವಿತರಣೆ ಆಗುತ್ತಿದೆ. ಯುಜಿಸಿಗೆ ಒಂದು ಶೈಕ್ಷಣಿಕ ಹಿನ್ನೆಲೆ ಇದೆ. ಆದ್ದರಿಂದ ಅದು ಅನುದಾನಗಳನ್ನು ಶೈಕ್ಷಣಿಕ ಅಗತ್ಯಗಳಿಗೆ ಅನುಗುಣವಾಗಿ ಹಂಚಬಹುದು. ಆದರೆ ಹೆಚ್‌ಆರ್‌ಡಿಗೆ ಇಂತಹ ಹಿನ್ನೆಲೆ ಇಲ್ಲ.

ಇದು ಸರಕಾರೀ ಹಸ್ತಕ್ಷೇಪವನ್ನು ತಗ್ಗಿಸುವುದು ಈ ಆಯೋಗದ ಒಂದು ಗುರಿ ಎಂಬ ಮಾತಿಗೆ ತದ್ವಿರುದ್ಧವಾಗಿದೆ. ಹೆಚ್‌ಇಸಿಐ ಕಾಯ್ದೆ ರಾಷ್ಟ್ರೀಯ ಶೈಕ್ಷಣಿಕ ಧೋರಣೆಯನ್ನು ಚರ್ಚಿಸುವಲ್ಲಿ ಮತ್ತು ರೂಪಿಸುವಲ್ಲಿ ಶೈಕ್ಷಣಿಕ ವ್ಯಕ್ತಿಗಳ ಸಂಖ್ಯೆಯನ್ನು 10ರಿಂದ 2ಕ್ಕೆ ಇಳಿಸುತ್ತದೆ ಎಂದು ಎಸ್‌ಎಫ್‌ಐ ಟೀಕಿಸಿದೆ.

ಇಡೀ ನಿಲುವು ಉನ್ನತ ಶಿಕ್ಷಣ ಸಂಸ್ಥೆಗಳ ಮಾನ್ಯತೆ ಮತ್ತು ಮೌಲ್ಯಮಾಪನದ ಮೇಲೆಯೇ ಗಮನ ಕೇಂದ್ರೀಕರಿಸುತ್ತದೆ. ಈ ಮೂಲಕ ವಿಪರೀತ ನಿಯಂತ್ರಣದ ಒಂದು ವ್ಯವಸ್ಥೆ ನಿರ್ಮಾಣಗೊಳ್ಳುತ್ತದೆ . ಒಟ್ಟಾರೆಯಾಗಿ ಇಡೀ ಒತ್ತು ಕಲಿಯುವ ಫಲಿತಾಂಶದತ್ತ, ಆಪ್ರಕ್ರಿಯೆಯ ಮಿತಿಗಳನ್ನು ಅರಿಯದೆಯೇ ಇದೆ ಎಂದು ಎಸ್‌ಎಫ್‌ಐ ಅಭಿಪ್ರಾಯ ಪಟ್ಟಿದೆ.

**ವಾಸ್ತವವಾಗಿ ಇದು ಶಿಕ್ಷಣದ ಇನ್ನಷ್ಟು ವ್ಯಾಪಾರೀಕರಣಕ್ಕೆ ಸೌಕರ್ಯವನ್ನು ಒದಗಿಸಿಕೊಡುವ ನಿಲುವು. ಇದು ಶಿಕ್ಷಣದ ಕುರಿತ ಕಾರ್ಪೊರೇಟ್ ನಿಲುವು. ಶೈಕ್ಷಣಿಕ ಸಂಸ್ಥೆಗಳು ತಮ್ಮ ನಿರ್ದಿಷ್ಟ ಅಗತ್ಯಗಳನ್ನು ಕಂಡುಕೊಳ್ಳುವ ಪ್ರಕ್ರಿಯೆಯ ಬದಲು ಎಲ್ಲದಕ್ಕೂ ಒಂದೇ ಮಂತ್ರ ಎಂಬ ಮಾದರಿಯನ್ನು ಅನುಸರಿಸುವ ನಿಲುವು**

ಹೆಚ್‌ಇಸಿಐನ ಬಗ್ಗೆ ಬಹಳಷ್ಟು ಒತ್ತಿ ಹೇಳುವ ಅಂಶ ಎಂದರೆ ಅದು ಶೈಕ್ಷಣಿಕ ಸಂಸ್ಥೆಗಳು ಕನಿಷ್ಟ ಮಟ್ಟವನ್ನು ಅನುಸರಿಸುವಂತೆ ಮಾಡುತ್ತದೆ, ಯುಜಿಸಿಯ ಪಾತ್ರ ಅನುದಾನ ನೀಡುವುದಷ್ಟೇ ಆಗಿತ್ತು ಎನ್ನುವುದು.

ಆದರೆ ಇದು ಖಂಡಿತಾ ನಿಜವಲ್ಲ ಎನ್ನುತ್ತದೆ ಎಸ್‌ಎಫ್‌ಐ ಕೇಂದ್ರೀಯ ಕಾರ್ಯಕಾರಿ ಸಮಿತಿ. ಯುಜಿಸಿಗೆ ವಿಶ್ವವಿದ್ಯಾಲಯ ಶಿಕ್ಷಣವನ್ನು ಪ್ರೋತ್ಸಾಹಿಸುವ, ಸಂಯೋಜಿಸುವ ಮತ್ತು ಬೋಧನೆ, ಪರೀಕ್ಷೆ ಹಾಗೂ ಸಂಶೋಧನೆಯ ಮಟ್ಟವನ್ನು ನಿರ್ಧರಿಸುವ ಮತ್ತು ಕಾಯ್ದುಕೊಳ್ಳುವ ಪಾತ್ರವೂ ಇದೆ. ಅದು ಶಿಕ್ಷಣದ ಕನಿಷ್ಟ ಮಟ್ಟ ಕುರಿತಂತೆ ನಿಯಮಾವಳಿಗಳನ್ನು ರೂಪಿಸುತ್ತದೆ ಕೂಡ. ಈ ಮಟ್ಟಗಳನ್ನು ಈಡೇರಿಸದ ಶೈಕ್ಷಣಿಕ ಸಂಸ್ಥೆಗಳ ಪಟ್ಟಿಯನ್ನು ಅದು ಪ್ರಕಟಿಸುತ್ತದೆ.

ಈ ನಿಟ್ಟಿನಲ್ಲಿ **ಯುಜಿಸಿಗೆ ಹೆಚ್ಚಿನ ಅಧಿಕಾರಗಳನ್ನು ಕೊಡಲು ಸಾಧ್ಯವಿದೆ ಎನ್ನುವ ಎಸ್‌ಎಫ್‌ಐ ಯುಜಿಸಿಯಲ್ಲಿನ ಮತ್ತು ಅದರ ಕಾರ್ಯದಲ್ಲಿನ ಕೆಲವು ಕೊರತೆಗಳನ್ನು ನಿವಾರಿಸಿ, ಅದನ್ನು ಹೆಚ್ಚು ಪ್ರಜಾಸತ್ತಾತ್ಮಕ ಮತ್ತು ಪಾರದರ್ಶಕಗೊಳಿಸುವ ಬದಲು ಅದೇ ಸಮಸ್ಯೆಗಳಿರುವ ಇನ್ನೊಂದು ಸಂಸ್ಥೆಯನ್ನು ಹುಟ್ಟುಹಾಕುವುದು ಸರಿಯಲ್ಲ** ಎಂದು ಅಭಿಪ್ರಾಯ ಪಟ್ಟಿದೆ.

ಕೇಂದ್ರ ಸರಕಾರದ ಈ ಪ್ರಯತ್ನದ ವಿರುದ್ಧ ಪ್ರತಿಭಟನೆ ಸಂಘಟಿಸುವಂತೆ ತನ್ನ ಎಲ್ಲ ಘಟಕಗಳಿಗೆ ಕರೆ ನೀಡುವುದಾಗಿ ಎಸ್‌ಎಫ್‌ಐ ಕೇಂದ್ರೀಯ ಸಮಿತಿ ತಿಳಿಸಿದೆ.

# ಗ್ರಾಮೀಣ ಹಾಗೂ ನಗರ ಶ್ರೀಮಂತರಿಗೆ ನೆರವಾದ ಮತ್ತು ರಾಜ್ಯದ ಜನತೆಗೆ ತೆರಿಗೆ ಭಾರ ಹೇರಿದ ರಾಜ್ಯ ಬಜೆಟ್

ರೈತರ ಸಾಲ ಮನ್ನಾ ಮಾಡುವ ಮೂಲಕ ಕೃಷಿ ರಂಗದ ಬಿಕ್ಕಟ್ಟಿಗೆ ಪರಿಹಾರ ನೀಡಲಾಗುವುದೆಂದು ಪ್ರಚಾರ ಪಡಿಸಲಾದ ಬಹುನಿರೀಕ್ಷಿತ ಕರ್ನಾಟಕ ಬಜೆಟ್ 2018–19 ಮುಖ್ಯಮಂತ್ರಿ ಕುಮಾರಸ್ವಾಮಿಯವರಿಂದ ಮಂಡನೆಯಾಗಿದೆ. 47,134 ಕೋಟಿ ರೂಗಳ ಸಾರ್ವಜನಿಕ ಸಾಲ ಹೊಂದಿದ 2,18,488 ಕೋಟಿ ರೂಗಳ ಬಜೆಟ್ ಮಂಡಿಸಿದ್ದಾರೆ.

ರಾಜ್ಯ ಸರ್ಕಾರ ಸುಮಾರು 17.32 ಲಕ್ಷ ಸಾಲಗಳಿಗೆ ಒಟ್ಟು 34 ಸಾವಿರ ಕೋಟಿ ರೂಗಳ ನೆರವು ನೀಡುವ ಮೂಲಕ ತಲಾ ಸಾಲಗಳಿಗೆ 2 ಲಕ್ಷ ರೂ. ಗಳಷ್ಟು ಸಾಲ ಮನ್ನಾ ಘೋಷಿಸಿದೆ. ಅದೇ ರೀತಿ, ಸಾಲ ಮರು ಪಾವತಿದಾರರಿಗೆ ತಲಾ 25 ಸಾವಿರ ರೂಗಳ ನೆರವು ನೀಡಿದೆ. ಇದಕ್ಕಾಗಿ ರಾಜ್ಯದ ಜನತೆಯ ಮೇಲೆ ಸಾಲದ ಹೊರೆಯನ್ನು ಮತ್ತು ದೊಡ್ಡ ತೆರಿಗೆಗಳ ಬರೆಯನ್ನು ಎಳೆದಿದೆ.

ಸಾಲ ಬಾಧಿತರ ವ್ಯಕ್ತಿಗತ ಕೋರಿಕೆಯ ಮೇರೆಗೆ, ಅವರ ಸಾಲಬಾಧೆಯನ್ನು ಪರಿಶೀಲಿಸಿ ಕೇರಳ ಮಾದರಿಯಲ್ಲಿ ಸಾಲ ಮನ್ನಾ ಮಾಡುವ ಮೂಲಕ ಸಾಲಬಾಧಿತರು ಆತ್ಮಹತ್ಯೆಗಳಿಗಿಳಿಯದಂತೆ ತಡೆಯುವ ಪರಿಣಾಮಕಾರಿ ನೀತಿಯನ್ನು ಅನುಸರಿಸುವ ಬದಲು, ರಾಷ್ಟ್ರೀಕೃತ ಹಾಗೂ ಖಾಸಗೀ ಮತ್ತು ಸಹಕಾರ ಬ್ಯಾಂಕುಗಳ ಎಲ್ಲಾ ಸುಸ್ತಿ ಸಾಲಗಳನ್ನು ಮನ್ನಾ ಮಾಡಿದೆ.

ಇದರಿಂದ ಸಾಲಬಾಧಿತರಿಗೆ ಸಿಕ್ಕ ನೆರವಿಗಿಂತ ಗ್ರಾಮೀಣ ಶ್ರೀಮಂತರಿಗೆ ಅದರ ಸಿಂಹ ಪಾಲು ದಕ್ಕಿದಂತಾಗಿದೆ. ಇದೊಂದು ಅಸಮರ್ಪಕ ಯೋಜನೆಯಾಗಿದೆ.

ಅದಾಗಲೇ ತೀವ್ರ ಸಂಕಷ್ಟದಲ್ಲಿರುವ ರಾಜ್ಯದ ಜನತೆಯ ಮೇಲೆ ಸಾಲದ ಹೊರೆಯನ್ನು ಹೇರಿರುವುದು ಮತ್ತು ಪೆಟ್ರೋಲ್, ಡೀಸೆಲ್, ವಿದ್ಯುತ್ ಬೆಲೆ ಏರಿಕೆ ಹಾಗೂ ಸರಕು ಸಾಗಣೆ ವೆಚ್ಚವನ್ನು ಏರಿಸುವ ಮೂಲಕ ಎಲ್ಲ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುವಂತೆ ಕ್ರಮವಹಿಸಿ, ಬಹುತೇಕ ಗ್ರಾಮೀಣ ಪಟ್ಟ ಭದ್ರರಿಗೆ ನೆರವು ನೀಡಲು ಮುಂದಾದುದು ತೀವ್ರ ಖಂಡನೀಯ ವಿಚಾರವಾಗಿದೆ.

ಅದೇ ಸಂದರ್ಭದಲ್ಲಿ ತೆರಿಗೆ ಬಾಕಿ ಉಳಿಸಿಕೊಂಡವರಿಗೆ ಶೇ 100 ದಂಡ ಮತ್ತು ಬಡ್ಡಿ ರಿಯಾಯಿತಿ ಘೋಷಿಸಿ ನಗರಗಳ ಶ್ರೀಮಂತರಿಗೆ ನೆರವು ನೀಡಿದೆ. ತಕ್ಷಣವೇ ಗ್ರಾಮೀಣ ಪಟ್ಟಭದ್ರರಿಗೆ ನೀಡಲಾದ ನೆರವನ್ನು ವಾಪಾಸು ಪಡೆದು ಜನತೆಯ ಮೇಲೆ ಹೇರಲಾದ ಹೊರೆಯನ್ನು ಇಳಿಸುವಂತೆ ಸಿಪಿಐಎಂ ರಾಜ್ಯ ಸಮಿತಿ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತದೆ.

ರಾಜ್ಯದಾದ್ಯಂತ ಸುಮಾರು 28,847 ಕನ್ನಡ ಶಾಲೆಗಳಿಗೆ ಬೀಗ ಜಡಿಯಲು ನಿರ್ಧರಿಸಿರುವುದು ತೀವ್ರ ಖಂಡನೀಯವಾಗಿದೆ. ತಕ್ಷಣ ಅವುಗಳನ್ನು ಮುಚ್ಚುವುದನ್ನು ತಡೆಯಬೇಕು ಮತ್ತು ಅವುಗಳನ್ನು ಬಲಪಡಿಸಲು ಅಗತ್ಯಕ್ರಮಗಳನ್ನು ಕೈಗೊಳ್ಳಬೇಕು.

ಇಂದಿರಾ ಕ್ಯಾಂಟೀನ್ ಗಳನ್ನು ಹೆಚ್ಚುವರಿಯಾಗಿ ತೆರೆಯಲು ನಿರ್ಧರಿಸಿರುವುದು, ವೃದ್ದಾಪ್ಯ ವೇತನ ಹೆಚ್ಚಿಸಿರುವುದು ಸ್ವಾಗತಾರ್ಹವಾದರೂ, ಅನ್ನ ಭಾಗ್ಯ ಯೋಜನೆಯಡಿ ಬಡವರಿಗೆ ನೀಡಲಾಗುವ ಪಡಿತರದಲ್ಲಿ ಎರಡು ಕೇಜಿ ಅಕ್ಕಿ ಕಡಿತ ಮಾಡಿರುವುದು ಸರಿಯಲ್ಲ. ತಕ್ಷಣವೇ ಅದನ್ನು ಹಿಂಪಡೆಯಬೇಕು.

ಹೀಗಾಗಿ, ಇದು ಗ್ರಾಮೀಣ ಪ್ರದೇಶದ ಬಿಕ್ಕಟ್ಟಿಗೆ ಪರಿಹಾರ ನೀಡುವ ಬದಲು ಮತ್ತಷ್ಟು ಉಲ್ಬಣಗೊಳ್ಳಲು ಸಹಾಯ ನೀಡುವಂತಾಗಿದೆ. ಒಟ್ಟಾರೆ,

ರಾಜ್ಯವನ್ನು ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ಲೂಟಿಕೋರ ಜಾಗತೀಕರಣದ ನೀತಿಗಳಿಂದ ಸಂರಕ್ಷಿಸುವ ಯಾವುದೇ ನಿರ್ಧಿಷ್ಠ ನಿರ್ದೇಶನವನ್ನು ಈ ಬಜೆಟ್ ಹೊಂದಿಲ್ಲ ಬದಲಿಗೆ ರಾಜ್ಯವನ್ನು ಮತ್ತಷ್ಟು ಬಿಕ್ಕಟ್ಟಿಗೆ ದೂಡುವ ಅದೇ ಹಳಸಲು ಜಾಗತೀಕರಣದ ನೀತಿಗಳನ್ನು ಜಾರಿಗೆ ತರುವ ಪ್ರಯತ್ನವನ್ನು ಇದು ಮಾಡುತ್ತಿದೆ.

# ಶಿಕ್ಷಣ ಕ್ಷೇತ್ರದ ನಿರ್ಲಕ್ಷ : ವಿಲೀನ ಮತ್ತು ಖಾಸಗೀಕರಣಕ್ಕೆ ಮುಂದಾದ ರಾಜ್ಯ ಬಜೆಟ್

ಮುಖ್ಯಮಂತ್ರಿ ಕುಮಾರ ಸ್ವಾಮಿಯವರು ಮಂಡಿಸಿರುವ ರಾಜ್ಯ ಬಜೇಟನಲ್ಲಿ ಶಿಕ್ಷಣ ಕ್ಷೇತ್ರದ ಬಗ್ಗೆ ನಿರ್ಲಕ್ಷ ತಾಳಲಾಗಿದೆ. ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ ಕರ್ನಾಟಕ ರಾಜ್ಯ ಸಮಿತಿ ಆರೋಪಿಸಿದೆ.

ಕಳೆದ ಬಾರಿ 11.78% ರಷ್ಟು ಹಣ ಮೀಸಲಿಡಲಾಗಿತ್ತು. ಈ ಬಾರಿ 0.78% ರಷ್ಟು ಹಣವನ್ನು ಕಡಿತಗೊಳಿಸಿ ಕೇವಲ 11% ಮಾತ್ರ ಮೀಸಲಿರಿಸಿರುವುದು ಶಿಕ್ಷಣ ಕ್ಷೇತ್ರದ ಬಗ್ಗೆ ಸರಕಾರದ ಕಾಳಜಿ ಎಷ್ಟಿದೆ ಎಂಬುದನ್ನು ತೋರಿಸುತ್ತದೆ.

ಶಾಲಾ, ಕಾಲೇಜ್ ಕಟ್ಟಡ ದುರಸ್ಥಿಗಾಗಿ ಕೇವಲ 150 ಕೋಟಿ ಮೀಸಲಿಡಲಾಗಿದೆ. ರಾಜ್ಯದಲ್ಲಿ ಸಾವಿರಕ್ಕೂ ಹೆಚ್ಚು ಶಾಲಾ – ಕಾಲೇಜುಗಳು ಶಿಥಿಲಾವಸ್ಥೆಯಲ್ಲಿವೇ. ಇವುಗಳನ್ನು ದುರಸ್ಥಿಗೊಳಿಸಲು ಈ ಹಣ ಯಾವುದಕ್ಕೂ ಸಾಕಾಗುವುದಿಲ್ಲ.

**ಶಾಲೆಗಳ ವಿಲೀನದ ಹೆಸರಲ್ಲಿ ಮುಚ್ಚುವಿಕೆ**

ಕಡಿಮೆ ಹಾಜರಾತಿ ಇರುವ 28,847 ಸರಕಾರಿ ಶಾಲೆಗಳನ್ನು ವಿಲೀನದ ಹೆಸರಲ್ಲಿ ಸರಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿದೆ. ದಾಖಲಾತಿ ಹೆಚ್ಚಿಸುವ ಕುರಿತು ಯೋಜನೆ ಹಾಕುವ ಬದಲು ಮುಚ್ಚಲು ಮುಂದಾಗಿರುವುದು ನಾಡ ದ್ರೋಹದ ಕೆಲಸವಾಗಿದೆ. ಶಾಲೆ ವಿಲೀನದ ವಿರುದ್ದ ಎಸ್. ಎಫ್.ಐ. ರಾಜ್ಯವ್ಯಾಪಿ ಹೋರಾಟ ನಡೆಸಲಿದೆ.


**ಖಾಸಗೀಕರಣಕ್ಕೆ ದಾರಿ**

ಭದ್ರತಾ ಸಿಬ್ಬಂದಿಗೆ ತರಬೇತಿ ನೀಡುವುದಕ್ಕಾಗಿ ಶಿವಮೊಗ್ಗದಲ್ಲಿ "ತಾಯಿ ನಾಡು ಭದ್ರತಾ ವಿಶ್ವ ವಿಧ್ಯಾಲಯವನ್ನು" ಖಾಸಗೀ ಸಹಭಾಗಿತ್ವದಲ್ಲಿ ತೆರೆಯುವ ಮೂಲಕ ರಾಜ್ಯದಲ್ಲಿ ಖಾಸಗಿ ವಿ.ವಿ.ಗಳನ್ನು ತೆರೆಯುವ ಕಾರ್ಪೊರೇಟ್ ಕಂಪನಿಗಳ ಪ್ರಸ್ತಾಪಕ್ಕೆ ಜೀವ ತುಂಬಿರುವುದು ಅಪಾಯಕಾರಿ ಯೋಜನೆಯಾಗಿದೆ.

**ಉಚಿತ್ ಬಸ್ ಪಾಸ್ ನೀಡದೆ ವಂಚನೆ**

ಹಿಂದಿನ ಸರಕಾರ ರಾಜ್ಯ ಬಜೆಟ್ ನಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವುದಾಗಿ ಘೋಷಿಸಿತ್ತು. ಅದನ್ನು ಈ ಬಜೇಟ್ ನಲ್ಲಿ ಹಣ ಮೀಸಲಿಡುವ ಮೂಲಕ ಜಾರಿ ಗೊಳಿಸುವುದಾಗಿ ಸರಕಾರ ಹೇಳಿತ್ತು. ಆದರೆ ಉಚಿತ ಬಸ್ ಪಾಸ್ ನೀಡದೆ ವಿದ್ಯಾರ್ಥಿಗಳಿಗೆ ವಂಚಿಸಿರುವುದನ್ನು ಎಸ್. ಎಫ್.ಐ. ರಾಜ್ಯ ಸಮಿತಿಯು ಖಂಡಿಸುತ್ತದೆ.

ಒಟ್ಟಾರೆ ಶಿಕ್ಷಣ ಕ್ಷೇತ್ರವನ್ನು ನಿರ್ಲಕ್ಷ ಮಾಡಿರುವ ರಾಜ್ಯ ಬಜೆಟ್ ವಿರುದ್ಧ ಹೋರಾಟ ನಡೆಸುವಂತೆ ಎಸ್.ಎಫ್.ಐ. ರಾಜ್ಯ ಸಮಿತಿ ತನ್ನೆಲ್ಲ ಘಟಕಗಳಿಗೆ ಕರೆ ನೀಡಿದೆ ಎಂದು ರಾಜ್ಯ ಅಧ್ಯಕ್ಷ ವಿ.ಅಂಬರೀಶ್, ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ ತಿಳಿಸಿದ್ದಾರೆ.




# ಬೆಳೆ ಸಾಲ ಮನ್ನಾದ ಮುಖ್ಯ ಅಂಶಗಳು


ಮುಖ್ಯಮಂತ್ರಿ ಮಂಡಿಸಿದ ಬಜೆಟಿನಲ್ಲಿ ಬೆಳೆ ಸಾಲಮನ್ನಾ ಪ್ರಕಟಿಸಲಾಗಿದೆ. ಇದರ ಬೆನ್ನಲ್ಲೇ ಸಾಲ ಮನ್ನಾ ಯೋಜನೆ ಯಾವ್ಯಾವ ಸಾಲಕ್ಕೆ ಅನ್ವಯವಾಗಲಿದೆ ಹಾಗೂ ಯಾವುದಕ್ಕೆ ಅನ್ವಯವಾಗುವುದಿಲ್ಲ ಎಂಬ ಬಗ್ಗೆ ಮಾರ್ಗಸೂಚಿಯನ್ನೂ ಬಿಡುಗಡೆ ಮಾಡಲಾಗಿದೆ. ಸಾಲಮನ್ನಾ ಬಜೆಟಿನ ಪ್ರಮುಖ ಭಾಗವಾಗಿದ್ದು ಈ ಯೋಜನೆಯ ಮುಖ್ಯ ಅಂಶಗಳನ್ನು ಮಾಹಿತಿಗೆ ಕೊಡಲಾಗಿದೆ


**4 ವರ್ಷಗಳಲ್ಲಿ ಪಾವತಿ:**

ರಾಜ್ಯ ಸರ್ಕಾರ ಮನ್ನಾ ಮಾಡಿರುವ ಬೆಳೆ ಸಾಲದ ಹಣವನ್ನು ನಾಲ್ಕು ವರ್ಷಗಳಲ್ಲಿ ವಾರ್ಷಿಕ, ಅರೆ ವಾರ್ಷಿಕ ಕಂತುಗಳಲ್ಲಿ ಬ್ಯಾಂಕುಗಳಿಗೆ ಮರುಪಾವತಿಸುವುದಾಗಿ ಹೇಳಿದೆ.

ಯಾರಿಗಿಲ್ಲ?

* ಸಹಕಾರಿ ಸಂಘಗಳ ಸಾಲ ಮನ್ನಾ ಯೋಜನೆಯಡಿ ಈಗಾಗಲೇ ಪ್ರಯೋಜನ ಪಡೆದಿರುವ ಕೃಷಿಕರಿಗೆ ಯೋಜನೆ ಲಾಭ ದೊರೆಯುವುದಿಲ್ಲ.
* ರೈತರು ಪಡೆದ ಆಭರಣ ಸಾಲಗಳು
* ಟ್ರಸ್ಟ್‌ಗಳು, ಪಾಲುದಾರಿಕೆ ಸಂಸ್ಥೆಗಳು, ಸಣ್ಣಮಟ್ಟ ಹಣಕಾಸು ಸಂಸ್ಥೆಗಳು, ನಗರ ಸಹಕಾರ ಬ್ಯಾಂಕುಗಳಿಂದ ಪಡೆದ ಸಾಲಗಳು
* ರೂ. 4 ಲಕ್ಷಕ್ಕಿಂತ ಹೆಚ್ಚು ಆದಾಯ ಹೊಂದಿರುವ ಆದಾಯ ತೆರಿಗೆ ಪಾವತಿದಾರರು ಪಡೆದ ಬೆಳೆ ಸಾಲಗಳು
* ವಾಹನಗಳ ಖರೀದಿ ಮತ್ತಿತರ ಆದ್ಯತೆಯಿಲ್ಲದ ಸಾಲಗಳು
* ಕೇಂದ್ರ, ರಾಜ್ಯ ಸರ್ಕಾರ, ಅದರ ಅಂಗ ಸಂಸ್ಥೆಗಳು, ಅರೆ ಸರ್ಕಾರಿ ಸಂಸ್ಥೆಗಳು, ಸಾರ್ವಜನಿಕ ವಲಯದ ಉದ್ದಿಮೆಗಳು, ಬ್ಯಾಂಕ್ ಹಾಗೂ ಶೈಕ್ಷಣಿಕ ವಲಯದ ಸಿಬ್ಬಂದಿಗಳಿಗೆ ಕೊಟ್ಟಿರುವ ಬೆಳೆ ಸಾಲಗಳು
* ಸಂಚಿತ ನಿಧಿಯಿಂದ ತಿಂಗಳಿಗೆ ರೂ.15,000ಕ್ಕಿಂತ ಹೆಚ್ಚು ಪಿಂಚಣಿ ಪಡೆಯುವ ನಿವೃತ್ತಿ ವೇತನದಾರರು (ಮಾಜಿ ಸೈನಿಕರನ್ನು ಬಿಟ್ಟು) ಪಡೆದಿರುವ ಬೆಳೆ ಸಾಲಗಳು.
* ಸ್ವಸಹಾಯ ಗುಂಪುಗಳು ಹಾಗೂ ಜಂಟಿ ಹೊಣೆಗಾರಿಕೆ ಗುಂಪುಗಳು ಪಡೆದ ಸಾಲಗಳು
* ಗುತ್ತಿಗೆ ಬೇಸಾಯಕ್ಕಾಗಿ (ಕಾಂಟ್ರ್ಯಾಕ್ಟ್ ಫಾರ್ಮಿಂಗ್) ಪಡೆದ ಸಾಲಗಳು
* ರೈತರ ಸಾಲ ವಿತರಣೆಗಾಗಿ ಸಕ್ಕರೆ ಕಾರ್ಖಾನೆಗಳಿಗೆ ನೀಡಲಾಗಿರುವ ಸಾಲಗಳು
* ಮೀನುಗಾರಿಕೆ, ಹೈನುಗಾರಿಕೆ,ಕೃಷಿ ಸಂಬಂಧಿತ ಇತರ ಸಾಲಗಳು
* ದುರ್ಬಳಕೆ ಮಾಡಿದ ಸಾಲಗಳು ಅಥವಾ ಠೇವಣಿ ಇಡಲಾಗಿರುವ ಸಾಲಗಳು





**ಯಾರಿಗುಂಟು?**

* ರೈತ, ಆತನ ಪತ್ನಿ ಹಾಗೂ ಅವಲಂಬಿತ ಮಕ್ಕಳು 2009ರ ಏಪ್ರಿಲ್ ಒಂದನೇ ತಾರೀಕಿನ ಬಳಿಕ ಸಾಲ ಪಡೆದು 2017ರ ಡಿಸೆಂಬರ್ 31ರವರೆಗೆ ಮರುಪಾವತಿಸದೆ ಉಳಿಸಿಕೊಂಡಿರುವ ಅವಧಿ ಮೀರಿದ ಬೆಳೆ ಸಾಲ, ಮರುವರ್ಗೀಕರಣ ಮಾಡಿದ ಬೆಳೆ ಸಾಲ, ವಸೂಲಾಗದ ಸಾಲಗಳು (ಎನ್ಪಿಎ)
* ಬೆಳೆ ಬೆಳೆಯಲು ಪಡೆದ ಸಾಲ, ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ ಮತ್ತು ಗರಿಷ್ಠ 12 ರಿಂದ 18 ತಿಂಗಳಲ್ಲಿ ಮರುಪಾವತಿಸುವ ಸಾಲವನ್ನು ಬೆಳೆ ಸಾಲ ಎಂದು ಅರ್ಥೈಸಲಾಗಿದೆ. ಇದು ಪ್ಲಾಂಟೇಷನ್ ಮತ್ತು ತೋಟಗಾರಿಕೆ ಬೆಳೆಗಳಿಗೆ ನೀಡಿರುವ ಬೆಳೆ ಸಾಲಗಳನ್ನೂ ಒಳಗೊಂಡಿರುತ್ತದೆ.
* ರಾಷ್ಟ್ರೀಕೃತ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು, ಪ್ರಾಥಮಿಕ ಸಹಕಾರ ಪತ್ತಿನ ಸಂಘಗಳು, ಕೃಷಿ ಸೇವಾ ಸಹಕಾರ ಸಂಘಗಳ ಬೆಳೆ ಸಾಲ ಮತ್ತು ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲಗಳು ಯೋಜನೆ ವ್ಯಾಪ್ತಿಯೊಳಗೆ ಬರಲಿದೆ.
* ಈ ಎಲ್ಲಾ ಬ್ಯಾಂಕುಗಳಲ್ಲಿ ರೈತರು ಪಡೆದಿರುವ ಒಟ್ಟು ಬೆಳೆ ಸಾಲದ ಮೊತ್ತ ರೂ. 55,328 ಕೋಟಿ ಎಂದು ಅಂದಾಜಿಸಲಾಗಿದೆ.
* ಸಾಲ ಮನ್ನಾ ಯೋಜನೆಯಡಿ ಸುಸ್ತಿ ಆಗಿರುವ ರೈತರ ಒಟ್ಟು ಸಾಲಗಳ ಸಂಖ್ಯೆ 17.32 ಲಕ್ಷ. ಇವುಗಳ ಒಟ್ಟು ಸಾಲದ ಮೊತ್ತ ರೂ. 30,266 ಕೋಟಿ.
* ಹಿಂದಿನ ಸಾಲಿನ ಕೃಷಿ ಸಾಲ, ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲಗಳನ್ನು ಸಕಾಲಕ್ಕೆ ಮರುಪಾವತಿಸಿದ ರೈತರಿಗೆ ರೂ. 25,000 ಅಥವಾ ಮರುಪಾವತಿಸಿದ ಸಾಲಕ್ಕೆ ಸಮನಾದ ಮೊತ್ತ, ಇವೆರಡರಲ್ಲಿ ಯಾವುದು ಕಡಿಮೆಯೋ ಅದನ್ನು ಪ್ರೋತ್ಸಾಹ ಧನವಾಗಿ ಪಾವತಿ.
* ಚಾಲ್ತಿ ಸಾಲ ಹೊಂದಿರುವ 27.67 ಲಕ್ಷ ರೈತರು ಮತ್ತು ಹಿಂದಿನ ಬೆಳೆ ಸಾಲಗಳನ್ನು ಸಕಾಲಕ್ಕೆ ಮರುಪಾವತಿಸಿದ ರೈತರಿಗೆ ರೂ.6,893 ಕೋಟಿವರೆಗೆ ಪ್ರೋತ್ಸಾಹ ಧನ ವಿತರಣೆ.
* ಒಟ್ಟು 44.89 ಲಕ್ಷ ರೈತರ ಕೃಷಿ ಸಾಲ ಖಾತೆಗಳಿಗೆ ಸಂಚಿತವಾಗಿ ರೂ. 37,159 ಕೋಟಿಗಳಷ್ಟು ಲಾಭವಾಗುವ ಅಂದಾಜು.

ಜುಲೈ 4ರಂದು ನರೇಂದ್ರ ಮೋದಿ ಸರಕಾರ ಮುಂಗಾರು ಬೆಳೆಗಳ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ) ಗಳನ್ನು ಪ್ರಕಟಿಸಿದೆ. "ಸರಕಾರ ನಮ್ಮ ರೈತ ಸೋದರ, ಸೋದರಿಯರಿಗೆ ಉತ್ಪಾದನಾ ಖರ್ಚಿನ 1.5 ಪಟ್ಟಿನಷ್ಟು ಕನಿಷ್ಟ ಬೆಂಬಲ ಬೆಲೆ ಕೊಡುವ ಆಶ್ವಾಸನೆ ಈಡೇರಿಸಿದೆ ಎಂದು ನನಗೆ ಸಂತೋಷವಾಗಿದೆ. ಎಂಎಸ್‌ಪಿಯಲ್ಲಿ ಚಾರಿತ್ರಿಕ ಹೆಚ್ಚಳವಾಗಿದೆ. ಎಲ್ಲ ರೈತರಿಗೆ ಅಭಿನಂದನೆಗಳು" ಎಂದು ಪ್ರಧಾನ ಮತ್ರಿಗಳು ಟ್ವೀಟ್ ಮಾಡಿದ್ದಾರೆ.

ಆದರೆ ಇದು ಮುಂಬರುವ ಸಾರ್ವತ್ರಿಕ ಚುನಾವಣೆಗಳ ಹಿನ್ನೆಲೆಯಲ್ಲಿ ರೈತರನ್ನು ಮರುಳು ಮಾಡುವ ಪ್ರಯತ್ನ, ವಾಸ್ತವವಾಗಿ ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಎಂಎಸ್‌ಪಿಗಳನ್ನು ನಿಗದಿ ಮಾಡದೆ ರೈತರಿಗೆ ಮತ್ತೊಮ್ಮೆ ವಿಶ್ವಾಸಘಾತ ಮಾಡಲಾಗಿದೆ, ಅಲ್ಲದೆ ಬೆಳೆ ಖರೀದಿಯ ಬಗ್ಗೆ ಯಾವ ಕ್ರಮಗಳನ್ನು ಕೂಡ ಪ್ರಕಟಿಸಿಲ್ಲವಾದ್ದರಿಂದ ಈ ಬೆಲೆಗಳೂ ಬಹುಪಾಲು ರೈತರಿಗೆ ದಕ್ಕುವುದಿಲ್ಲ ಎಂದು ರೈತ ಸಂಘಟನೆಗಳು ಹೇಳುತ್ತಿವೆ. ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಈ ಬಗ್ಗೆ ಅಂಕಿ-ಅಂಶಗಳನ್ನು ನೀಡುತ್ತ ರಾಜ್ಯಗಳು ಮತ್ತು ಕೇಂದ್ರ ಅಂದಾಜು ಮಾಡಿರುವ ಉತ್ಪಾದನಾ ಖರ್ಚುಗಳು, ರಾಜ್ಯಗಳು ಸೂಚಿಸಿರುವ ಎಂಎಸ್‌ಪಿಗಳು ಮತ್ತು ನರೇಂದ್ರ ಮೋದಿ ನೇತೃತ್ವದ ಸರಕಾರ ಪ್ರಕಟಿಸಿರುವ ಎಂಎಸ್‌ಪಿಗಳನ್ನು ನೋಡಿದರೆ, ಈ ಸರಕಾರ ಪುಷ್ಕಳ ಬೆಲೆಗಳ ಭ್ರಮೆಯನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದೆ, ರೈತರ ಖರ್ಚುಗಳನ್ನು ವಾಸ್ತವ ಖರ್ಚುಗಳಗಿಂತ ಬಹಳ ಕೆಳಗಿನ ಮಟ್ಟದಲ್ಲಿ ಲೆಕ್ಕ ಹಾಕಿ ಪ್ರಕಟಿಸಿರುವ ಎಂಎಸ್‌ಪಿ ವಾಸ್ತವವಾಗಿ ರೈತರಿಗೆ ಮಾಡಿರುವ ವಿಶ್ವಾಸಘಾತವಾಗಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ ಎಂದು ಹೇಳಿದೆ. ಅದರ ಪತ್ರಿಕಾ ಹೇಳಿಕೆಯ ಪೂರ್ಣ ಪಾಠವನ್ನು ಇಲ್ಲಿ ಕೊಡುತ್ತಿದ್ದೇವೆ.



# ಚಾರಿತ್ರಿಕ ಹೆಚ್ಚಳವಲ್ಲ, ಚಾರಿತ್ರಿಕ ವಿಶ್ವಾಸಘಾತ –ಎಐಕೆಎಸ್

## ಸಿ2+50% ಸೂತ್ರದ ಬದಲು ಎ2+ಎಫ್‌ಎಲ್ ಸೂತ್ರ ಬಳಸಿ ರೈತರನ್ನು ಮರುಳು ಮಾಡುವ ಪ್ರಯತ್ನ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಬಿಜೆಪಿ ರೈತರಿಗೆ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ)ಗಳನ್ನು ಸ್ವಾಮಿನಾಥನ್ ಆಯೋಗ ಶಿಫಾರಸು ಮಾಡಿದ ಸೂತ್ರ C2+50%. ಪ್ರಕಾರ ನಿಗದಿ ಮಾಡುವ ಆಶ್ವಾಸನೆ ಕೊಟ್ಟು ಭಾರೀ ನಿರೀಕ್ಷೆಗಳನ್ನು ಉಂಟುಮಾಡಿ 2014ರ ಚುನಾವಣೆಗಳಲ್ಲಿ ರೈತರ ಬೆಂಬಲ ಪಡೆದರು. ಆದರೆ ಈ ಬಾರಿಯೂ ರೈತರಿಗೆ ವಿಶ್ವಾಸಘಾತವಾಗಿದೆ. ಆಶ್ವಾಸನೆಯಂತೆ ಹೆಚ್ಚು ಸಮಗ್ರವಾದ ಸಿ2 ಖರ್ಚುಗಳ ಬದಲು ಎ2+ಎಫ್‌ಎಲ್(A2+FL) ಖರ್ಚುಗಳನ್ನೇ ಆಧರಿಸಿ ಮುಂಗಾರು ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆಗಳನ್ನು ಪ್ರಕಟಿಸಲಾಗಿದೆ. ಅಲ್ಲದೆ ಈಗಲೂ ರೈತರಿಂದ ಬೆಳೆಗಳನ್ನು ಈ ಬೆಲೆಗಳಲ್ಲಿ ಖರೀದಿಸುವ ಆಶ್ವಾಸನೆ ನೀಡುವ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಮುಂಗಾರು ಎಂಎಸ್‌ಪಿಯ ನಿರ್ಧಾರ 'ಚಾರಿತ್ರಿಕ' ಎಂಬುದು ಟೊಳ್ಳು ಬಡಾಯಿಯಷ್ಟೇ. ನಿಜವಾದ ಆಶ್ವಾಸನೆ ಹಾಗೂ ಎ2+ಎಫ್‌ಎಲ್ ಮತ್ತು ಸಿ2 ಖರ್ಚುಗಳ ನಡುವಿನ ಅಂತರವನ್ನು ನೋಡಿದಾಗ ಇದು ಸ್ಪಷ್ಟವಾಗುತ್ತದೆ. ವಾಸ್ತವವಾಗಿ ಇದು ರೈತರಿಗೆ ನೀಡಿದ ಆಶ್ವಾಸನೆಯಂತೆ ಕನಿಷ್ಟ ಸಿ2 ಉತ್ಪಾದನಾ ಖರ್ಚಿನ 150%ಮಟ್ಟದಲ್ಲಾದರೂ ಎಂಎಸ್‌ಪಿ ನಿಗದಿ ಮಾಡದಿರುವ 'ಒಂದು ಚಾರಿತ್ರಿಕ ವಿಶ್ವಾಸಘಾತ.

* ಇಲ್ಲಿ ಕೊಟ್ಟಿರುವ ಕೋಷ್ಟಕ ಎಂಎಸ್‌ಪಿಯನ್ನು ಆಶ್ವಾಸನೆಯಂತೆ ಸಿ2+50% ಸೂತ್ರದ ಪ್ರಕಾರ ಲೆಕ್ಕ ಹಾಕಿದ್ದರೆ, ಸಜ್ಜೆ ಬಿಟ್ಟು ಉಳಿದೆಲ್ಲ ಬೆಳೆಗಳಿಗೆ ಬಹಳ ಹೆಚ್ಚಿರುತ್ತಿತ್ತು ಎಂದು ತೋರಿಸುತ್ತದೆ.
* ಇವನ್ನು ಲೆಕ್ಕಾಚಾರ ಮಾಡಲು ಕಳೆದ ವರ್ಷದ ಖರ್ಚುಗಳನ್ನು ಬಳಸಲಾಗಿದೆ, ವಾಸ್ತವವಾಗಿ ಅವು ಕನಿಷ್ಟ 10 ಶೇಕಡಾದಷ್ಟು ಏರಿವೆ ಎಂಬುದನ್ನು ಗಮನಿಸಬೇಕು.
* ಖರ್ಚುಗಳ ಲೆಕ್ಕಾಚಾರದಲ್ಲೂ ಕೇಂದ್ರ ಮತ್ತು ರಾಜ್ಯ ಏಜೆಂಸಿಗಳ ಲೆಕ್ಕಾಚಾರಗಳಲ್ಲಿ ಅಪಾರ ಅಂತರವಿದೆ ಎನ್ನುವುದನ್ನೂ ಗಮನಿಸಬೇಕು. ಕೇಂದ್ರದಲ್ಲಿ ನಿರ್ಧರಿಸಿದ ಖರ್ಚುಗಳು, ರಾಜ್ಯಗಳ ಕೃಷಿ ಇಲಾಖೆಗಳು ನಿರ್ಧರಿಸಿದ ಖರ್ಚುಗಳಿಗಿಂತ ಬಹಳ ಕಡಿಮೆ ಇವೆ ಎಂಬುದೂ ಗಮನಾರ್ಹ. ಮತ್ತು ಇವೆರಡೂ ರೈತ ನಿಜವಾಗಿ ಮಾಡಿರುವ ಖರ್ಚುಗಳಿಗಿಂತ ಕಡಿಮೆ ಇವೆ
* ರಾಜ್ಯ ಸರಕಾರಗಳು(ಬಿಜೆಪಿ ಆಳ್ವಿಕೆಯು ಸರಕಾರಗಳೂ ಕೂಡ) ತಮ್ಮ ಖರ್ಚು ಲೆಕ್ಕಾಚಾರಗಳ ಆಧಾರದಲ್ಲಿ ಶಿಫಾರಸು ಮಾಡಿರುವ ಎಂಎಸ್‌ಪಿಗಳು ಈಗ ಕೇಂದ್ರ ಸರಕಾರ ಪ್ರಕಟಿಸಿರುವ ಎಂಎಸ್‌ಪಿಗಳಿಗಿಂತ ಬಹಳ ಹೆಚ್ಚಿವೆ.
* ರೈತರ ಬೆಳೆಗಳ ಸಾರ್ವಜನಿಕ ಖರೀದಿ ಮುಖ್ಯವಾಗಿ ಭತ್ತ ಮತ್ತು ಗೋದಿ ಬೆಳೆಗಳಲ್ಲಿ ಮಾತ್ರ ನಡೆಯುತ್ತಿದೆ, ಅದು ಕೂಡ ಒಟ್ಟು ಉತ್ಪಾದನೆಯ 20%ಕ್ಕಿಂತಲೂ ಕಡಿಮೆ ಮಟ್ಟದಲ್ಲಿ. ಉಳಿದ ಹೆಚ್ಚಿನ ಬೆಳೆಗಳಿಗೆ ಹೆಚ್ಚಿನ ರಾಜ್ಯಗಳಲ್ಲಿ ಖರೀದಿಯ ವ್ಯವಸ್ಥೆ ಇಲ್ಲ.

| ಬೆಳೆ (1) | ಎ2+ಎಫ್‌ಎಲ್ (2) | ಸಿ2 (3) | ಎಂಎಸ್‌ಪಿ (4) | ಸಿ2+50% (5) | ಕಾಲಂ (4)–(5) (6) |
|---|---|---|---|---|---|
| ಭತ್ತ | 1117 | 1484 | 1750 | 2226 | –476 |
| ಹೈಬ್ರಿಡ್ ಜೋಳ | 1556 | 2089 | 2430 | 3133.5 | –703.5 |
| ಸಜ್ಜೆ | 949 | 1278 | 1950 | 1917 | + 33 |
| ರಾಗಿ | 1861 | 2351 | 2897 | 3526.5 | –629.5 |
| ಮೆಕ್ಕೆಜೋಳ | 1044 | 1396 | 1700 | 2094 | –394 |
| ತೊಗರಿ | 3318 | 4612 | 5675 | 6918 | –1243 |
| ಹೆಸರು | 4286 | 5700 | 6975 | 8550 | –1575 |
| ಉದ್ದು | 3265 | 4517 | 5600 | 6775.5 | –1175.5 |
| ನೆಲಗಡಲೆ | 3159 | 4089 | 4890 | 6133.5 | –1243.5 |
| ಸೂರ್ಯಕಾಂತಿ | 3481 | 4526 | 5388 | 6789 | –1401 |
| ಸೋಯಾಬೀನ್ | 2121 | 2921 | 3399 | 4381.5 | –982.5 |
| ಸಾಸಿವೆ | 4067 | 5706 | 6249 | 8559 | –2310 |
| ಉಚ್ಚೆಳ್ಳು | 3912 | 5108 | 5877 | 7662 | –1785 |
| ಹತ್ತಿ(ಮಧ್ಯಮ) | 3276 | 4376 | 5150 | 6564 | –1414 |

ಎಲ್ಲ ಸಂಖ್ಯೆಗಳೂ ರೂ.ಗಳು/ಪ್ರತಿ ಕ್ವಿಂಟಾಲಿಗೆ

ಕಾಲಂ (2) ಮತ್ತು (3) ಸಿಎಸಿಪಿ( ಕೃಷಿ ಖರ್ಚುಗಳ ಮತ್ತು ಬೆಲೆಗಳ ಆಯೋಗ) 2017–18ಕ್ಕೆ ಲೆಕ್ಕ ಹಾಕಿದ ಖರ್ಚುಗಳ ಆಧಾರದಲ್ಲಿ ಸ್ವಾಮಿನಾಥನ್ ಆಯೋಗ ಹೇಳಿದ ಉತ್ಪಾದನಾ ಖರ್ಚುಗಳ ಲೆಕ್ಕಾಚಾರ.

ಕಾಲಂ(4)ರಲ್ಲಿರುವ ಎಂಎಸ್‌ಪಿ ಈಗ ಪ್ರಕಟಿಸಿರುವ ಕನಿಷ್ಟ ಬೆಂಬಲ ಬೆಲೆ ಮತ್ತು

**ಕಾಲಂ (6) ಸರಕಾರ ಪ್ರಕಟಿಸಿರುವ ಎಂಎಸ್‌ಪಿ ಹಾಗು ಸ್ವಾಮಿನಾಥನ್ ಆಯೋಗದ ಶಿಫಾರಸು ಮತ್ತು ಬಿಜೆಪಿ ಆಶ್ವಾಸನೆ ಪ್ರಕಾರ ಸಿಗಬೇಕಾದ ಕನಿಷ್ಟ ಬೆಂಬಲ ಬೆಲೆಯಲ್ಲಿನ ವ್ಯತ್ಯಾಸ, ಅಂದರೆ ರೈತರಿಗೆ ಮಾಡಿರುವ ವಿಶ್ವಾಸಘಾತದ ಪ್ರಮಾಣ**

**ಕೆಲವು ಬೆಳೆಗಳ ಖರ್ಚುಗಳು ಮತ್ತು ರಾಜ್ಯಗಳ ಶಿಫಾರಸುಗಳು ನರೇಂದ್ರ ಮೋದಿ ನೇತೃತ್ವದ ಮೋದಿ ಸರಕಾರದ ವಿಶ್ವಾಸಘಾತವನ್ನು ಹೆಚ್ಚು ದಟ್ಟವಾಗಿ ಮನವರಿಕೆ ಮಾಡಿ ಕೊಡುತ್ತವೆ.**

**ಭತ್ತದ** ಉತ್ಪಾದನಾ ಖರ್ಚು 2017–18ರಲ್ಲಿ ಕ್ವಿಂಟಾಲಿಗೆ 1866 ರೂ. ಇರುತ್ತದೆಂದು ಆಂಧ್ರಪ್ರದೇಶ ಅಂದಾಜು ಮಾಡಿತ್ತು. ಆದರೆ ಈ ರಾಜ್ಯಕ್ಕೆ ಭತ್ತ ಉತ್ಪಾದನಾ ಖರ್ಚು ಕೃಷಿ ಖರ್ಚುಗಳ ಮತ್ತು ಬೆಲೆಗಳ ಆಯೋಗ(ಸಿಎಸಿಪಿ)ದ ಲೆಕ್ಕಾಚಾರದ ಪ್ರಕಾರ ಕ್ವಿಂಟಾಲಿಗೆ 1495ರೂ.

ಆಂಧ್ರಪ್ರದೇಶ ಭತ್ತಕ್ಕೆ 2799ರೂ./ಕ್ವಿಂಟಾಲಿಗೆ ಶಿಫಾರಸು ಮಾಡಿದೆ. ಬಿಜೆಪಿ ಆಳ್ವಿಕೆಯ ರಾಜ್ಯಗಳಾದ ಮಹಾರಾಷ್ಟ್ರ, ಛತ್ತಿಸ್‌ಗಡ್ ಮತ್ತು ಮಧ್ಯಪ್ರದೇಶ 2017–18ಕ್ಕೆ ಅನುಕ್ರಮವಾಗಿ ಕ್ವಿಂಟಾಲಿಗೆ 3251ರೂ., 2200 ರೂ.,ಮತ್ತು 2700ರೂ. ಶಿಫಾರಸು ಮಾಡಿದ್ದವು ಎಂಬುದನ್ನು ಗಮನಿಸಬೇಕು.

ಇತರ ಪ್ರಮುಖ ಭತ್ತ ಬೆಳೆಯುವ ರಾಜ್ಯಗಳು, ತಮಿಳುನಾಡು 2017–18ಕ್ಕೆ 2300ರೂ. ಮತ್ತು ಪಂಜಾಬ್ 2000ರೂ. ಶಿಫಾರಸು ಮಾಡಿದ್ದವು.

ಈಗ ಪೂರ್ಣ ಒಂದು ವರ್ಷದ ನಂತರ ಮೋದಿ ಸರಕಾರ ಕ್ವಿಂಟಾಲಿಗೆ 1750ರೂ. ಪ್ರಕಟಿಸಿದೆ. ಕೇರಳ ಎಲ್‌ಡಿಎಫ್ ಸರಕಾರ ಆಗಲೇ ಕ್ವಿಂಟಾಲಿಗೆ 2350ರೂ.ದರದಲ್ಲಿ ಖರೀದಿ ನಡೆಸುತ್ತಿದೆ. ಹೆಚ್ಚಿನ ರಾಜ್ಯಗಳಲ್ಲಿ ಸಾರ್ವಜನಿಕ ಖರೀದಿ ಇಲ್ಲವಾದ್ದರಿಂದ ಕನಿಷ್ಟ ಬೆಂಬಲ ಬೆಲೆ 1500ರೂ. ಇದ್ದರೂ ರೈತರು ಹತಾಶರಾಗಿ 800ರಿಂದ 1200 ರೂ.ವರೆಗೆ ದರಗಳಿಗೇ ಮಾರಬೇಕಾಗಿ ಬಂದಿದೆ.

ಬಿಜೆಪಿ ಆಳ್ವಿಕೆಯು ಗುಜರಾತ್ **ನೆಲಗಡಲೆಗೆ** ಕಳೆದ ವರ್ಷ ಕ್ವಿಂಟಾಲಿಗೆ 6500ರೂ. ಶಿಫಾರಸು ಮಾಡಿತ್ತು, ಆದರೆ ಈಗ ಪ್ರಕಟಿಸಿರುವ ಎಂಎಸ್‌ಪಿ ಕೇವಲ 4890ರೂ.

**ರೈತರು ಬೇಳೆಕಾಳುಗಳ ಬೆಲೆಗಳಲ್ಲಿ ಭಾರೀ ಹೆಚ್ಚಳವಾಗುತ್ತದೆ ಎಂದು ನಿರೀಕ್ಷಿಸಿದ್ದರು.** ದೇಶದ ಅಗತ್ಯಗಳನ್ನು ಪೂರೈಸಲು ಹೆಚ್ಚಿನ ಉತ್ಪಾದನೆಗಾಗಿ ಮತ್ತು ಸಾರಜನಕವನ್ನು ಸಹಜವಾಗಿ ಹೆಕ್ಟೇರಿಗೆ 4000ರೂ. ವರೆಗೆ ನಿಗದಿ ಮಾಡಿದ್ದರಿಂದಾಗಿ ಇಂತಹ ಹೆಚ್ಚಳದ ನಿರೀಕ್ಷೆಯಿತ್ತು.

**ತೊಗರಿಗೆ** ತೆಲಂಗಾಣ ಮತ್ತು ಆಂದ್ರಪ್ರದೇಶ ನಿಗದಿ ಮಾಡಿದ ಉತ್ಪಾದನಾ ಖರ್ಚು ಕ್ವಿಂಟಾಲಿಗೆ ಅನುಕ್ರಮವಾಗಿ 5984ರೂ. ಮತ್ತು 7123ರೂ.. ಆದರೆ ಸಿಎಸಿಪಿ ಹಾಕಿರುವ ಲೆಕ್ಕ ಎರಡೂ ರಾಜ್ಯಗಳಿಗೆ ಕೇವಲ 5683ರೂ. ರೈತರು ಕ್ವಿಂಟಾಲಿಗೆ 3400 ರಿಂದ 4200ರೂ. ವರೆಗಿನ ದರದಲ್ಲೆ ಮಾರಬೇಕಾಗಿ ಬಂದಿದೆ, ಕನಿಷ್ಟ ಬೆಂಬಲ ಬೆಲೆ ರೂ. 5450ರೂ. ಎಂದಿದ್ದರೂ ಕೂಡ. ಆದರೆ ಇದೇ ವೇಳೆಯಲ್ಲಿ ಈ ಬಿಜೆಪಿ ಸರಕಾರ ಮೋಜಾಭಿಕ್‌ನ ರೈತನಿಗೆ ಈ ಎಂಎಸ್‌ಪಿಯ ಭರವಸೆ ನೀಡಿದೆ.

ಒಂದು ಪ್ರಮುಖ ತೊಗರಿ ಉತ್ಪಾದಕ ರಾಜ್ಯವಾದ ಕರ್ನಾಟಕ ಕ್ವಿಂಟಾಲಿಗೆ 7000ರೂ. ಎಂಎಸ್‌ಪಿ ಸೂಚಿಸಿತ್ತು. ಆದರೆ ಈಗ ಪ್ರಕಟಿಸಿರುವುದು ಎಷ್ಟೋ ಕಡಿಮೆ, 5675ರೂ. ಮಾತ್ರ. ಇದು ಹೆಚ್ಚಿನ ತೊಗರಿ ಉತ್ಪಾದಕ ರಾಜ್ಯಗಳಲ್ಲಿನ ಉತ್ಪಾದನಾ ಖರ್ಚಿಗಿಂತಲೂ ಕೆಳಗೆ ಇದೆ.

**ಸೋಯಾಬೀನ್**ಗೆ ಕರ್ನಾಟಕ ಮತ್ತು ಮಧ್ಯಪ್ರದೇಶ ಅನುಕ್ರಮವಾಗಿ ಕ್ವಿಂಟಾಲಿಗೆ 4800ರೂ. ಮತ್ತು 4000ರೂ. ಸೂಚಿಸಿವೆ. ಆದರೆ ಪ್ರಕಟಿಸಿರುವ ಎಂಎಸ್‌ಪಿ ಕೇವಲ ರೂ. 3399.

**ಹತ್ತಿ**ಯ ಉತ್ಪಾದನಾ ಖರ್ಚು 2017–18ಕ್ಕೆ ಆಂಧ್ರಪ್ರದೇಶ ಮತ್ತು ತೆಲಂಗಾಣ ಸರಕಾರಗಳ ಅಂದಾಜಿನ ಪ್ರಕಾರ ಅನುಕ್ರಮವಾಗಿ 5042ರೂ. ಮತ್ತು 5337ರೂ. ಕ್ವಿಂಟಾಲಿಗೆ. ಆದರೆ ಸಿಎಸಿಪಿ ಪ್ರಕಾರ 4625ರೂ. ಮಾತ್ರ. ಈ ಎರಡು ರಾಜ್ಯಗಳು ಎಂಎಸ್‌ಪಿ ಅನುಕ್ರಮವಾಗಿ 7564ರೂ. ಮತ್ತು 8005ರೂ. ಇರಬೇಕೆಂದು ಸೂಚಿಸಿದ್ದವು. ಬಿಜೆಪಿ ಆಳ್ವಿಕೆಯ ಮಹಾರಾಷ್ಟ್ರ ಕೂಡ 7204ರೂ. ಸೂಚಿಸಿದೆ. ಆದರೆ ಈಗ ಪ್ರಕಟಿಸಿರುವ ಎಂಎಸ್‌ಪಿ ಕ್ವಿಂಟಾಲಿಗೆ 5150ರೂ.

ಹೀಗೆ ರಾಜ್ಯಗಳು ಮತ್ತು ಕೇಂದ್ರ ಅಂದಾಜು ಮಾಡಿರುವ ಉತ್ಪಾದನಾ ಖರ್ಚುಗಳು, ರಾಜ್ಯಗಳು ಸೂಚಿಸಿರುವ ಎಂಎಸ್‌ಪಿಗಳು ಮತ್ತು ನರೇಂದ್ರ ಮೋದಿ ನೇತೃತ್ವದ ಸರಕಾರ ಪ್ರಕಟಿಸಿರುವ ಎಂಎಸ್‌ಪಿಗಳನ್ನು ನೋಡಿದರೆ, ನರೇಂದ್ರ ಮೋದಿ ಸರಕಾರ ಪುಷ್ಕಳ ಬೆಲೆಗಳ ಭ್ರಮೆಯನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದೆ, ರೈತರ ಖರ್ಚುಗಳನ್ನು ವಾಸ್ತವ ಖರ್ಚುಗಳಿಗಿಂತ ಬಹಳ ಕೆಳಗಿನ ಮಟ್ಟದಲ್ಲಿ ಲೆಕ್ಕ ಹಾಕಿ ಪ್ರಕಟಿಸಿರುವ ಎಂಎಸ್‌ಪಿ ವಾಸ್ತವವಾಗಿ ರೈತರಿಗೆ ಮಾಡಿರುವ ವಿಶ್ವಾಸಘಾತವಾಗಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ.

**ಬಿಜೆಪಿ ಸರಕಾರದ ನಾಲ್ಕು ವರ್ಷಗಳು ರೈತರಿಗೆ ಏನೂ ಮಾಡದೆ ಕಳೆದ ಹೋಗಿವೆ. ಈಗ ಅವರು ಮುಂಬರುವ ಚುನಾವಣೆಗಳ ಮೊದಲು ಒಂದು ಆಕ್ರಾಮಕ ಪ್ರಚಾರದ ಮೂಲಕ ರೈತರನ್ನು ಮರುಳು ಮಾಡಲು ಪ್ರಯತ್ನಿಸುತ್ತಿದ್ದಾರೆ.** ಅಖಿಲ ಭಾರತ ಕಿಸಾನ್ ಸಭಾ ಬಿಜೆಪಿ ಸರಕಾರದ ಈ ಉಪೇಕ್ಷೆಯ ನಿಲುವನ್ನು ಖಂಡಿಸುತ್ತದೆ, ಇದು ಅದರ ಸಂಪೂರ್ಣ ವೈಫಲ್ಯವನ್ನು ತೋರಿಸುತ್ತದೆ. ಸ್ವಾಮಿನಾಥನ್ ಆಯೋಗದ ಶಿಫಾರಸುಗಳಿಗೆ ಅನುಗುಣವಾಗಿ ಕನಿಷ್ಟ ಬೆಂಬಲ ಬೆಲೆಗಳನ್ನು ಪರಿಷ್ಕರಿಸಬೇಕು ಮತ್ತು ಬೆಳೆ ಖರೀದಿಯ ಆಶ್ವಾಸನೆ ನೀಡಬೇಕು ಎಂದು ಎಐಕೆಎಸ್ ಕರೆ ನೀಡುತ್ತದೆ.

ಆಗಸ್ಟ್ 9 ರಂದು ಬೃಹತ್ ಜೈಲ್‌ಭರೋ ಮೊದಲು ವ್ಯಾಪಕ ಸಾಮೂಹಿಕ ಪ್ರಚಾರವನ್ನು ಎಐಕೆಎಸ್ ರೂಪಿಸಿದೆ ಮತ್ತು ಸಪ್ಟಂಬರ್ 5 ರಂದು ಒಂದು ಬೃಹತ್ ಮಜ್ದೂರ್ ಕಿಸಾನ್ ಸಂಘರ್ಷ ರ‍್ಯಾಲಿಗೆ ಸಿದ್ಧಗೊಳ್ಳುತ್ತಿದೆ. ರೈತರ ಕಲ್ಯಾಣದಲ್ಲಿ ಆಸಕ್ತಿ ಇರುವ ಎಲ್ಲ ಪ್ರಜಾಪ್ರಭುತ್ವವಾದಿ ಸಂಘಟನೆಗಳು ಮತ್ತು ವ್ಯಕ್ತಿಗಳು ಬಿಜೆಪಿ ಸರಕಾರದ ಈ ವಿಶ್ವಾಸಘಾತದ ವಿರುದ್ಧ ಈ ಪ್ರತಿಭಟನೆಗಳಲ್ಲಿ ಕೈಜೋಡಿಸಬೇಕು ಎಂದು ಕರೆ ನೀಡುತ್ತೇವೆ.

# ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗೆ ಒಟ್ಟಿಗೇ ಚುನಾವಣೆಯ ಪರಿಕಲ್ಪನೆ ಮೂಲಭೂತವಾಗಿ ಪ್ರಜಾಪ್ರಭುತ್ವ–ವಿರೋಧಿ ಮತ್ತು ಒಕ್ಕೂಟತತ್ವ–ವಿರೋಧಿ

**ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳ ಪ್ರಶ್ನೆಯನ್ನು ಕುರಿತಂತೆ ಭಾರತದ ಕಾನೂನು ಆಯೋಗ ಸಿಪಿಐ(ಎಂ)ನ ಅಭಿಪ್ರಾಯ ಕೋರಿ ಪತ್ರ ಬರೆದಿದೆ. ಇದಕ್ಕೆ ಉತ್ತರಿಸುತ ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು "ಸಂಸತ್ತಿಗೆ ಮತ್ತು ರಾಜ್ಯ ವಿಧಾನ ಮಂಡಲಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ಜಾರಿಗೆ ತರುವ ವಿರುದ್ಧದ ತರ್ಕ ಕೇವಲ ತಾಂತ್ರಿಕ ಸ್ವರೂಪದ್ದೂ ಅಲ್ಲ, ಅಥವ ಅದು ಕಾರ್ಯಸಾಧ್ಯವಲ್ಲ ಎಂಬುದಕ್ಕೂ ಅಲ್ಲ. ಏಕಕಾಲದಲ್ಲಿ ಚುನಾವಣೆಯ ಈ ಪರಿಕಲ್ಪನೆಯೇ ಮೂಲಭೂತವಾಗಿ ಪ್ರಜಾಪ್ರಭುತ್ವ–ವಿರೋಧಿಯಾಗಿದೆ, ಅದು ಸಂವಿಧಾನ ವಿಧಿಸಿರುವ ಸಂಸದೀಯ ಪ್ರಜಾಪ್ರಭುತ್ವದ ಬುಡಕ್ಕೇ ಏಟು ಕೊಡುತ್ತದೆ ಎಂಬುದೇ ಈ ಬಗ್ಗೆ ಇರುವ ಮೂಲ ಆಕ್ಷೇಪ" ಎಂದು ಹೇಳಿದ್ದಾರೆ. ಈ ಕುರಿತ ಸಿಪಿಐ(ಎಂ) ನಿಲುವಿನ ಟಿಪ್ಪಣಿಯ ಜತೆಗೆ ಯೆಚುರಿಯವರು ಕಳಿಸಿದ ಉತ್ತರದ ಪೂರ್ಣ ಪಾಠವನ್ನು ಈ ಮುಂದೆ ಕೊಡಲಾಗಿದೆ:**



ನಾನು ನಿಮ್ಮ 14 ಜೂನ್ 2018ರ ಪತ್ರಕ್ಕೆ ಸ್ಪಂದಿಸುತ್ತ ಈ ಪತ್ರ ಬರೆಯುತ್ತಿದ್ದೇನೆ. ನಿಮ್ಮ ಪತ್ರದಲ್ಲಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸುವ ಪ್ರಶ್ನೆಯ ಮೇಲೆ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಅಭಿಪ್ರಾಯವನ್ನು ಕೇಳಿದ್ದೀರಿ.

ನಿಮ್ಮ ಪತ್ರಕ್ಕೆ ಸ್ಪಂದಿಸಿ ನಾನು ಇಂತಹ ಒಂದು ಪ್ರಸ್ತಾವಕ್ಕೆ ಸಿಪಿಐ(ಎಂ)ನ ಪರ್ಯಾಲೋಚಿಸಿದ ಆಕ್ಷೇಪಗಳನ್ನು ಕುರಿತಂತೆ ಒಂದು ಟಿಪ್ಪಣಿಯನ್ನು ಲಗತ್ತಿಸಿದ್ದೇನೆ.

ನಮ್ಮ ಅಭಿಪ್ರಾಯದಲ್ಲಿ, ಏಕಕಾಲದಲ್ಲಿ ಚುನಾವಣೆಗಳ ಪ್ರಸ್ತಾವದ ಪರಿಗಣನೆ ಒಂದು ಕಾನೂನು ಸುಧಾರಣೆಯ ವ್ಯಾಪ್ತಿಗಿಂತ ಬಹಳ ಆಚೆಗೆ ಹೋಗುತ್ತದೆ, ಅದಕ್ಕೆ ಭಾರತೀಯ ಸಂವಿಧಾನಕ್ಕೆ ಪ್ರಮುಖ ತಿದ್ದುಪಡಿಗಳು ಬೇಕಾಗುತ್ತವೆ. ಇದು, ನಮ್ಮ ಅಭಿಪ್ರಾಯದಲ್ಲಿ, ನಮ್ಮ ಸಂವಿಧಾನಕ್ಕೆ ಅಕ್ಷರಶಃ ಮತ್ತು ಅದರ ಆಶಯಕ್ಕೂ ವಿರುದ್ಧವಾಗಿರುವಂತದ್ದು.

ಭಾರತೀಯ ಸಂವಿಧಾನ ಜನತೆಯ ಇಚ್ಛೆಯೇ ಕೇಂದ್ರಸ್ಥಾನವನ್ನು ಪಡೆದಿದೆ ಎಂದು ನಿರೂಪಿಸುತ್ತದೆ. ಅದರ ಪೀಠಿಕೆ "ನಾವು, ಭಾರತದ ಜನತೆ" ಎನ್ನುತ್ತ ಮತ್ತು "ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸುತ್ತೇವೆ, ಶಾಸನವಾಗಿಸುತ್ತೇವೆ ಮತ್ತು ನಮಗೆ ಕೊಟ್ಟುಕೊಳ್ಳುತ್ತೇವೆ" ಎಂದು ಇದನ್ನು ಅತ್ಯಂತ ಸ್ಪುಟವಾಗಿ ನಿರೂಪಿಸಿದೆ. ಜನತೆ ತಮ್ಮ ಸಾರ್ವಭೌಮತೆಯನ್ನು ತಮ್ಮ ಚುನಾಯಿತ ಪ್ರತಿನಿಧಿಗಳ ಮೂಲಕ ಚಲಾಯಿಸುತ್ತಾರೆ, ಆ ಪ್ರತಿನಿಧಿಗಳು ಜನತೆಗೆ ಉತ್ತರದಾಯಿಯಾಗಿರುತ್ತಾರೆ, ಮತ್ತು ಕಾರ್ಯಾಂಗ, ಅಥವ ಚುನಾವಣೆಗಳ ಪರಿಣಾಮವಾಗಿ ಅಧಿಕಾರ ವಹಿಸಿಕೊಳ್ಳುವ ಸರಕಾರ, ಶಾಸಕಾಂಗಕ್ಕೆ ಜವಾಬುದಾರಿಯಾಗಿರುತ್ತದೆ. ನಮ್ಮ ಸಂವಿಧಾನದ ಈ ಆಯಾಮಗಳನ್ನು ಶಿಥಿಲಗೊಳಿಸಲು ಅಥವ ಚಿವುಟಿ ಹಾಕಲು ಸಾಧ್ಯವಿಲ್ಲ ಎಂಬುದು ನಮ್ಮ ನಂಬಿಕೆ.



ಅಲ್ಲದೆ, ಇಂತಹ ಒಂದು ಪ್ರಸ್ತಾವವೇ ಮೂಲತಃ ಪ್ರಜಾಪ್ರಭುತ್ವ–ವಿರೋಧಿಯಾಗಿದೆ ಮತ್ತು ನಮ್ಮ ಸಂವಿಧಾನದ ಒಂದು ಮೂಲಭೂತ ಲಕ್ಷಣವಾದ ಒಕ್ಕೂಟತತ್ವದ ನೀತಿಗಳನ್ನು ನಿರಾಕರಿಸುತ್ತದೆ ಎಂಬು ನಾವು ನಂಬಿದ್ದೇವೆ.

ಇಲ್ಲಿ ಲಗತ್ತಿಸಿರುವ ಸಿಪಿಐ(ಎಂ)ನ ಟಿಪ್ಪಣಿ ಸ್ವಯಂವಿವರಣೆ ನೀಡುವಂತದ್ದಾದ್ದರಿಂದ, ಒಂದು ವೈಯಕ್ತಿಕ ಸಂವಾದಕ್ಕೆ ನಿಮ್ಮ ಆಹ್ವಾನಕ್ಕೆ ಧನ್ಯವಾದ ಹೇಳುತ್ತಲೇ, ಅದರ ಆವಶ್ಯಕತೆ ಇರಲಿಕ್ಕಿಲ್ಲ ಎಂದು ಭಾವಿಸುತ್ತೇವೆ.

## ಏಕಕಾಲದಲ್ಲಿ ಚುನಾವಣೆಗಳ ಬಗ್ಗೆ ಸಿಪಿಐ(ಎಂ) ನಿಲುವು

ಸಂಸತ್ತು ಮತ್ತು ರಾಜ್ಯ ವಿಧಾನ ಮಂಡಲಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ಜಾರಿ ಮಾಡುವುದಕ್ಕೆ ವಿರುದ್ಧವಾದ ತರ್ಕ ಕೇವಲ ತಾಂತ್ರಿಕ ಸ್ವರೂಪದ್ದಲ್ಲ, ಅಥವ ಅದು ಕಾರ್ಯಸಾಧ್ಯವಲ್ಲ ಎಂಬುದಕ್ಕಾಗಿಯಷ್ಟೇ ಅಲ್ಲ. ಈ ಪರಿಕಲ್ಪನೆಗೆ ಮೂಲ ಆಕ್ಷೇಪವೆಂದರೆ, ಇದು ಮೂಲಭೂತವಾಗಿ ಪ್ರಜಾಪ್ರಭುತ್ವ–ವಿರೋಧಿ ಮತ್ತು ಸಂವಿಧಾನ ವಿಧಿಸಿರುವಂತಹ ಸಂಸದೀಯ ಪ್ರಜಾಪ್ರಭುತ್ವದ ಬುಡಕ್ಕೇ ಏಟು ಕೊಡುತ್ತದೆ.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗೆ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಬೇಕಾದರೆ ಸರಕಾರ ಶಾಸಕಾಂಗಕ್ಕೆ ಜವಾಬುದಾರಿಯಾಗಿರಬೇಕು ಎಂಬ ಸಂವಿಧಾನಿಕ ಯೋಜನೆಗೆ ಕೈಹಾಕಿ ಕೆಡಿಸಬೇಕಾಗುತ್ತದೆ. ಮಂತ್ರಿಮಂಡಲದ ಸಾಮೂಹಿಕ ಹೊಣೆಗಾರಿಕೆ ಜನತೆಯ ಸದನಕ್ಕೆ ಎಂದು ಸಂವಿಧಾನದ ವಿಧಿ 75(3) ಹೇಳುತ್ತದೆ. ಅದೇ ರೀತಿಯಲ್ಲಿ, ಮಂತ್ರಿಮಂಡಲಕ್ಕೆ ಸಂಬಂಧಿಸಿರುವ ವಿಧಿ 164(1) ಅದು ರಾಜ್ಯದ ವಿಧಾನಸಭೆಗೆ ಸಾಮೂಹಿಕವಾಗಿ ಹೊಣೆಗಾರಿಕೆ ಹೊಂದಿದೆ ಎನ್ನುತ್ತದೆ.

ಸಂವಿಧಾನದ ಅಡಿಯಲ್ಲಿ, ಒಂದು ಸರಕಾರ ಒಂದು ಅವಿಶ್ವಾಸ ಠರಾವಿನ ಮೇಲಿನ ಮತಗಳಲ್ಲಿ ಸೋತು ಹೋಗಿ, ಅಥವ ಒಂದು ಹಣ ಮಸೂದೆಯ ಮತದಾನದಲ್ಲಿ ಸೋತು ಶಾಸಕಾಂಗದ ವಿಶ್ವಾಸವನ್ನು ಕಳಕೊಂಡರೆ, ಅದು ರಾಜೀನಾಮೆ ನೀಡಲೇಬೇಕು. ಒಂದು ಪರ್ಯಾಯ ಸರಕಾರವನ್ನು ರಚಿಸಲು ಸಾಧ್ಯವಿಲ್ಲವಾದರೆ, ಸದನವನ್ನು ವಿಸರ್ಜಿಸಿ ಮಧ್ಯಂತರ ಚುನಾವಣೆಗಳನ್ನು ನಡೆಸಬೇಕಾಗುತ್ತದೆ.

ಸಂವಿಧಾನದಲ್ಲಿ ಲೋಕಸಭೆಗಾಗಲೀ, ರಾಜ್ಯ ಶಾಸಕಾಂಗಕ್ಕಾಗಲೀ ನಿಗದಿತ ಅಧಿಕಾರಾವಧಿಯನ್ನು ಪ್ರತಿಷ್ಠಾಪಿಸಿಲ್ಲ. ಸಂವಿಧಾನದ ವಿಧಿ 83(2) ಮತ್ತು 172(1) ಇವೆರಡೂ ಲೋಕಸಭೆ ಮತ್ತು ವಿಧಾನ ಸಭೆಯ ಅವಧಿ, ಐದು ವರ್ಷಗಳದ್ದಾಗಿರುತ್ತದೆ, "ಅದಕ್ಕೆ ಮೊದಲೇ ವಿಸರ್ಜಿಸಿರದಿದ್ದರೆ", ಎಂದು ನಿರ್ದಿಷ್ಟ ಪಡಿಸಿವೆ.

ಲೋಕಸಭೆಯ ಅಥವ ಶಾಸನ ಸಭೆಯ ಅವಧಿಯನ್ನು ದೀರ್ಘಗೊಳಿಸುವುದು ಅಸಂವಿಧಾನಿಕ ಮಾತ್ರವಲ್ಲ, ಪ್ರಜಾಪ್ರಭುತ್ವ–ವಿರೋಧಿ ಕೂಡ. ಚುನಾಯಿತ ಪ್ರತಿನಿಧಿಗಳ ಮೂಲಕ ಜನತೆಯ ಇಚ್ಛೆಯದ್ದೇ ಮೇಲುಗೈ ಆಗಬೇಕು.

ಏಕಕಾಲದಲ್ಲಿ ಚುನಾವಣೆಗಳನ್ನು ತರಲು ಸಂವಿಧಾನದ ತಿದ್ದುಪಡಿಗೆ ವಿವಿಧ ಸಲಹೆ–ಸೂಚನೆಗಳನ್ನು ನೀಡಲಾಗುತ್ತಿದೆ. ಅವುಗಳಲ್ಲಿ ಒಂದು, ನೀತಿ ಆಯೋಗ ಬಿಡುಗಡೆ ಮಾಡಿದ ಚರ್ಚಾ ಪ್ರಬಂಧದಲ್ಲಿನ ಸೂಚನೆ. ಅದರ ಪ್ರಕಾರ ಲೋಕಸಭೆಯ ವಿಸರ್ಜನೆಯನ್ನು ತಪ್ಪಿಸಲಾಗದಿದ್ದರೆ, ಮತ್ತು ಅದರ ಬಾಕಿ ಅವಧಿ ಬಹಳ ದೀರ್ಘವೇನೂ ಇಲ್ಲದಿದ್ದರೆ, ಮುಂದಿನ ಸದನ ರಚನೆಯಾಗುವ ವರೆಗೆ ದೇಶದ ಆಡಳಿತವನ್ನು, ರಾಷ್ಟ್ರಪತಿಗಳು, ತಾನು ನೇಮಿಸುವ ಒಂದು ಮಂತ್ರಿಮಂಡಲದ ನೆರವು ಮತ್ತು ಸಲಹೆಯ ಮೇರೆಗೆ ನಡೆಸಲಾಗುವಂತೆ ಅವಕಾಶ ಕಲ್ಪಿಸಬಹುದು. ಈ ಆಕ್ರೋಶಕಾರಿ ಸೂಚನೆ ರಾಷ್ಟ್ರಪತಿಗಳನ್ನು ಕಾರ್ಯಾಂಗದ ಮುಖ್ಯಸ್ಥರನ್ನಾಗಿ ಮಾಡುತ್ತದೆ. ಇದು ಕಾರ್ಯಕಾರಿ ಅಧ್ಯಕ್ಷ ವ್ಯವಸ್ಥೆಯನ್ನು ಹಿಂಬಾಗಿಲಿನಿಂದ ತರುವ ಕೆಲಸ.

ಇನ್ನೊಂದು ಸೂಚನೆಯೆಂದರೆ, ಸದನದ ವಿಸರ್ಜನೆಯ ವೇಳೆಗೆ ಅದರ ಬಾಕಿ ಅವಧಿ ಬಹಳ ದೀರ್ಘವಾಗಿದ್ದರೆ, ಹೊಸ ಚುನಾವಣೆಗಳನ್ನು ಮಾಡುವುದು. ಆದರೆ ಅದರ ಅವಧಿ ವಿಸರ್ಜನೆಯಾದ ಲೋಕಸಭೆಯ ಉಳಿದ ಅವಧಿಯಷ್ಟೇ ಆಗಿರುತ್ತದೆ. ಉದಾ: ಲೋಕಸಭೆ ರಚನೆಯಾಗಿ ಎರಡು ವರ್ಷಗಳಲ್ಲೇ ಅದರ ವಿಸರ್ಜನೆಯಾದರೆ, ನಂತರದ ಚುನಾವಣೆ ಉಳಿದ ಮೂರು ವರ್ಷಗಳ ಅವಧಿಗೆ ಮಾತ್ರ ನಡೆಯುತ್ತದೆ. ಅಂದರೆ, ನಿಜವಾಗಿ, ಇನ್ನೂ ಬೇಗಬೇಗನೇ ಲೋಕಸಭಾ ಚುನಾವಣೆಗಳು ನಡೆಯುತ್ತವೆ. ಇದು ಆಗಾಗ ಚುನಾವಣೆಗಳು ನಡೆಯುವುದನ್ನು ತಪ್ಪಿಸಬೇಕೆಂಬ ಯಾವ ಉದ್ದೇಶದಿಂದ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಬೇಕು ಎನ್ನಲಾಗುತ್ತಿದೆಯೋ ಆ ಉದ್ದೇಶವನ್ನೇ ವಿಫಲಗೊಳಿಸುತ್ತದೆ.

ಏಕಕಾಲದಲ್ಲಿ ಚುನಾವಣೆಗಳನ್ನು ಹೇರುವ ಪ್ರಯತ್ನಗಳ ಮತ್ತೊಂದು ಬಲಿಯೆಂದರೆ ಒಕ್ಕೂಟ ತತ್ವ. ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳು ಒಟ್ಟಿಗೇ ನಡೆಯುವಂತೆ ಮಾಡಲು 2015ರ ಸಂಸದೀಯ ಸ್ಥಾಯೀ ಸಮಿತಿಯ 79ನೇ ವರದಿ ಮತ್ತು ನೀತಿ ಆಯೋಗದ ಪ್ರಬಂಧ ಸೂಚಿಸಿರುವ ಒಂದು ಪ್ರಸ್ತಾವ ಎಂದರೆ, ಕೆಲವು ವಿಧಾನಸಭೆಗಳ ಅವಧಿಯನ್ನು ವಿಸ್ತರಿಸುವುದು, ಅಥವ ಕೆಲವದರ ಅವಧಿಗಳನ್ನು ಹಂತಹಂತವಾಗಿ ಮೊಟಕುಗೊಳಿಸುವುದು. ವಿಧಾನಸಭೆಯ ಅವಧಿಯನ್ನು ಮೊಟಕುಗೊಳಿಸುವುದು, ಅಥವ ವಿಸ್ತರಿಸುವುದು ಇವೆರಡೂ ರಾಜ್ಯಗಳ ಹಕ್ಕುಗಳ ಮೇಲಿನ ದಾಳಿಯಾಗುತ್ತದೆ, ಅದು ತಮ್ಮ ಶಾಸಕರನ್ನು ಚುನಾಯಿಸುವ ನಾಗರಿಕರ ಹಕ್ಕುಗಳನ್ನು ನಿರ್ಬಂಧಿಸುತ್ತದೆ.

ರಾಜ್ಯ ವಿಧಾನಸಭೆಗಳಿಗೆ ಸಂಬಂಧಪಟ್ಟಂತೆ ಮತ್ತೊಂದು ಸೂಚನೆಯೆಂದರೆ ಕಾರ್ಯಕಾಲದ ಹೆಚ್ಚಿನ ಭಾಗ ಪೂರೈಸಿದ ನಂತರ ವಿಸರ್ಜನೆ ನಡೆದರೆ ರಾಜ್ಯಪಾಲರು ಸದನದ ಬಾಕಿ ಅವಧಿಯ ವರೆಗೆ ರಾಜ್ಯದ ಆಡಳಿತವನ್ನು ನಡೆಸಬಹುದು ಎಂಬುದು. ಇದರ ಅರ್ಥ ಕೂಡ, ಕೇಂದ್ರೀಯ ಆಳ್ವಿಕೆಯೇ.

ಶಾಸಕಾಂಗದ ಜವಾಬುದಾರಿಕೆಯನ್ನು ನಿರ್ವಂಧಿಸಲು ಮತ್ತು ಸದನದ ಅವಧಿಯನ್ನು ನಿಗದಿತಗೊಳಿಸಲು ವಿವಿಧ ಪ್ರಸ್ತಾವಗಳನ್ನು ಮುಂದಿಡಲಾಗುತ್ತಿದೆ. ಅವುಗಳಲ್ಲಿ ಒಂದು, ಒಂದು ಅವಿಶ್ವಾಸ ಠರಾವನ್ನು ಮಂಡಿಸುವಾಗ, ಅದರ ಜತೆಗೇ ಸದನದ ಒಬ್ಬ ಹೊಸ ಮುಖಂಡರನ್ನು ಚುನಾಯಿಸುವ ಠರಾವು ಕೂಡ ಇರಬೇಕು ಎಂಬುದು. ಭಾರತದ ಕಾನೂನು ಆಯೋಗದ ಕರಡಿನಲ್ಲಿ ಮತ್ತು ಇತರೆಡೆಗಳಲ್ಲಿ ಇದನ್ನು ಸೂಚಿಸಲಾಗಿದೆ. ಇದರ ಅರ್ಥ, ಒಂದು ಸರಕಾರವನ್ನು ಮತದಾನದ ಮೂಲಕ ಇಳಿಸುವ ಶಾಸಕರ ಹಕ್ಕನ್ನು ನಿರ್ಬಂಧಿತಗೊಳಿಸುವುದು, ಅವರು ಒಂದು ಹೊಸ ಸರಕಾರವನ್ನು ಚುನಾಯಿಸಬೇಕೆಂಬ ಶರತ್ತಿಗೆ ಅದನ್ನು ಒಳಪಡಿಸುವುದು ಎಂದೇ ಆಗುತ್ತದೆ.

ಯಾವುದೇ ಸರಕಾರವನ್ನು ಮತದಾನದ ಮೂಲಕ ಇಳಿಸುವ ಚುನಾಯಿತ ಶಾಸಕರ ಮತ್ತು ಲೋಕಸಭೆಯ ಸದಸ್ಯರ ಹಕ್ಕನ್ನು ನಿರ್ಬಂಧಿಸಲು, ಅಥವ ಸದನದಲ್ಲಿ ಸ್ಥಿರ ಬಹುಮತವನ್ನು ಹೊಂದಿರುವ ಒಂದು ಆಳುವ ಪಕ್ಷ ಸದನದ ವಿಸರ್ಜನೆಗೆ ಮತ್ತು ಹೊಸ ಚುನಾವಣೆಗಳನ್ನು ನಡೆಸುವುದಕ್ಕೆ ಶಿಫಾರಸು ಮಾಡುವ ಹಕ್ಕನ್ನು ಮೊಟಕುಗೊಳಿಸುವುದು ಕೂಡ ಸಾಧ್ಯವಿಲ್ಲ.

ರಾಜ್ಯ ವಿಧಾನಸಭೆಗಳ ಚುನಾವಣೆಗಳನ್ನು ಲೋಕಸಭಾ ಚುನಾವಣೆಯೊಂದಿಗೆ ಹೊಂದಿಸುವ ಎಲ್ಲ ಪ್ರಸ್ತಾವಗಳೂ ಒಕ್ಕೂಟ ನೀತಿಯ ಬಗ್ಗೆ ಮತ್ತು ರಾಜ್ಯಗಳ ಹಕ್ಕುಗಳ ಬಗ್ಗೆ ಒಂದು ಅವಹೇಳನೆಯನ್ನು ಹೊರಗೆಡಹುತ್ತವೆ. ರಾಜ್ಯ ವಿಧಾನಸ ಭೆಗಳಿಗೆ ಹಲವಾರು ಚುನಾವಣೆಗಳು ಸಾರ್ವತ್ರಿಕ ಚುನಾವಣೆಗಳಿಂದ ಪ್ರತ್ಯೇಕವಾಗಿ ನಡೆಯಲು ಪ್ರಥಮತಃ ಕೇಂದ್ರ ಸರಕಾರ 356ನೇ ವಿಧಿಯನ್ನು ಮನಬಂದಂತೆ ಬಳಸಿರುವುದೇ ಕಾರಣ. ಈ ಪ್ರಕ್ರಿಯೆ 1959ರಲ್ಲಿ ಕೇರಳದ ಕಮ್ಯುನಿಸ್ಟ್ ಮಂತ್ರಿಮಂಡಲವನ್ನು ವಜಾ ಮಾಡುವುದರೊಂದಿಗೆ ಆರಂಭವಾಯಿತು.

ಏಕಕಾಲದಲ್ಲಿ ಚುನಾವಣೆ ನಡೆಸುವ ಹೆಸರಿನಲ್ಲಿ, ಈ ಎಲ್ಲ ಪ್ರಸ್ತಾವಗಳು ರಾಜ್ಯಪಾಲರ ಮತ್ತು ಕೇಂದ್ರೀಯ ಹಸ್ತಕ್ಷೇಪದ ಪಾತ್ರವನ್ನು ಹೆಚ್ಚಿಸುವಂತವುಗಳು.

ಭಾರತ ಹತ್ತಾರು ವೈವಿಧ್ಯತೆಗಳನ್ನು ಹೊಂದಿರುವ ಒಮದು ವಿಶಾಲವಾದ ದೇಶ. ಒಂದು ಒಕ್ಕೂಟ ವ್ಯವಸ್ಥೆಯಿಂದ ಮಾತ್ರವೇ ಇಲ್ಲಿ ರಾಜಕೀಯ ಪ್ರಜಾಪ್ರಭುತ್ವವನ್ನು ಕಾಯ್ದುಕೊಳ್ಳಲು ಸಾಧ್ಯ. ರಾಜ್ಯಗಳಲ್ಲಿ ವಿಭಿನ್ನ ಸಮಯಗಳಲ್ಲಿ ಚುನಾವಣೆಗಳು ಒಕ್ಕೂಟ ವ್ಯವಸ್ಥೆಯ ಒಂದು ಆಯಾಮ.

ಆದ್ದರಿಂದ, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಏಕಕಾಲದಲ್ಲಿ ಚುನಾವಣೆಗಳನ್ನು ತರುವ ಯಾವುದೇ ಕೃತಕ ಪ್ರಯತ್ನವನ್ನು ಸಂಪೂರ್ಣವಾಗಿ ವಿರೋಧಿಸುತ್ತದೆ. ಏಕೆಂದರೆ ಇದನ್ನು ಈಗಿರುವ ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ತುಳಿಯುವ ಮೂಲಕ ಮಾತ್ರವೇ ಮಾಡಲು ಸಾಧ್ಯ.

2018 ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗಳು ರಷ್ಯಾದಲ್ಲಿ ಆರಂಭವಾಗಿ ಅರ್ಹತೆ ಪಡೆದ 32 ದೇಶಗಳಲ್ಲಿ 8 ದೇಶಗಳು ಕ್ವಾರ್ಟರ್ ಫೈನಲ್ ತಲುಪಿವೆ. ಹಾಲಿ ಛಾಂಪಿಯನ್ ಜರ್ಮನಿ ಮೊದಲ ಸುತ್ತಿನಲ್ಲಿಯೇ ಹೀನಾಯವಾಗಿ ನಿರ್ಗಮಿಸಿತು. ಫುಟ್ಬಾಲ್‌ನಲ್ಲಿ ದೈತ್ಯ ಶಕ್ತಿ ಶಕ್ತಿ ಜರ್ಮನಿಯನ್ನು ಅಡಗಿಸಿದ ಕೀರ್ತಿ ಏಷ್ಯಾದ ಹಿರಿಮೆ ದಕ್ಷಿಣ ಕೊರಿಯಾಕ್ಕೆ ಸಲ್ಲುತ್ತದೆ. ಹಾಲಿ ವಿಶ್ವದ ಪ್ರಸಿದ್ಧ ಆಟಗಾರ ಲಯೊನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೈನಾ ಹಾಗೂ ಕ್ರಿಶ್ಚಿಯನ್ ರೋನಾಲ್ಡೋ ನೇತೃತ್ವದ ಪೋರ್ಚುಗಲ್ 16ನೇ ಹಂತದಲ್ಲಿ ನಿರ್ಗಮಿಸಿವೆ. ಅತಿಥೇಯ ರಷ್ಯಾ ಅಂತಿಮ ಎಂಟರ ಘಟ್ಟ ತಲುಪಿದೆ. ಕ್ವಾರ್ಟರ್ ಫೈನಲ್ಸ್ ಆಡುತ್ತಿರುವ ಎಂಟು ತಂಡಗಳೆಂದರೆ – ಉರುಗುವೇ ಫ್ರಾನ್ಸ್, ಬ್ರೆಜಿಲ್, ಬೆಲ್ಜಿಯಂ, ಸ್ವೀಡನ್, ಇಂಗ್ಲೆಂಡ್, ರಶ್ಯ, ಕ್ರೊವೆಶಿಯಾ.
ಇಲ್ಲಿ ಎಲ್ಲಾ ವಿಶ್ವ ಕಪ್ ಫುಟ್ ಬಾಲ್ ಪಂದ್ಯಗಳ ಚುಟುಕು ಇತಿಹಾಸವಿದೆ.

– ಆರ್.ಡಿ. ಮೆಲ್ಕಿಯೋರ್



# ಹಲವು ಏಳುಬೀಳುಗಳ ಫುಟ್‌ಬಾಲ್ ವಿಶ್ವಕಪ್

1904ರಲ್ಲಿ ಅಂತರ್ರಾಷ್ಟ್ರೀಯ ಫುಟ್ಬಾಲ್ ಫೆಡರೇಷನ್ ಅಸ್ಥಿತ್ವಕ್ಕೆ ಬಂದಿತು. 1928ರಲ್ಲಿ ಅಂದಿನ ಫೀಫಾ ಅಧ್ಯಕ್ಷನಾಗಿದ್ದ ಜೂಲ್ಸ್ ರಿಮೆಟ್ ವಿಶ್ವದ ಎಲ್ಲಾ ರಾಷ್ಟ್ರಗಳು ಭಾಗವಹಿಸುವ ಪಂದ್ಯಾವಳಿ ನಡೆಸಬೇಕೆಂದು ಆಶಿಸಿ ಪ್ರತಿ ನಾಲ್ಕು ವರ್ಷಕ್ಕೊಮ್ಮೆ ನಡೆಯುವಂತಹ ವಿಶ್ವಕಪ್ ಫುಟ್ಬಾಲ್ ಆರಂಭವಾಗಲು ಆಸಕ್ತಿ ವಹಿಸಿದ ಕಾರಣ 1930ರಲ್ಲಿ ಮೊದಲ ವಿಶ್ವಕಪ್ ಪಂದ್ಯಾವಳಿ ಅಸ್ಥಿತ್ವಕ್ಕೆ ಬಂದಿತು. ಉರುಗ್ವೆ ಮೊದಲ ಅತಿಥೇಯ ರಾಷ್ಟ್ರವಾಯಿತು. ಈ ಪಂದ್ಯಾವಳಿಯಲ್ಲಿ ಒಟ್ಟು 13 ರಾಷ್ಟ್ರಗಳ ತಂಡಗಳು ಭಾಗವಹಿಸಿದ್ದವು. ಅಂದಿನ ದೀರ್ಘ ಸಮುದ್ರ ಪ್ರಯಾಣದ ಕಾರಣವಾಗಿ ಯುರೋಪ್‌ನ ಕೇವಲ 4 ತಂಡಗಳು ಫ್ರಾನ್ಸ್, ಬೆಲ್ಜಿಯಂ, ಯುಗೋಸ್ಲಾವಿಯಾ ಹಾಗೂ ರೊಮೆನಿಯಾ ಮಾತ್ರವೇ ಭಾಗವಹಿಸಿದ್ದವು. ವಿಶ್ವಕಪ್‌ನ ಮೊಟ್ಟ ಮೊದಲ ಪಂದ್ಯ ಫ್ರಾನ್ಸ್ ಹಾಗೂ ಮೆಕ್ಸಿಕೋ ನಡುವೆ ನಡೆದು ಕಜಿಡಿಂನ್ಸ್ ವಿಜೇತವಾಯಿತು. ಅಂತಿಮ ಪಂದ್ಯ ಉರುಗ್ವೆ ಹಾಗೂ ಅರ್ಜೆಟೈನಾ ನಡುವೆ ನಡೆದು ಮೊಟ್ಟ ಮೊದಲ ವಿಶ್ವಕಪ್ ವಿಜೇತ ರಾಷ್ಟ್ರವಾಗಿ ಅತಿಥೇಯ ಉರುಗ್ವೆ ಮೆರೆಯಿತು.

**ಗೆಲುವು ಇಲ್ಲವೇ ಸಾವು !**

2ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗೆ ಇಟಲಿ ಅತಿಥೇಯ ರಾಷ್ಟ್ರವಾಯಿತು ಹಾಗೂ ಈ ಪಂದ್ಯಾವಳಿಗೆ ರಾಜಕೀಯ ಬಣ್ಣದ ಲೇಪನವಾಯಿತು. ಸರ್ವಾಧಿಕಾರಿ ಮುಸಲೋನಿ ಇಟಲಿಯಲ್ಲಿ ವಿಶ್ವಕಪ್ ಪಂದ್ಯಾವಳಿ ನಡೆಸಲು ಹೆಚ್ಚಿನ ಆಸಕ್ತಿ ವಹಿಸಿದ್ದ ಹಾಗೂ ಅತಿಥೇಯ ಇಟಲಿ ವಿಜೇತ ರಾಷ್ಟ್ರವಾಗುವಲ್ಲಿ ಸರ್ವಾಧಿಕಾರ ಮೆರೆದ. ಅರ್ಜೆಂಟೈನಾ ಮೂಲದ ನಾಲ್ವರು ಪ್ರಮುಖ ಆಟಗಾರರನ್ನು ಇಟಲಿಗೆ ಆಡುವಂತೆ ಸಿರಿತನದ ಆಮಿಷವೊಡ್ಡಿ ಪೋಷಿಸಲಾಯಿತು. ಇಟಲಿ ತಂಡದ ಆಟಗಾರರಿಗೆ ಗೆಲುವು ಇಲ್ಲವೇ ಸಾವು ಎನ್ನುವ ಎಚ್ಚರಿಕೆಯನ್ನು ಮುಸಲೋನಿ ನೀಡಿದ್ದ. ಪಂದ್ಯದ ಸ್ವೀಡನ್ ರೆಫ್ರಿಯನ್ನು ಪಂದ್ಯಕ್ಕೆ ಮುನ್ನ ಔತಣಕೂಟಕ್ಕೆ ಆಹ್ವಾನಿಸಲಾಯಿತು. ಪರಿಣಾಮವಾಗಿ ರೆಫ್ರಿ ಇವಾನ್ ಎಕ್‌ಲಿಂಡ್ ಇಟಲಿ ಹಾಗೂ ಜೆಕೊಸ್ಲಾವಿಯಾದ ನಡುವೆ ನಡೆದ ಅಂತಿಮ ಪಂದ್ಯದಲ್ಲಿ ತಾರತಮ್ಯ ನೀತಿ ಅನುಸರಿಸಿ ಇಟಲಿ ಜಯಶಾಲಿಯಾಗುವಂತೆ ಮಾಡಿದ.

1938ರಲ್ಲಿ 3ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗೆ ಫ್ರಾನ್ಸ್ ಅತಿಥೇಯ ರಾಷ್ಟ್ರವಾಯಿತು. ಈ ಪಂದ್ಯಾವಳಿಯಲ್ಲಿ ಅಂತಿಮ ಸುತ್ತಿನಲ್ಲಿ 15 ತಂಡಗಳು ಭಾಗವಹಿಸಿದ್ದವು ಹಾಗೂ ಇಟಲಿ ಸತತ 2ನೇ ಬಾರಿಗೆ ವಿಶ್ವಕಪ್ ಎತ್ತಿ ಹಿಡಿಯಿತು. ವಿಶ್ವ ಯುದ್ಧದ ಕಾರಣ 1938 ರ ನಂತರ 1950 ರ ವರೆಗೆ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿ ನಡೆಯಲಿಲ್ಲ.

**ಬೂಟ್ ಧರಿಸಲು ನಿರಾಕರಿಸಿದ ಭಾರತದ ಫುಟ್ಬಾಲ್ ಆಟಗಾರರು!**

4ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗೆ ಬ್ರೆಜಿಲ್ ಆತಿಥ್ಯ ನೀಡಿತ್ತು. 2 ಲಕ್ಷ ಪ್ರೇಕ್ಷಕರು ಆಸೀನರಾಗುವಷ್ಟು ವ್ಯವಸ್ಥೆ ಹೊಂದಿರುವ, ಇಂದಿಗೂ ವಿಶ್ವದಲ್ಲಿ ಅತಿ ದೊಡ್ಡ ಫುಟ್ಬಾಲ್ ಕ್ರೀಡಾಂಗಣವಾಗಿರುವ ಮರಕಾನ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆದವು. 1950ರಲ್ಲಿ ಬ್ರೆಜಿಲ್ ವಿಶ್ವದಲ್ಲಿ ಬಲಿಷ್ಟ ಫುಟ್ಬಾಲ್ ರಾಷ್ಟ್ರವಾಗಿ ಹೊರಹೊಮ್ಮಿತು. 1950ರಲ್ಲಿ ಬ್ರೆಜಿಲ್ ಹಾಗೂ ಉರುಗ್ವೆ ನಡುವೆ ಅಂತಿಮ ಪಂದ್ಯ ನಡೆಯಿತು. ಮರಕಾನ ಕ್ರೀಡಾಂಗಣ ಬ್ರೆಜಿಲ್ ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿತ್ತು. ಅಂತಿಮ ಹಂತದವರೆಗೆ ಬ್ರೆಜಿಲ್ ಎಲ್ಲಾ ಎದುರಾಳಿ ರಾಷ್ಟ್ರಗಳ ವಿರುದ್ಧ ಪ್ರಚಂಡ ಗೆಲುವು ಸಾಧಿಸಿತ್ತು. ಅಂತಿಮ ಪಂದ್ಯದ ಮುನ್ನವೇ ಬ್ರೆಜಿಲ್ ವಿಶ್ವಕಪ್ ವಿಜೇತ ರಾಷ್ಟ್ರವೆಂದು ಫುಟ್ಬಾಲ್ ಪ್ರೇಮಿಗಳು ನಂಬಿದ್ದರು. ಪಂದ್ಯಕ್ಕೆ ಮುನ್ನವೇ ನಗರದ ಮೇಯರ್ ವಿಶ್ವಕಪ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬ್ರೆಜಿಲ್ ಅನ್ನು ಅಭಿನಂದಿಸಲು ಭಾಷಣ ತಯಾರು ಮಾಡಿದ್ದ. ಮಾತ್ರವಲ್ಲ ಬ್ರೆಜಿಲ್ ಪರ ವಿಜೇತ ಗೀತೆಯನ್ನೂ ರಚಿಸಲಾಗಿತ್ತು. ಆದರೆ ಅಂತಿಮ ಪಂದ್ಯದಲ್ಲಿ ಎಲ್ಲರ ನಿರೀಕ್ಷೆಯನ್ನು ಸುಳ್ಳುಮಾಡಿ ಬ್ರೆಜಿಲ್ ಅನ್ನು ಉರುಗ್ವೆ ಸೋಲಿಸಿತು.ಇಡೀ ಬ್ರೆಜಿಲ್ ಆಘಾತಕ್ಕೆ ಒಳಗಾಯಿತು. 2 ಲಕ್ಷ ಪ್ರೇಕ್ಷಕರಿದ್ದ ಮರಕಾನ ಸ್ಟೇಡಿಯಂನಲ್ಲಿ ಸ್ಮಶಾನ ಮೌನ ಆವರಿಸಿತು. ಈ ಆಘಾತದಲ್ಲಿ 4ನೇ ವಿಶ್ವಕಪ್ ವಿಜೇತ ರಾಷ್ಟ್ರ ಉರುಗ್ವೆಗೆ ಟ್ರೋಫಿ ನೀಡುವುದನ್ನೇ ಮರೆಯಲಾಯಿತು. ಬ್ರೆಜಿಲ್‌ನ ಈ ಸೋಲಿನ ದಿನವನ್ನು ಅನೇಕ ದಶಕಗಳ ಕಾಲ ಜನತೆ ಶೋಕದಿನವಾಗಿ ಆಚರಿಸುತ್ತಾ ಬಂದಿರುತ್ತಾರೆ. ಬ್ರೆಜಿಲ್‌ನ ಈ ಸೋಲು ಮರಕಾನ ದುರಂತ ಎಂದು ಹೆಸರುವಾಸಿಯಾಯಿತು. 1950ರ ಪಂದ್ಯಾವಳಿಗೆ ಭಾರತ ತಂಡ ಅರ್ಹತೆ ಗಳಿಸಿತ್ತು. ಆದರೆ ಬೂಟ್ ಧರಿಸಿ ಆಡಲು ಭಾರತದ ಫುಟ್ಬಾಲ್ ಆಟಗಾರರು ನಿರಾಕರಿಸಿದ ಕಾರಣ ಭಾರತ ಪಂದ್ಯಾವಳಿಯಿಂದ ಹೊರಗುಳಿದಿದ್ದು ಒಂದು ಐತಿಹಾಸಿಕ ದುರಂತ.

5ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗಳು ಫಿಫಾ ಕೇಂದ್ರ ಕಛೇರಿ ಇರುವ ಸ್ವಿಝರ್‌ಲ್ಯಾಂಡ್ ನಲ್ಲಿ ನಡೆಯಿತು. ಈ ಪಂದ್ಯಾವಳಿಯಲ್ಲಿ 16 ದೇಶಗಳು ಭಾಗವಹಿಸಿದ್ದವು. 1954ರಲ್ಲಿ ಸೈನ್ಯದಲ್ಲಿ ಮೇಜರ್ ಆಗಿದ್ದ ಪುಸ್ಕಾಸ್ ನೇತೃತ್ವದ ಹಂಗೇರಿ ಬಿರುಗಾಳಿಯಂತೆ ಎಲ್ಲಾ ತಂಡಗಳನ್ನು ಸೋಲಿಸಿ ಅಂತಿಮ ಪಂದ್ಯದಲ್ಲಿ ಪಶ್ಚಿಮ ಜರ್ಮನಿಯ ವಿರುದ್ಧ ಸೋಲು ಕಂಡಿತು. ಈ ಪಂದ್ಯಾವಳಿಯಲ್ಲಿ ಹಂಗೇರಿ ಹಾಗೂ ಬ್ರೆಜಿಲ್ ನಡುವೆ ನಡೆದ ಸೆಮಿಫೈನಲ್ ಪಂದ್ಯ ಆಟಗಾರರಿಂದ ಹಿಂಸಾ ರೂಪ ಪಡೆಯಿತು. ಪಂದ್ಯದ ನಂತರವೂ ಬ್ರೆಜಿಲ್ ಹಾಗೂ ಹಂಗೇರಿ ಆಟಗಾರರ ನಡುವೆ ಹೊಡೆದಾಟ ನಡೆದಿತ್ತು. ಈ ಪಂದ್ಯ ಬರ್ನ್ ಯುದ್ಧ ಎಂದು ಹೆಸರುವಾಸಿಯಾಯಿತು. ಕಮ್ಯುನಿಸಂ ಹಾಗೂ ಕ್ರಿಶ್ಚಿಯನ್ ಧರ್ಮದ ನಡುವೆ ನಡೆದ ಯುದ್ಧ ಎಂದು ಕ್ರೀಡಾ ಪತ್ರಕರ್ತರು ಈ ಪಂದ್ಯವನ್ನು ವಿಶ್ಲೇಷಿಸಿದರು. 1954ರ ಈ ಪಂದ್ಯಾವಳಿಯಿಂದ ಹಂಗೇರಿ ತಂಡ ನಾಯಕ ಫ್ರೆನ್ಸ್ ಪುಸ್ಕಾಸ್ ವಿಶ್ವ ವಿಖ್ಯಾತನಾಗಿ ನಂತರದಲ್ಲಿ ಹಂಗೇರಿ ತೊರೆದು ಸ್ಪೇನ್‌ನಲ್ಲಿ ನೆಲೆನಿಂತು ಪ್ರಸಿದ್ಧನಾದ.

**ಪೀಲೆ ಮ್ಯಾಜಿಕ್**

1958ರಲ್ಲಿ ಸ್ವೀಡನ್‌ನಲ್ಲಿ ನಡೆದ 6ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯಲ್ಲಿ ಫುಟ್ಬಾಲ್ ದೈತ್ಯ ಬ್ರೆಜಿಲ್ ಮೊಟ್ಟ ಮೊದಲ ಬಾರಿಗೆ ವಿಶ್ವಕಪ್ ಜಯಿಸಿತು. ಈ ಪಂದ್ಯಾವಳಿಯಲ್ಲಿ ಫುಟ್ಬಾಲ್ ಮಾಂತ್ರಿಕ ಪೀಲೆ ತನ್ನ ಆಗಮನವನ್ನು ಪ್ರಕಟಿಸಿದ ಹಾಗೂ ಬ್ರೆಜಿಲ್ ವಿಜೇತನಾಗಲು ಕಾರಣಕರ್ತನಾದ.

7ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿ 1962ರಲ್ಲಿ ಚಿಲಿಯ ಆತಿಥ್ಯದಲ್ಲಿ ನೆರವೇರಿತು. ಈ ಪಂದ್ಯಾವಳಿಯ ಅಂತಿಮ ಹಂತದಲ್ಲಿ 16 ರಾಷ್ಟ್ರಗಳ ತಂಡಗಳು ಭಾಗವಹಿಸಿದ್ದವು. ಮೊದಲ ಎರಡು ಪಂದ್ಯಗಳ ನಂತರ ಪೀಲೆ ದೈಹಿಕವಾಗಿ ಗಾಯಗೊಂಡು ನಿರ್ಗಮಿಸಬೇಕಾಯಿತು. ಪೀಲೇ ಇಲ್ಲದೆ ಅಂತಿಮ ಪಂದ್ಯ ಆಡಿದ್ದ ಬ್ರೆಜಿಲ್ ಗಾರಿಂಚ ಎಂಬ ಆಟಗಾರನ ಅದ್ಭುತ ಸಾಧನೆಯಿಂದಾಗಿ 2ನೇ ಬಾರಿಗೆ ವಿಶ್ವಕಪ್ ಪಡೆಯಿತು.

ಆಧುನಿಕ ಫುಟ್ಬಾಲ್‌ನ ಉಗಮಸ್ಥಾನ ಇಂಗ್ಲೆಂಡ್‌ನಲ್ಲಿ 1966ರಲ್ಲಿ 8ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿ ನಡೆಯಿತು. ಏಷ್ಯಾದ ಪುಟ್ಟ ರಾಷ್ಟ್ರ ಉತ್ತರ ಕೊರಿಯಾ ಅಂದಿನ ದೈತ್ಯ ಫುಟ್ಬಾಲ್ ತಂಡಗಳನ್ನು ಬಗ್ಗುಬಡೆದು ಫುಟ್ಬಾಲ್ ಪ್ರೇಮಿಗಳಲ್ಲಿ ಅಚ್ಚರಿ ಮೂಡಿಸಿತು. ಚಿಲಿ ವಿರುದ್ಧದ ಪಂದ್ಯದಲ್ಲಿ ಸಮಬಲ ತೋರಿಸಿದ್ದ ಉತ್ತರ ಕೊರಿಯಾ ನಂತರ ಬಲಿಷ್ಟ ಇಟಲಿಯನ್ನು ಸೋಲಿಸಿತು. ಇಂಗ್ಲೆಂಡ್ ಮಿಡ್ಲ್‌ಸ್ ಬರ್ಗ್‌ನ ದುಡಿಯುವ ವರ್ಗದ ಬೆಂಬಲ ಉತ್ತರ ಕೊರಿಯಾಕ್ಕೆ ದೊರೆತದ್ದು ಈ ಪಂದ್ಯಾವಳಿಯ ವಿಶೇಷವಾಗಿತ್ತು. ಕ್ವಾರ್ಟರ್ ಫೈನಲ್‌ನಲ್ಲಿ ಪೋರ್ಚುಗಲ್ ವಿರುದ್ಧದ ಪಂದ್ಯದ ಪ್ರಥಮಾರ್ಧದಲ್ಲಿ ಮೂರು ಗೋಲುಗಳಿಂದ ಮುಂದಿದ್ದ ಕುಬ್ಜ ಆಟಗಾರರಿಂದ ತುಂಬಿದ್ದ ಉತ್ತರ ಕೊರಿಯಾ ನಂತರದ ಅರ್ಧದಲ್ಲಿ ವಿಶ್ವ ವಿಖ್ಯಾತ ಆಟಗಾರ ಎಸೆಬಿಯೋ ಎಂಬ ಫುಟ್ಬಾಲ್ ಮಾಂತ್ರಿಕನಿಂದಾಗಿ ಪೋರ್ಚುಗಲ್ ನಾಲ್ಕು ಗೋಲುಗಳನ್ನು ಗಳಿಸಿ ಪಂದ್ಯ ವಿಜೇತವಾಯಿತು. ಈ ಪಂದ್ಯಾವಳಿಯ ಅಂತಿಮ ಪಂದ್ಯದಲ್ಲಿ ಅತಿಥೇಯ ಇಂಗ್ಲೆಂಡ್ ಜರ್ಮನಿ ವಿರುದ್ಧ ಗೆದ್ದು ಬೀಗಿತು.

1970ರಲ್ಲಿ ಮೆಕ್ಸಿಕೊದಲ್ಲಿ ನಡೆದ 9ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯಲ್ಲಿ ಬಲಿಷ್ಟ ಬ್ರೆಜಿಲ್ 3ನೇ ಬಾರಿ ಟ್ರೋಫಿ ಪಡೆಯಿತು. ಪುನಃ ಫುಟ್ಬಾಲ್ ಸಾಮ್ರಾಟ ಪೀಲೆ ನೇತೃತ್ವವೇ ಈ ವಿಜಯಕ್ಕೆ ಕಾರಣ. ಆವರೆಗೆ ವಿಜೇತರಿಗೆ ನೀಡುವ ಜೂಲ್ಸ್ ರಿಮೇಟ್‌ಟ್ರೋಫಿ ಶಾಶ್ವತವಾಗಿ ಬ್ರೆಜಿಲ್ ಪಾಲಾಯಿತು.

**ಟೋಟಲ್ ಫುಟ್ಬಾಲ್**

1974ರಲ್ಲಿ 10 ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿ ಪಶ್ಚಿಮ ಜರ್ಮನಿಯಲ್ಲಿ ನಡೆಯಿತು. ಆಗಿನ್ನೂ ಜರ್ಮನಿ ಏಕೀಕರಣವಾಗಿರಲಿಲ್ಲ. 1974ರಲ್ಲಿ ಪಶ್ಚಿಮ ಜರ್ಮನಿ ಹಾಗೂ ಹಾಲೆಂಡ್ ಬಲಿಷ್ಟ ತಂಡಗಳಾಗಿದ್ದವು. ಹಾಲೆಂಡ್ ತಂಡದ ಯೋಹಾನ್ ಕ್ರಯಫ್ ಕೃಶಕಾಯನಾಗಿದ್ದರೂ ವಿಶ್ವದ ಅಪ್ರತಿಮ ಆಟಗಾರನಾಗಿದ್ದ. ಹಾಲೆಂಡ್ ತಂಡ 1970ರ ದಶಕದಲ್ಲಿ ಟೋಟಲ್ ಫುಟ್ಬಾಲ್ ಎಂಬ ಆಟದ ವಿಧಾನವನ್ನು ಜನಪ್ರಿಯಗೊಳಿಸಿತು. ಗೋಲ್ ಕೀಪರ್‌ನ್ನು ಹೊರತುಪಡಿಸಿ ಎಲ್ಲಾ 10 ಆಟಗಾರರು ರಕ್ಷಣೆ, ಮಧ್ಯಮ ವಿಭಾಗ, ಮುನ್ಪಡೆ ವಿಭಾಗ ಎಂಬ ಭೇದವಿಲ್ಲದೆ ಮೈದಾನದ ಉದ್ದಗಲಕ್ಕೂ ಹರಿದಾಡಿ ವಿಶ್ವದ ಬಲಿಷ್ಟ ದೇಶಗಳ ತಂಡಗಳನ್ನು ಬೆಚ್ಚಿಬೀಳಿಸಿದರು. ಈ ಪದ್ಧತಿಯ ರೂವಾರಿ ಕ್ರಯಫ್. ಪಶ್ಚಿಮ ಜರ್ಮನಿ ತಂಡ ಅಪ್ರತಿಮ ಆಟಗಾರರಿಂದ ಕೂಡಿತ್ತು. ವಿಶ್ವದ ಮತ್ತೊಬ್ಬ ಅಪ್ರತಿಮ ಆಟಗಾರ ಜಗತ್ಪಸಿದ್ಧ ಫ್ರಾನ್ಜ್ ಬೆಕನ್‌ಬರ್ ಹಾಗೂ ಫುಟ್ಬಾಲ್ ಮಾಂತ್ರಿಕ ಹಾಲೆಂಡನ್‌ನ ಯೋಹಾನ್ ಕ್ರಯಫ್ ಸಮಕ್ಷಮದಲ್ಲಿ ಹಾಲೆಂಡ್ ಹಾಗೂ ಪಶ್ಚಿಮ ಜರ್ಮನಿ ಫೈನಲ್‌ನಲ್ಲಿ ಮುಖಾಮುಖಿಯಾದರು. ಕ್ರಯಫ್‌ನ ಅಸಾಧಾರಣ ಪ್ರತಿಭೆಯ ಎದುರು ಅತಿಥೇಯ ಪಶ್ಚಿಮ ಜರ್ಮನಿ ಗೆಲುವು ಗಳಿಸಿತು. ಇಂದಿಗೂ ವಿಶ್ವದ 10 ನೇ ಶ್ರೇಷ್ಠ ಫುಟ್ಬಾಲ್ ಆಟಗಾರರಲ್ಲಿ ಕ್ರಯಫ್ ಹಾಗೂ ಬೆಕನ್‌ಬರ್ ಸ್ಥಾನ ಗಳಿಸಿದ್ದಾರೆ.

1978ರಲ್ಲಿ 11ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿ ಅರ್ಜೆಂಟೈನಾದಲ್ಲಿ ನಡೆಯಿತು. ಆ ಸಮಯದಲ್ಲಿ ಅರ್ಜೆಂಟೈನಾ ವಾಕ್ ಸ್ವಾತಂತ್ರ್ಯವಿಲ್ಲದ ಮಿಲಿಟರಿ ಸರ್ವಾಧಿಕಾರದ ಅಡಿಯಲ್ಲಿ ಇತ್ತು. ರಾಜಕೀಯ ಭಿನ್ನಾಭಿಪ್ರಾಯಗಳಿಗಾಗಿ ಅಂದು ವಿಶ್ವವಿಖ್ಯಾತನಾಗಿದ್ದ ಹಾಲೆಂಡ್‌ನ ಕ್ರಯಫ್ ಸೇರಿದಂತೆ ಅನೇಕ ಆಟಗಾರರು ಅರ್ಜೆಂಟೈನಾದಲ್ಲಿ ನಡೆದ ಪಂದ್ಯಾವಳಿಯಿಂದ ದೂರವಿದ್ದರು. ಅರ್ಜೆಂಟೈನಾ ಮತ್ತು ಪೆರು ನಡುವಿನ ಪ್ರಥಮ ಸುತ್ತಿನ ಪಂದ್ಯಾವಳಿಗೆ ಭ್ರಷ್ಟಾಚಾರದ ಕಳಂಕ ಅಂಟಿಕೊಂಡಿತ್ತು. ಹಾಲೆಂಡ್ ಮತ್ತು ಅರ್ಜೆಂಟೈನಾ ತಂಡದ ನಡುವೆ ನಡೆದ ಫೈನಲ್‌ನಲ್ಲಿ ಅತಿಥೇಯ ಅರ್ಜೆಂಟೈನಾ ಪ್ರಥಮ ಬಾರಿಗೆ ವಿಶ್ವಕಪ್ ಪಡೆಯಿತು.

12ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗೆ ಸ್ಪೇನ್ ಆತಿಥ್ಯ ನೀಡಿತ್ತು. ಅಂತಿಮ ಸುತ್ತಿಗೆ ಅರ್ಹತೆ ಪಡೆಯುವ ತಂಡಗಳ ಸಂಖ್ಯೆಯನ್ನು 16 ರಿಂದ 24ಕ್ಕೆ ಏರಿಸಲಾಯಿತು. ಝೀಕೋ, ಪಲಾಕೋ, ಸಾಕ್ರೇಟ್ಸ್ ರಂತಹ ಅಪ್ರತಿಮ ಆಟಗಾರರಿಂದ ಕೂಡಿದ್ದ ಬ್ರೆಜಿಲ್ ಫೈನಲ್ ತಲುಪಲಿಲ್ಲ. ಹೊಸ ಫುಟ್ಬಾಲ್ ತಾರೆ ಇಟಲಿಯ ಪಾವ್ಲೊ ರೂಸಿಯ ಅದ್ಭುತ ಆಟದಿಂದ ಇಟಲಿ ಬಲಿಷ್ಟ ಪಶ್ಚಿಮ ಜರ್ಮನಿಯನ್ನು ಸೋಲಿಸಿತು. ಬೆಟ್ಟಿಂಗ್ ಹಾಗೂ ಭ್ರಷ್ಟಾಚಾರದ ಕಳಂಕ ಹೊತ್ತಿದ್ದ ಇಟಲಿಯ ಫುಟ್ಬಾಲ್ ರಂಗ ಈ ವಿಜಯದಿಂದ ತನ್ನ ಕಳಂಕವನ್ನು ಮರೆಯಿತು. ವಿಶ್ವದ ಮತ್ತೊಬ್ಬ ಸರ್ವಶ್ರೇಷ್ಟ ಡೈಗೋ ಮರಡೋನಾ 1982ರಲ್ಲಿ ಅರ್ಜೆಂಟೈನಾ ಪರವಾಗಿ ಈ ಪಂದ್ಯಾವಳಿಗೆ ಪಾದಾರ್ಪಣೆ ಮಾಡಿದ್ದ ಹಾಗೂ ಬ್ರೆಜಿಲ್ ವಿರುದ್ಧದ ಪಂದ್ಯದಲ್ಲಿ ಕೆಂಪು ಕಾರ್ಡ್ ಶಿಕ್ಷೆಗೆ ಒಳಗಾಗಿದ್ದ.

**ಮರಡೋನಾ ಸರ್ವಕಾಲೀನ ಶ್ರೇಷ್ಟ ಗೋಲು**

1986ರಲ್ಲಿ 13ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗೆ ಮೆಕ್ಸಿಕೊ ಆತಿಥ್ಯ ವಹಿಸಿತ್ತು. ಮೊದಲು ಈ ಪಂದ್ಯಾವಳಿಗೆ ಆತಿಥ್ಯ ನೀಡುವ ಗೌರವ ಕೊಲಂಬಿಯಾಕ್ಕೆ ಲಭ್ಯವಾಗಿದ್ದರೂ ಆರ್ಥಿಕ ತೊಂದರೆಯಿಂದಾಗಿ ಕೊಲಂಬಿಯಾ ಹಿಂಜರಿದ ಕಾರಣ ಮೆಕ್ಸಿಕೋ ಈ ಜವಾಬ್ದಾರಿಯನ್ನು ತನ್ನ ಕೈಗೆತ್ತಿಕೊಂಡಿತ್ತು. ಎರಡು ವರ್ಷಗಳ ಮೊದಲು ಸಂಭವಿಸಿದ ಭೂಕಂಪದಿಂದ ಜರ್ಜರಿತವಾಗಿದ್ದು ನಂತರ ವಿಶ್ವವೇ ಅಚ್ಚರಿ ಪಡುವಂತೆ ಸುಧಾರಿಸಿಕೊಂಡು ಮೆಕ್ಸಿಕೋ ಈ ಸಾಹಸಕಾರ್ಯವನ್ನು ಕೈಗೊಂಡಿತ್ತು. ಅರ್ಜೆಂಟೈನಾ 1986ರಲ್ಲಿ ಎರಡನೇ ಬಾರಿಗೆ ವಿಶ್ವಕಪ್ ಗೆಲ್ಲಲು ಪೀಲೆ ನಂತರದ ವಿಶ್ವದ ಸರ್ವಶ್ರೇಷ್ಟ ಆಟಗಾರನಾಗಿದ್ದ ಡೈಗೋ ಮರಡೋನಾ ಕಾರಣಕರ್ತನಾದ. ಸೆಮಿಫೈನಲ್‌ನಲ್ಲಿ ಮರಡೋನಾ ಇಂಗ್ಲೆಂಡ್ ವಿರುದ್ಧ ಮೈದಾನದ ಮಧ್ಯರೇಖೆಯಿಂದ ಚೆಂಡನ್ನು ಏಕಾಂಗಿಯಾಗಿ ಕೊಂಡೊಯ್ದು ಅಂದಿನ ವಿಶ್ವಶ್ರೇಷ್ಟ ಗೋಲ್ ಕೀಪರ್ ಪೀಟರ್ ಶಿಲ್ಟಾನ್‌ನನ್ನು ಮಣಿಸಿ ದಾಖಲಿಸಿದ ಗೋಲು ಇಂದಿಗೂ ವಿಶ್ವದ ಸರ್ವಕಾಲೀನ ಶ್ರೇಷ್ಟ ಗೋಲುಗಳಲ್ಲಿ ಒಂದಾಗಿದೆ.

1990ರಲ್ಲಿ 14ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗಳು ಇಟಲಿಯಲ್ಲಿ ನಡೆದವು. ಕತ್ತಲ ಖಂಡ ಆಫ್ರಿಕಾದಿಂದ ಅರ್ಹತೆ ಪಡೆದಿದ್ದ ಕ್ಯಾಮರೋನ್ ತನ್ನ ಅಪ್ರತಿಮ ಆಟದಿಂದ ವಿಶ್ವದ ಗಮನ ಸೆಳೆದಿತ್ತು. ಕ್ಯಾಮರೋನ್ ತನ್ನ ಮೊದಲ ಪಂದ್ಯದಲ್ಲೇ ಹಾಲಿ ಛಾಂಪಿಯನ್ ಮರಡೋನಾ ನೇತೃತ್ವದ ಅಂರ್ಜೆಂಟೈನಾವನ್ನು ಸೋಲಿಸಿತ್ತು. ತನ್ನ ಗುಂಪಿನಲ್ಲಿ ಬಲಿಷ್ಟ ರೊಮೇನಿಯಾವನ್ನು ಸೋಲಿಸಿ ಎರಡನೆಯ ಹಂತ ತಲುಪಿ ಅಂದು ವಿಶ್ವದ ಶ್ರೇಷ್ಟ ತಂಡಗಳಲ್ಲಿ ಒಂದಾದ ಕೊಲಂಬಿಯಾವನ್ನು ಎರಡನೆಯ ಹಂತದ ಪಂದ್ಯದಲ್ಲಿ ಸೋಲಿಸಿತು. 38 ವರ್ಷ ವಯಸ್ಸಿನ ಕ್ಯಾಮರೋನ್ ಹಿರಿಯ ಆಟಗಾರ ರೋಜರ್ ಮಿಲ್ಲಾ 1990ರ ಪಂದ್ಯಾವಳಿಯ ಹೊಸ ತಾರೆಯಾಗಿ ಉದಯಿಸಿದ. ನಂತರ ಬಲಿಷ್ಟ ಇಂಗ್ಲೆಂಡ್ ವಿರುದ್ಧ ಕ್ವಾರ್ಟರ್ ಪೈನಲ್‌ನಲ್ಲಿ ಕ್ಯಾಮರೋನ್ ಅಪ್ರತಿಮವಾಗಿ ಹೋರಾಡಿ 3–2 ಅಂತರದಿಂದ ಇಂಗ್ಲೆಂಡ್ ವಿರುದ್ಧ ಸೋತರೂ ಸಹ ತನ್ನ ಅದ್ಭುತ ಆಟದಿಂದ 1990ರಲ್ಲಿ ವಿಶ್ವದ ಗಮನ ಸೆಳೆಯಿತು. 1990ರಲ್ಲಿ ಹಾಲಿ ಛಾಂಪಿಯನ್ ಅರ್ಜೆಂಟೈನಾ ತಂಡ ಪುನಃ ಫೈನಲ್ ತಲುಪಿ ಜರ್ಮನಿ ವಿರುದ್ಧ ಸೋಲು ಕಂಡಿತು.


1994 ರಲ್ಲಿ 15ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗಳು ಅಮೆರಿಕಾದಲ್ಲಿ ನಡೆದವು. ಈ ಪಂದ್ಯಾವಳಿಯ 16ನೇ ಘಟ್ಟದಲ್ಲಿ ಅರ್ಜೆಂಟೈನಾದ ವಿಶ್ವಶ್ರೇಷ್ಟ ಆಟಗಾರ ಮರಡೋನಾ ಉದ್ದೀಪನಾ ಮದ್ದು ಸೇವನೆಯ ಆರೋಪಕ್ಕೆ ಒಳಗಾಗಿ ಪಂದ್ಯದಿಂದ ನಿಷೇದಿತನಾದ. ಬ್ರೆಜಿಲ್ ಮತ್ತೊಮ್ಮೆ ಪ್ರವರ್ದಮಾನಕ್ಕೆ ಬಂದು ಫೈನಲ್‌ನಲ್ಲಿ ಕಷ್ಟಪಟ್ಟು ಇಟಲಿಯನ್ನು ಸೋಲಿಸಿ ನಾಲ್ಕನೇ ಬಾರಿ ವಿಶ್ವಕಪ್ ಗಳಿಸಿತು. 1994ರ ಪಂದ್ಯಾವಳಿಯಲ್ಲಿ ವಿಘಟನೆಯ ನಂತರ ಸೋವಿಯತ್ ಯೂನಿಯನ್ ರಷ್ಯಾ ಹೆಸರಿನಲ್ಲಿ ಪ್ರಥಮ ಬಾರಿಗೆ ಭಾಗವಹಿಸಿತು.

**ಇರಾನ್ ಅಮೆರಿಕವನ್ನು ಸೋಲಿಸಿದಾಗ**

1998ರಲ್ಲಿ 16ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗೆ

**ಪುಟ 16 ನೋಡಿ**

# ಐದನೇ ವರ್ಷದಲ್ಲಿ ಆರ್ಥಿಕ ಅಧೋಗತಿಯ ಸಂಕೇತಗಳ ನಡುವೆ ಜಿಎಸ್‌ಟಿ 'ಯಶಸ್ಸು', 'ಚಾರಿತ್ರಿಕ' ಎಂಎಸ್‌ಪಿಯ ಹೊಸ ಜುಮ್ಲಾಗಳು




* ಕಳೆದ ನಾಲ್ಕು ವರ್ಷಗಳಲ್ಲಿ ರಫ್ತು ಇಳಿದಿದೆ, ವ್ಯಾಪಾರ ಕೊರತೆ, ಅಂದರೆ ಆಮದು ಮತ್ತು ರಫ್ತು ಮೊತ್ತಗಳ ನಡುವಿನ ಅಂತರ 2012–13ರ ನಂತರ ಈಗ ಅತೀ ಹೆಚ್ಚಿನ ಮಟ್ಟ ತಲುಪಿದೆ– ಇದು ಜೂನ್ 30ರ ಬಿಸಿನೆಸ್ ಸ್ಟಾಂಡರ್ಡ್ ಸುದ್ದಿ.
* ವಿದೇಶಿ ಹೂಡಿಕೆದಾರರರು 2018ರ ಮೊದಲ ಆರು ತಿಂಗಳಲ್ಲಿ 48,000 ಕೋಟಿ ರೂ.ಗಳನ್ನು ಹೊರಗೊಯ್ದಿದ್ದಾರೆ, ಇದು ಈ ಒಂದು ದಶಕದಲ್ಲೇ ಅತಿ ಹೆಚ್ಚು. ಎನ್ನುತ್ತದೆ ಜುಲೈ 1ರ ಪಿಟಿಐ ವರದಿ.
* ಅದೇ ದಿನದ ಇನ್ನೊಂದು ಪಿಟಿಐ ವರದಿ ವಿದೇಶಿ ನೇರ ಹೂಡಿಕೆಯ ಏರಿಕೆ ದರ 3%ಕ್ಕೆ ಇಳಿದಿದೆ. ಇದು ಕಳೆದ ಐದು ವರ್ಷಗಳಲ್ಲೇ ಅತಿ ಕಡಿಮೆ ಎನ್ನುತ್ತದೆ. ವಿದೇಶೀ ಹೂಡಿಕೆದಾರರು ಭಾರತದಲ್ಲಿ ಬಂಡವಾಳ ಹೂಡಲು ಹಿಂದೇಟು ಹಾಕುತ್ತಿದ್ದಾರಂತೆ.
* ಕಲ್ಲಿದ್ದಲು, ಕಚ್ಚಾತೈಲ, ನೈಸರ್ಗಿಕ ಅನಿಲ, ಪೆಟ್ರೋಲಿಯಂ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಇವನ್ನು ಒಟ್ಟಾಗಿ ಪ್ರಧಾನ ಉದ್ದಿಮೆ ವಲಯ ಎನ್ನಲಾಗುತ್ತದೆ. ಈ ವಲಯದ ಬೆಳವಣಿಗೆ ದರ ಮೇ ತಿಂಗಳಲ್ಲಿ 3.6%ಕ್ಕೆ ಇಳಿದಿದೆ. ಇದು ಕಳೆದ 10 ತಿಂಗಳಲ್ಲೇ ಅತಿ ಕಡಿಮೆ ದರ ಎಂದು ಜುಲೈ 2ರ ಸ್ಕ್ರೋಲ್.ಇನ್ ಹೇಳುತ್ತದೆ.
* ಬ್ಯಾಂಕಿಂಗ್ ವಲಯದಲ್ಲಿ ಠೇವಣಿ ಮೊತ್ತದ ಏರಿಕೆ ದರವೂ ನಿಧಾನಗೊಳ್ಳುತ್ತಿದೆ ಎಂದು ಜುಲೈ 6ರ ಇಎನ್‌ಎಸ್ ಇಕನಾಮಿಕ್ ಬ್ಯುರೊ ಸುದ್ದಿ ಹೇಳುತ್ತದೆ.

**ಇದು ಕಳೆದ ವಾರದ ಪ್ರಮುಖ ಆರ್ಥಿಕ ಸುದ್ದಿಗಳು. ಇದಕ್ಕೆ ಮೊದಲು ರೂಪಾಯಿ ಬೆಲೆ ಪಾತಾಳಕ್ಕೆ ಇಳಿಯುತ್ತಿರುವುದರ ಸುದ್ದಿಯೊಂದಿಗೆ ಸ್ವಿಸ್ ಬ್ಯಾಂಕಿನಲ್ಲಿ ಭಾರತೀಯರ ಠೇವಣಿಗಳು ಮಾತ್ರ ಇಳಿಯುವ ಬದಲು ಒಂದೂವರೆ ಪಟ್ಟು ಏರಿದೆ ಎಂಬ ಸುದ್ದಿ ಬಂದಿತ್ತು ಎಂಬುದನ್ನು ಗಮನಿಸಿದರೆ, ಒಳ್ಳೆಯ ದಿನಗಳ ಬಗ್ಗೆ ಮತ್ತಷ್ಟು ಪ್ರಶ್ನೆ ಚಿಹ್ನೆಗಳು ಬೀಳುತ್ತವೆ.**

ಇದರೊಂದಿಗೆ ಜುಲೈ 2ರಂದು ದೇಶಾದ್ಯಂತ 500 ನಗರ/ಪಟ್ಟಣಗಳಲ್ಲಿ 10 ಲಕ್ಷ ಅಂಗಡಿಕಾರು ಮತ್ತು ಇತರ ಚಿಲ್ಲರೆ ವ್ಯಾಪಾರಿಗಳು ವಾಲ್‌ಮಾರ್ಟ್–ಫ್ಲಿಫ್‌ಕಾರ್ಟ್ ವ್ಯವಹಾರಕ್ಕೆ ಪ್ರತಿಭಟನೆ ನಡೆಸಿದ್ದಾರೆ. ಈ ವ್ಯವಹಾರವನ್ನು ರದ್ದು ಮಾಡಬೇಕು ಎಂಬ ಬೇಡಿಕೆಯಲ್ಲದೆ, ಬಿಜೆಪಿ ಸರಕಾರ ಇ–ವಾಣಿಜ್ಯ ಕುರಿತಂತೆ ಒಂದು ಧೋರಣೆ ರೂಪಿಸಬೇಕು, ಇದರ ಮೇಲೆ ಕಣ್ಣಿಡಲು ಒಂದು ನಿಯಂತ್ರಣ ಪ್ರಾಧಿಕಾರವನ್ನು ರಚಿಸಬೇಕು ಎಂಬುದು ಈ ಚಿಲ್ಲರೆ ವ್ಯಾಪಾರಿಗಳ ಬೇಡಿಕೆ. ಇವರು ಸಾಮಾನ್ಯವಾಗಿ ಬಿಜೆಪಿ ಬೆಂಬಲಿಗರು, ಅಥವ ಅವರ ಬಗ್ಗೆ ಸಹಾನುಭೂತಿ ಉಳ್ಳವರು ಎಂದು ಭಾವಿಸಲಾಗುತ್ತದೆ ಎಂಬುದನ್ನು ಇಲ್ಲಿ ಗಮನಿಸಬೇಕು.

**ಇವುಗಳ ಪರಿವೆಯಿಲ್ಲದೆ, ಅಥವ ಬಹುಶಃ ಇವುಗಳಿಂದ ಜನಗಳ ಗಮನವನ್ನು ಬೇರೆಡೆಗೆ ತಿರುಗಿಸಲು ಜುಲೈ 1ರಂದು ದೊಡ್ಡ –ದೊಡ್ಡ ಜಾಹೀರಾತುಗಳೊಡನೆ ಜಿಎಸ್‌ಟಿಯ ಮೊದಲ ವಾರ್ಷಿಕೋತ್ಸವವನ್ನು ಆಚರಿಸಲಾಗಿದೆ. ಇದೊಂದು ಅತ್ಯಂತ ಯಶಸ್ವಿ ಕ್ರಮ ಎಂದು ಬಿಂಬಿಸುವ ಶತಪ್ರಯತ್ನ ನಡೆದಿದೆ.**

ಈ ಹಣಕಾಸು ವರ್ಷದಲ್ಲಿ ಈ ಸರಕಾರ 6ಲಕ್ಷ ಕೊಟಿ ರೂ.ಗಳನ್ನು ಜಿಎಸ್‌ಟಿ ಮೂಲಕ ಸಂಗ್ರಹಿಸುವ ಗುರಿ ಇಟ್ಟುಕೊಂಡಿದೆ. ಅಂದರೆ ಸರಾಸರಿ ತಿಂಗಳಿಗೆ 50ಸಾವಿರ ಕೋಟಿ. ಆದರೆ ಎಪ್ರಿಲ್ ಮತ್ತು ಮೇತಿಂಗಳಲ್ಲಿ ಆಗಿರುವ ಸಂಗ್ರಹ ಅನುಕ್ರಮವಾಗಿ 32089 ಕೋಟಿ ರೂ. ಮತ್ತು 28119 ಕೋಟಿ ರೂ. ಮಾರ್ಚ್‌ನಿಂದ ಮೇ ವರೆಗಿನ ಸಂಗ್ರಹ ಪತ್ರಿತಿಂಗಳೂ ಫೆಬ್ರುವರಿ ತಿಂಗಳ ಸಂಗ್ರಹಕ್ಕಿಂತಲೂ ಕಡಿಮೆ. ಹೀಗಿರುವಾಗ ಜಿಎಸ್‌ಟಿ ಒಂದು ಮಹಾಯಶಸ್ಸು ಎಂದು ಹೇಗೆ ತಾನೇ ಹೇಳಲು ಸಾಧ್ಯ ಎಂದು ಆರ್ಥಿಕ ತಜ್ಞ (ವಿವೇಕ್ ಕೌಲ್,ನ್ಯೂಸ್‌ಲಾಂಡ್ರಿ, ಜುಲೈ4) ಕೇಳುತ್ತಾರೆ.

**ಈ ವಾರ ಪ್ರಧಾನ ಮಂತ್ರಿಗಳು ತಮ್ಮ ಬೆನ್ನು ತಾವೇ ತಟ್ಟಿಕೊಳ್ಳಲು ಬಳಸಿಕೊಡ ಇನ್ನೊಂದು ಸಂದರ್ಭವೆಂದರೆ ಮುಂಗಾರು ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ)ಗಳ ಪ್ರಕಟಣೆ.** ಇದು ಈ ಜುಮ್ಲಾ ಸರಕಾರದ ಇನ್ನೊಂದು ಚುನಾವಣಾ ವರ್ಷದ ಬೊಗಳೆ ಎಂಬುದನ್ನು ಅಖಿಲ ಭಾರತ ಕಿಸಾನ್ ಸಭಾ ಅಂಕಿ–ಅಂಶಗಳ ಮೂಲಕ ತೋರಿಸಕೊಟ್ಟಿದೆ(ಪುಟ 9 ನೋಡಿ).

ನಿಜಸಂಗತಿಯೆಂದರೆ, ಎ2+ಎಫ್‌ಎಲ್ ನ್ನು ರೈತರು ಮಾಡಿದ ಖರ್ಚು ಎಂದು ಭಾವಿಸುವುದಾದರೆ, 1996 ದಿಂದ 2014ರ ವರೆಗೆ ಎಲ್ಲ ಸರಕಾರಗಳೂ ಉತ್ಪಾದನಾ ಖರ್ಚಿನ 150% ಲೆಕ್ಕಾಚಾರದಲ್ಲಿ ಕನಿಷ್ಟ ಬೆಂಬಲ ಬೆಲೆಗಳನ್ನು ಕೊಡುತ್ತಲೇ ಬಂದಿವೆ. ಮೋದಿ ಸರಕಾರವೇ ಇದುವರೆಗೆ ನಾಲ್ಕು ವರ್ಷಗಳಲ್ಲಿ ಕೊಟ್ಟಿಲ್ಲ. ಈ ವರ್ಷ ಅದನ್ನು ಕೊಟ್ಟು ಬಲವಾಗಿ ಬೆನ್ನು ತಟ್ಟಿಕೊಂಡಿದ್ದಾರಷ್ಟೇ. ಈ ಸೂತ್ರ ನಿಜವಾಗಿ ರೈತರಿಗೆ ಫಲದಾಯಕ ಬೆಲೆಗಳನ್ನು ಕೊಡುವುದಿಲ್ಲವಾದ್ದರಿಂದಲೇ ಸಿ2+50% ಬೆಲೆಗಳನ್ನು ರೈತರು ಕೇಳುತ್ತ ಬರುತ್ತಿದ್ದಾರೆ ಆಬಗ್ಗೆ ಈ ಚುನಾವಣಾ ವರ್ಷದಲ್ಲೂ ಈ ಸರಕಾರ ಕಿವುಡಾಗಿ ಕೂತಿದೆ ಎಂದು ಒಬ್ಬ ಪರಿಣಿತರು ಟಿಪ್ಪಣಿ ಮಾಡಿದ್ದಾರೆ.

ಚಾರಿತ್ರಿಕ ಬೆಂಬಲ ಬೆಲೆ ಪ್ರಕಟಿಸಿದ್ದೇವೆ ಎಂದು ಬೆನ್ನು ತಟಿಕೊಳ್ಳುತ್ತ ಪ್ರಧಾನಿಗಳು ಕೃಷಿ ವಲಯದ ಅಭಿವೃದ್ಧಿಗೆ ಕ್ರಮಗಳನ್ನು ಕೈಗೊಳ್ಳುತ್ತಲೇ ಇದ್ದೇವೆ, ಈ ದಿಕ್ಕಿನಲ್ಲಿ ಮುಂದುವರೆಸುತ್ತೇವೆ ಎಂದಿದ್ದಾರೆ.

ಆದರೆ ಹಾಗೆ ಅವರು ಹೇಳುತ್ತಿದ್ದಂತೆಯೇ ಒಂದು ಅಂತರ್‍ರಾಷ್ಟ್ರೀಯ ವರದಿ, ಒಇಸಿಡಿ–ಐಸಿಆರ್‌ಐಇಆರ್ ವರದಿಯ ಪ್ರಕಾರ 2014–16ರಲ್ಲಿ ಕೃಷಿ ಆದಾಯ ಪ್ರತಿವರ್ಷ 6ಶೇ.ದಂತೆ ಇಳಿದಿದೆ ಎಂದು ಹೇಳಿದೆ. **ಸರಕಾರ ರಸಗೊಬ್ಬರ, ವಿದ್ಯುತ್, ನೀರಾವರಿ ಮುಂತಾದವುಗಳ ಮೂಲಕ ಸಬ್ಸಿಡಿಗಳನ್ನು ಕೊಡುತ್ತಿರುವದಾಗಿ ಹೇಳಿಕೊಂಡರೂ, ಭಾರತದ ರೈತರಿಗೆ ತಮ್ಮ ಬೆಳೆಗಳಿಗೆ ಸಿಗುವ ಬೆಲೆ ಜಗತ್ತಿನಲ್ಲೇ ಅತಿ ಕಡಿಮೆಯಾದ್ದರಿಂದ ಒಟ್ಟಾರೆಯಾಗಿ ಸರಕಾರದಿಂದ ಕೃಷಿ ವಲಯಕ್ಕೆ ಸಿಗುವ ಬೆಂಬಲ ನಕಾರಾತ್ಮಕವಾಗಿದೆ ಎಂದೂ ಈ ವರದಿ ಹೇಳಿದೆ.**(ಇಎನ್‌ಎಸ್ ಇಕನಾಮಿಕ್ ಬ್ಯುರೊ, ಜುಲೈ6)ಅಂದರೆ ಕೃಷಿ ಅಭಿವೃದ್ಧಿಗೆ, ಕೃಷಿ ಆದಾಯಗಳನ್ನು ಹೆಚ್ಚಿಸುವ ಬದಲು ಅಲ್ಲಿಂದಲೇ ಕಿತ್ತುಕೊಂಡು ಬೇರೆಡೆ ಅಭಿವೃದ್ಧಿಗೆ ಕೊಡಲಾಗುತ್ತಿದೆ. ಚಮಚಾ ಕಾರ್ಪೊರೇಟ್‌ಗಳ 'ಅಭಿವೃದ್ಧಿ'ಗೆ ಎಂದು ಬಹುಶಃ ಬೇರೆ ಹೇಳಬೇಕಾಗಿಲ್ಲ.

**ಈ ಸರಕಾರ ರೈತರ ಆತ್ಮಹತ್ಯೆಗಳ ಮಾಹಿತಿಗಳನ್ನು ಬಿಡುಗಡೆ ಮಾಡುವುದನ್ನು ನಿಲ್ಲಿಸಿರುವುದು ಏಕೆ ಎಂಬುದಕ್ಕೆ ಕಾರಣ ಇಲ್ಲಿದೆ ಎಂದು ಈಬಗ್ಗೆ ಸೀತಾರಾಮ್ ಯೆಚುರಿ ಟಿಪ್ಪಣಿ ಮಾಡಿದ್ದಾರೆ.**

## ಕೋಟ್ಯಂತರ ಮಂದಿಗೆ ಆಧುನಿಕ, ಸುರಕ್ಷಿತ ರೈಲ್ವೆಯೋ, 1 ಲಕ್ಷ ಕೋಟಿ ರೂ.ಗಳ ಬುಲೆಟ್ ಟ್ರೇನೋ?

ಒಳ್ಳೆಯ ದಿನಗಳಲ್ಲಿ ಇಂತಹ ಆಯ್ಕೆಗೆ ಅವಕಾಶವಿಲ್ಲ. ಆದರೂ ಭಾರತದ ಮೆಟ್ರೊ ಮನುಷ್ಯ ಎನಿಸಿರುವ ಪ್ರಖ್ಯಾತ ರೈಲ್ವೆ ಇಂಜಿನಿಯರ್ ಇ.ಶ್ರೀಧರನ್ ಪ್ರಕಾರ ಭಾರತಕ್ಕೆ ಬೇಕಾಗಿರುವುದು ಕೆಲವೇ ಅತಿಶ್ರೀಮಂತರಿಗೆ ಪ್ರಯೋಜನವಾಗಬಹುದಾದ ಅತಿ ವೇಗದ ಬುಲೆಟ್ ಟ್ರೇನ್ ಅಲ್ಲ, ಬದಲಾಗಿ ಒಂದು ಆಧುನಿಕ, ಸುರಕ್ಷಿತ ಮತ್ತು ವೇಗದ ರೈಲ್ವೆ ವ್ಯವಸ್ಥೆ.

ಜೈವಿಕ ಶೌಚಾಲಯಗಳ ಜಾರಿ ಬಿಟ್ಟರೆ ಭಾರತೀಯ ರೈಲ್ವೆ ಯಾವುದೇ ಪ್ರಗತಿಯನ್ನು ಸಾಧಿಸಿಲ್ಲ. ಪ್ರತಿಷ್ಠಿತ ಟ್ರೇನ್‌ಗಳ ವೇಗವೂ ಹೆಚ್ಚಿಲ್ಲ, ಸಮಯಬದ್ಧತೆ ಅತಿ ಕೆಟ್ಟದಾಗಿದೆ, ಅಧಿಕೃತವಾಗಿ 70% ರೈಲುಗಳು ಮಾತ್ರ ಸಮಯಕ್ಕೆ ಸರಿಯಾಗಿ ಬರುತ್ತವೆ, ವಾಸ್ತವವಾಗಿ ಅರ್ಧದಷ್ಟು ಮಾತ್ರವೇ ಸಮಯಕ್ಕೆ ಸರಿಯಾಗಿ ಓಡುತ್ತಿವೆ ಎನ್ನುತ್ತಾರೆ ಶ್ರೀಧರನ್.


ಸುರಕ್ಷಿತತೆ ಹೆಚ್ಚಿಲ್ಲ, ಹಳಿಗಳಲ್ಲಿ, ಲೆವೆಲ್ ಕ್ರಾಸಿಂಗ್‌ಗಳಲ್ಲಿ, ಉಪನಗರ ರೈಲುಗಳಲ್ಲಿ ಜನ ಸಾಯುತ್ತಿದ್ದಾರೆ. ಪ್ರತಿವರ್ಷ ಹಳಿಗಳಲ್ಲಿ 20 ಸಾವಿರ ಜನ ಸಾಯುತ್ತಿದ್ದಾರೆ ಎಂದು ಅವರು ಹೇಳುತ್ತಾರೆ.

ಆದರೆ ಅಚ್ಚೇ ದಿನ್ ಆದ್ಯತೆ ಸಮಯಕ್ಕೆ ಸರಿಯಾಗಿ ರೈಲುಗಳನ್ನು ಓಡಿಸುವುದೂ ಅಲ್ಲ, ಸುರಕ್ಷಿತ ಪ್ರಯಾಣವೂ ಅಲ್ಲ, ಆಧುನೀಕರಣ? 'ಭಾರತೀಯ ರೈಲ್ವೆ ಮುಂದುವರೆದ ದೇಶಗಳ ವ್ಯವಸ್ಥೆಗಿಂತ 20 ವರ್ಷಗಳಷ್ಟು ಹಿಂದಿದೆ ಎಂದು ಶ್ರೀಧರನ್ ಹೇಳಿದ್ದಾರೆ.

ಬಹುಶಃ ಅಚ್ಚೇ ದಿನ್ ಮಂದಿಗೆ ಆಧುನೀಕರಣ ಎಂದರೆ ಬುಲೆಟ್ ಟ್ರೇನ್ ಮಾತ್ರ. 1 ಲಕ್ಷ ಕೊಟಿ ರೂ ಖರ್ಚು ಮಾಡಿ ಇನ್ನು 10ವರ್ಷಗಳಲ್ಲಿ ಮುಂಬೈ–ಅಹಮದಾಬಾದ್ ಬುಲೆಟ್ ರೈಲು ಓಡಲಾರಂಭಿಸುವ ವೇಳೆಗೆ ಭಾರತೀಯ ರೈಲ್ವೆ 30ವರ್ಷ ಹಿಂದೆ ಬಿದ್ದರೇನಂತೆ. ಒಂದು ಬುಲೆಟ್ ಟ್ರೇನ್ ಎಲ್ಲ ಹಿಂದುಳಿಕೆಯನ್ನು ಒಂದೇ ಓಟದಲ್ಲಿ ಅಳಿಸಿ ಹಾಕುತ್ತದೆ. ಅದಕ್ಕಾಗಿ ರೈಲ್ವೇ ಬಜೆಟನ್ನು ಕೈಬಿಟ್ಟನಂತರ ಪೂರ್ಣಕಾಲದ ಸಂಪುಟ ದರ್ಜೆಯ ರೈಲ್ವೆ ಮಂತ್ರಿಯೂ ಇಲ್ಲದಿರುವಾಗ ಪ್ರಧಾನ ಮಂತ್ರಿಗಳ ಕಚೇರಿಯೇ ಇದರ ಉಸ್ತುವಾರಿ ನಡೆಸುತ್ತಿದೆಯಂತೆ. ಎಷ್ಟು ರೈತರ ಜಮೀನುಗಳನ್ನು, ಎಷ್ಟು ಬೇಗನೇ ವಶಪಡಿಸಿಕೊಳ್ಳಬೇಕು, ರೈತರ ಪ್ರತಿಭಟನೆಗಳನ್ನು ಹೇಗೆ ಬದಿಗೊತ್ತಬೇಕು ಎಂದೆಲ್ಲ ಪಿ.ಎಂ.ಒ. ನೇ ನಿರ್ಧರಿಸುತ್ತದೆ.

ಒಂದು ಮಾಹಿತಿ ಹಕ್ಕಿನ ಮೂಲಕ ಪಡೆದ ಮಾಹಿತಿಯ ಪ್ರಕಾರ ಮುಂಬೈ–ಅಹಮದಾಬಾದ್ ರೂಟಿನ ಟ್ರೇನ್‌ಗಳಲ್ಲಿ 40% ದಷ್ಟು ಖಾಲಿ ಓಡುತ್ತಿವೆ. ಆದರೂ ಜಪಾನ್ 88 ಸಾವಿರ ಕೊಟಿ ರೂ. ಸಾಲ ಕೊಡುತ್ತಿದೆ. 'ಮೇಕ್ ಇನ್ ಜಪಾನ್'ಗೆ ಬೇಗಬೇಗನೇ ಕೆಲಸ ಮಾಡಿ ಎನ್ನುತ್ತಿದೆ. ಇದೀಗ ಒಳ್ಳೆಯ ದಿನಗಳ 'ನವಭಾರತ'ದ ಮರ್ಯಾದೆಯ ಪ್ರಶ್ನೆ ತಾನೇ? ರೈಲ್ವೇ ಪರಿಣಿತರು ಏನು ಹೇಳಿದರೇನಂತೆ?


ಇದೀಗ ಅಚ್ಚೇ ದಿನ್ 'ನವಭಾರತ'ದ ಮಾದರಿ.
ಕೆಲವರ ಸಾಥ್, ಕೆಲವರ ವಿಕಾಸ್!




ವ್ಯಂಗ್ಯಚಿತ್ರ: ಕೀರ್ತಿಶ್, ಬಿಬಿಸಿ ಹಿಂದಿ

# ಒಳ್ಳೆಯ ದಿನಗಳ ನಂತರದ 'ನವ ಭಾರತ'ದ 'ನವ ಆರ್ಥಿಕ'ದಲ್ಲಿ 'ನವ ಉದ್ಯೋಗ'ಗಳನ್ನು ಅಳೆಯಲು 'ನವ ದತ್ತಾಂಶ' ಪರಿಕರಗಳು!

ಪ್ರಧಾನ ಮಂತ್ರಿಗಳು ಜುಲೈ 2ರಂದು ಇನ್ನೊಂದು ಅಪರೂಪದ ಸಂದರ್ಶನ ನಿಡಿದರು. ಸಹಜವಾಗಿ ಅದು ದೊಡ್ಡ ಸುದ್ದಿಯಾಗಿದೆ. ಅಲ್ಲಿ ಅವರು ಹೇಳಿದ್ದು ಇನ್ನೂ ದೊಡ್ಡ ಸಉದ್ದಿಯಾಗಿದೆ. 'ಸ್ವರಾಜ್ಯ ಮ್ಯಾಗಝಿನ್'ಗೆ ನೀಡಿದ ಸಂದರ್ಶನದಲ್ಲಿ ಅವರು ತಮ್ಮ ಸರಕಾರ ಹಲವಾರು ಉದ್ಯೋಗಗಳನ್ನು ನಿರ್ಮಿಸಿದೆ, ಆದರೆ ಅದನ್ನು ಸಮರ್ಥಿಸಿಕೊಳ್ಳಲು ಮಾಹಿತಿಗಳು ಸಿಗುತ್ತಿಲ್ಲ ಎಂದಿದ್ದಾರೆ. "ಉದ್ಯೋಗಗಳನ್ನು ಅಳೆಯುವ ನಮ್ಮ ಸಾಂಪ್ರದಾಯಿಕ ಪರಿಕರಗಳು




ಉದ್ಯೋಗಗಳಿಗೇನೂ ಕೊರತೆಇಲ್ಲ, ದತ್ತಾಂಶಗಳದ್ದೇ ಕೊರತೆ–ಪ್ರಧಾನಿ

ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ನವಭಾರತದ ನವ ಆರ್ಥಿಕದಲ್ಲಿನ ನವ ಉದ್ಯೋಗಗಳನ್ನು ಅಳೆಯಲು ಸಾಲುವುದಿಲ್ಲ" ಎಂದರಂತೆ ಮಾನ್ಯ ಪ್ರಧಾನಿಗಳು. ಈ 'ನವ'ಗಳ ಬಗ್ಗೆ ಮತ್ತಷ್ಟು ಪ್ರಶ್ನೆಗಳನ್ನು ಸಂದರ್ಶಕರು ಕೇಳುತ್ತಾರೆ ಎಂದು ನಿರೀಕ್ಷಿಸಲು ಸಾಧ್ಯವಿರಲಿಲ್ಲ. ಏಕೆಂದರೆ ಪ್ರಧಾನಿಗಳು ಸರಕಾರ–ಪ್ರಿಯ ಪತ್ರಿಕೆಗಳಿಗೆ ಮಾತ್ರ ಸಂದರ್ಶನ ನೀಡುತ್ತಾರೆ ಎಂಬ ಪ್ರತೀತಿ ಇದೆ. ಸಂದರ್ಶಕರು ಜಿಎಸ್‌ಟಿ ಮತ್ತು ನೋಟುರದ್ಧತಿ ಉದ್ಯೋಗಾವಕಾಶಗಳ ಮೇಲೆ ಎಂತಹ ಪರಿಣಾಮ ಬೀರಿತು ಎಂದು ಕೇಳಲೂ ಇಲ್ಲ, ಪ್ರಧಾನಿಗಳು ಹೇಳಲೂ ಇಲ್ಲ.

ಕಾರ್ಮಿಕ ಮಂತ್ರಾಲಯದ ಲೇಬರ್ ಬ್ಯುರೊ ಕಳೆದ ವರ್ಷ 18ತಿಂಗಳ ಸರ್ವೆ ನಡೆಸಿ ಪ್ರಕಟಿಸಿದ ವರದಿಗಳ ಪ್ರಕಾರ ಎಪ್ರಿಲ್ 2016ರಿಂದ ಅಕ್ಟೋಬರ್ 2017ರ ನಡುವೆ ನಿರ್ಮಾಣವಾದ ಉದ್ಯೋಗಗಳು ಕೇವಲ 5.56ಲಕ್ಷ. ಇದಕ್ಕೆ ಮೊದಲು ರಿಝರ್ವ್ ಬ್ಯಾಂಕ್ ವರದಿಯ ಪ್ರಕಾರ ಈ 'ಒಳ್ಳೆಯ ದಿನ'ಗಳ ಮೊದಲೆರಡು ವರ್ಷಗಳಲ್ಲಿ 11.5 ಲಕ್ಷ ಉದ್ಯೋಗಗಳನ್ನು ದೇಶ ಕಳಕೊಂಡಿತು. ಇದನ್ನು ನೋಡಿಯೇ ಪ್ರಧಾನಿಗಳಿಗೆ ಅವರು ನಿರ್ಮಿಸಿದ ಉದ್ಯೋಗಗಳನ್ನು ಕಾಣಲು ಹೊಸ ಪರಿಕರಗಳು ಬೇಕೆನಿಸಿರಬೇಕು.

ಸ್ವಲ್ಪ ಕಾಲ ನೌಕರರ ಭವಿಷ್ಯನಿಧಿಯ ಹೊಸ ಸೇರ್ಪಡೆಗಳು ಸೂಕ್ತ ಪರಿಕರವಾಗಬಹುದು ಎಂದನಿಸಿತ್ತು. ಆದರೆ ಈಗ ಅದೂ ಏರಿಕೆ ತೋರಿಸುತ್ತಿಲ್ಲ, ಬದಲಾಗಿ ಹಿಂದೆ ಅಂದಾಜು ಮಾಡಿದ್ದನ್ನು ಪರಿಷ್ಕರಿಸಿ ಉದ್ಯೋಗಗಳ ಸಂಖ್ಯೆಯನ್ನು 5ಲಕ್ಷದಷ್ಟು ಇಳಿಸಿದೆ.(ಇಂಡಿಯನ್ ಎಕ್ಸ್‌ಪ್ರೆಸ್, ಜುಲೈ 6). ಆದ್ದರಿಂದಲೇ ಈಗ ಸಾರ್ವತ್ರಿಕ ಚುನಾವಣೆಗಳ ಮೊದಲು ಹೊಸ ಮಾಹಿತಿ ಪರಿಕರಗಳ ಹುಡುಕಾಟ ನಡೆದಿರಬಹುದು.

# ಸ್ವಿಸ್ ಬ್ಯಾಂಕ್‌ಗಳಲ್ಲಿ ಭಾರತೀಯರ ಠೇವಣಿಗಳು ಹೆಚ್ಚಿವೆ

## – ಆದರೆ ಇದು ಬೃಹತ್ ಹಿಮಬಂಡೆಯ ತುದಿ ಮಾತ್ರ




**ಮೋದಿ ಸರಕಾರದ ಬಡಾಯಿಗಳೇನೇ ಇರಲಿ, ಅದರ ಧೋರಣೆಗಳು ಕಪ್ಪು ಹಣವನ್ನು, ಅದು ದೇಶದ ಒಳಗೇ ಇರಲಿ, ಅಥವ ಕಡಲಾಚೆಯೇ ಇರಲಿ, ಹೊರತೆಗೆಯುವಲ್ಲಿ ವಿಫಲವಾಗಿವೆ. ಕಪ್ಪು ಹಣದ ಪಿಡುಗ್‌ನ್ನು ತಡೆಗಟ್ಟುವಲ್ಲಿ ಸರ್ಕಾರದ ಅಸಮರ್ಥತೆಯಂತೂ ಸ್ಪಷ್ಟಗೊಂಡಿದೆ ಎನ್ನುತ್ತಾರೆ**

**ಪ್ರಥ್ವಿರಾಜ್ ರುಪಾವತ್**.ಕೃಪೆ: ನ್ಯೂಸ್‌ಕ್ಲಿಕ್.ಇನ್, ಜೂನ್‌30,. ಅನುವಾದ: ಭಾರತಿ ಗಾಂವ್ಕರ್

ಝ್ಯೂರಿಚ್ ಮೂಲದ ಸ್ವಿಸ್ ನ್ಯಾಶನಲ್ ಬ್ಯಾಂಕ್ (ಎಸ್‌ಎನ್‌ಬಿ) ಬಿಡುಗಡೆ ಮಾಡಿದ ಇತ್ತೀಚಿನ ಮಾಹಿತಿಯ ಪ್ರಕಾರ ಕಳೆದ ವರ್ಷಕ್ಕೆ ಹೋಲಿಸಿದರೆ, ಸ್ವಿಸ್ ಬ್ಯಾಂಕ್‌ಗಳಲ್ಲಿ ಭಾರತೀಯರು ಇಟ್ಟಿರುವ ಹಣ 50% ಏರಿ, 2017 ರಲ್ಲಿ 7000 ಕೋಟಿ ರೂ ಆಗಿದೆ. ಇದರಿಂದಾಗಿ 2014ರಿಂದ ಕಳೆದ ಮೂರು ವರ್ಷಗಳಲ್ಲಿ ಸ್ವಿಸ್ ಬ್ಯಾಂಕ್‌ಗಳಲ್ಲಿ ಭಾರತೀಯ ಠೇವಣಗಳು ಇಳಿಮುಖಗೊಳ್ಳುತ್ತಿದ್ದುದು ಈಗ ವ್ಯತ್ಯಸ್ತಗೊಂಡಂತಾಗಿದೆ.

ಪನಾಮದ ಸಂಸ್ಥೆಯಾದ ಮೊಸಾಕ್–ಫೋನೆಸ್ಕದಿಂದ ಸೋರಿಕೆಯಾದ ಪೇಪರ್‌ಗಳಲ್ಲಿ, ಸಾಗರದಾಚೆಗಿನ ಖಾತೆಗಳನ್ನು ಹೊಂದಿದ್ದ ಹಲವಾರು ಭಾರತೀಯ ಹೆಸರುಗಳು ಹೊಸದೊಂದು ಕಂತು ಹೊರ ಬಂದ ನಂತರ, ಈ ವರದಿ ಬಂದಿದೆ.

2015 ರಲ್ಲಿ, 4 ಲಕ್ಷ ಕೋಟಿ ರೂಪಾಯಿಗಳ ಭಾರತೀಯ ಸಂಪತ್ತನ್ನು ಕಡಲಾಚೆಯ ತೆರಿಗೆಮುಕ್ತಧಾಮಗಳಲ್ಲಿ ಪೇರಿಸಿಡಲಾಗಿದೆ ಎಂದು, ದ್ವಿಪಕ್ಷೀಯ ವಿದೇಶಿ ಇಡುವಳಿಗಳ ಆಧಾರದ ಮೇಲೆ ಬ್ಯಾಸೆಲ್‌ನಲ್ಲಿರುವ ಬ್ಯಾಂಕ್ ಆಫ್ ಇಂಟರ್ನ್ಯಾಶನಲ್ ಸೆಟಲ್ಮೆಂಟ್ಸ್ (ಬಿಐಎಸ್)ನ, ಗೇಬ್ರಿಯಲ್ ಜುಕ್ಮನ್ ಮತ್ತು ಸಹೋದ್ಯೋಗಿಗಳು 2017ರಲ್ಲಿ ಮಾಡಿದ್ದ ವಿಶ್ಲೇಷಣೆಯಲ್ಲಿ ಅಂದಾಜಿಸಲಾಗಿತ್ತು.

ಕುತೂಹಲಕರ ವಿಷಯವೆಂದರೆ, ಸ್ವಿಟ್ಜರ್ಲೆಂಡಿಗಿಂತ ಹೆಚ್ಚು ಹಾಂಗ್ಕಾಂಗ್, ಮಕಾವೋ, ಸಿಂಗಪೂರ್, ಬಹ್ರೇನ್ ಮತ್ತು ಮಲೇಶಿಯಾಗಳಂತಹ ಏಷ್ಯನ್ ತೆರಿಗಮುಕ್ತಧಾಮಗಳಲ್ಲಿ ಭಾರತೀಯರು ತಮ್ಮ ಹಣವನ್ನು ಹೂಡಬಯಸುತ್ತಾರೆ ಎಂಬುದು ಈ ಮಾಹಿತಿಗಳಿಂದ ಪ್ರಕಟವಾಯಿತು. 2015ರಲ್ಲಿ ಭಾರತೀಯ ಸಂಪತ್ತಿನ 31% ಸ್ವಿಟ್ಜರ್ಲೆಂಡಿನಲ್ಲಿ ಇಟ್ಟಿದ್ದರೆ, ಏಶ್ಯಾದ ತೆರಿಗೆಮುಕ್ತಧಾಮಗಳಲ್ಲಿ 53% ಇಡಲಾಗಿತ್ತು.

2014 ರಲ್ಲಿ ಅಧಿಕಾರಕ್ಕೆ ಬರುವ ಮುನ್ನ, ಬಿಜೆಪಿ ನೀಡಿದ ಒಂದು ಮಹತ್ವದ ಚುನಾವಣಾ ಆಶ್ವಾಸನೆ ಎಂದರೆ ವಿದೇಶಗಳಿಂದ ಅದರಲ್ಲೂ ವಿಶೇಷವಾಗಿ ಸ್ವಿಟ್ಜರ್ಲೆಂಡ್‌ನಿಂದ, ಬಿಲಿಯನ್‌ಗಟ್ಟಲೆ ಕಪ್ಪು ಹಣವನ್ನು, ವಸೂಲಿಮಾಡಲಾಗುವದು ಎಂಬುದಾಗಿತ್ತು. ಹೀಗೆ ಮರಳಿ ತಂದ ಹಣವನ್ನು ಪ್ರತಿ ಭಾರತೀಯನ ಬ್ಯಾಂಕ್ ಖಾತೆಗೆ 15 ಲಕ್ಷ ರೂ. ಹಣವನ್ನು ಪಾವತಿಸಲು ಉಪಯೋಗಿಸಲಾಗುವದು ಎಂದು ಕೇಸರಿ ಪಕ್ಷ ಹೇಳಿತ್ತು. ಈ ಭರವಸೆ ಎಂದಿಗೂ ರೂಪ ಪಡೆಯಲಿಲ್ಲ, ಕಪ್ಪು ಹಣದ ಪಿಡುಗನ್ನು ತಡೆಗಟ್ಟುವಲ್ಲಿ ಸರ್ಕಾರದ ಅಸಮರ್ಥತೆಯಂತೂ ಸ್ಪಷ್ಟಗೊಂಡಿದೆ, ಏಕೆಂದರೆ ಈ ಉದ್ದೇಶಕ್ಕಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಜಾರಿಗೆ ಬಂದ ವಿವಿಧ ಧೋರಣೆಗಳು ವಿಫಲಗೊಂಡಿವೆ.

ಸ್ವಿಸ್ ವರದಿಯ ಪ್ರಕಾರ ಮೋದಿ ಸರಕಾರವು ಕಪ್ಪು ಹಣದ ಹೊರಹರಿವು ತಡೆಯಲು ವಿಫಲವಾಗಿದೆಯೆಂಬ ಎಂಬ ಆಪಾದನೆಯ ಬಿರುಗಾಳಿಯನ್ನು ಈ ಸ್ವಿಸ್ ವರದಿ ಎದ್ದಿತು, ಆಗ ಮೋದಿ ಸರಕಾರ ಸಿಕ್ಕಿಬಿದ್ದಿತು.

ಆರಂಭದಲ್ಲಿ, (ರಜೆಯಲ್ಲಿರುವ )ಹಣಕಾಸು ಸಚಿವ ಅರುಣ್ ಜೇಟ್ಲಿ ಒಂದು ಸಾಮಾಜಿಕ ಮಾಧ್ಯಮದ ಪೋಸ್ಟ್‌ನಲ್ಲಿ ಈ ಎಲ್ಲ ಹಣವೂ ತೆರಿಗೆ–ವಂಚಿತ ಹಣ ಎನ್ನುವದು ಒಂದು "ನೆಚ್ಚಲಾಗದ ಊಹೆ" ಎಂದರು. ಮಧ್ಯಂತರ ಹಣಕಾಸು ಸಚಿವ ಪಿಯೂಷ್ ಗೋಯಲ್ ಕೂಡಾ "... ಇದು ಕಪ್ಪು ಹಣ ಎಂದು ಹೇಗೆ ನೀವು ಭಾವಿಸುತ್ತೀರಿ?" ಎಂದು ಕೇಳಿರುವುದಾಗಿ ವರದಿಯಾಗಿದೆ.

ಆದರೆ ಇದೇ ಗೋಯಲ್ ಅವರು, "ಸರಕಾರವು ಒಂದು ಕಣ್ಣು ಇಟ್ಟಿರುತ್ತದೆ. ಕಪ್ಪು ಹಣವನ್ನು ಸ್ವಿಸ್ ಬ್ಯಾಂಕ್‌ಗಳಲ್ಲಿ ಇಟ್ಟಿದ್ದು ಕಂಡುಬಂದರೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ. "ಎಂಬುದನ್ನೂ ಹೇಳಿದ್ದಾರೆ. 2019 ರ ಮಾರ್ಚ್‌ನಲ್ಲಿ ಸರಿಯಾದ ಅಂಕಿ–ಅಂಶ ಲಭ್ಯವಾಗಲಿದ್ದು, ಇದು ಕಪ್ಪು ಹಣ ಹೌದೋ ಅಥವಾ ಅಲ್ಲವೋ ಎಂಬುದು ಸ್ಪಷ್ಟವಾಗುತ್ತದೆ ಎಂಬುದು ಅವರ ತರ್ಕ.




ವ್ಯಂಗ್ಯಚಿತ್ರ::ಪಿ.ಮಹಮ್ಮದ್, ವಿಜಯ ಕರ್ನಾಟಕ

ನಿಖರವಾದ ವಹಿವಾಟುಗಳು ಮತ್ತು ಮಾಲೀಕತ್ವ ಕುರಿತ ಮಾಹಿತಿ ಇನ್ನೂ ಬರದೇ ಇದ್ದರೂ, ಅದು ಕಪ್ಪು ಹಣವಲ್ಲ ಎಂದು ಉನ್ನತ ಹುದ್ದೆಗಳಲ್ಲಿನ ಮಂತ್ರಿಗಳು ಹೇಗೆ ಹೇಳುತ್ತಾರೆ ಎಂದು ಅನೇಕ ಟಿಪ್ಪಣಿಕಾರರು ಪ್ರಶ್ನಿಸಿದ್ದಾರೆ.

ನ್ಯೂಸ್‌ಕ್ಲಿಕ್ ನೊಂದಿಗೆ ಮಾತನಾಡುತ್ತ ಸಮಾಜ ವಿಜ್ಞಾನಗಳ ಸಂಸ್ಥೆಯ ಪ್ರಾಧ್ಯಾಪಕರಾದ ಅರುಣ್ ಕುಮಾರ್, ಎಸ್‌ಎನ್‌ಬಿ ದತ್ತಾಂಶದಲ್ಲಿ ಭಾರತೀಯ ಗ್ರಾಹಕರು ಘೋಷಿಸಿದ ನ್ಯಾಯಸಮ್ಮತವಾದ ಹಣ ಮಾತ್ರ ಸೇರಿದ, ಅಕ್ರಮ ಹಣ ಅಥವಾ ಕಪ್ಪು ಹಣದ ವಿವರಗಳನ್ನು ಇನ್ನೂ ಬಹಿರಂಗಪಡಿಸಲಾಗಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀಮಂತರು ಹೇಗೆ ತಮ್ಮ ಕಪ್ಪು ಹಣವನ್ನು ಕೂಡಿಡುತ್ತಾರೆಂದು ವಿವರಿಸುತ್ತಾ, ಅರುಣ್ ಕುಮಾರ್ "ನೈಜ ಫಲಾನುಭವಿಗಳ ಗುರುತನ್ನು ಮರೆಮಾಡಲು ತೆರಿಗೆ ವಿನಾಯಿತಿಗಳಿರುವ ದೇಶಗಳಲ್ಲಿ ಹಲವಾರು ಚಿಪ್ಪು(ಶೆಲ್) ಕಂಪನಿಗಳ ಮೂಲಕ ಹಣವನ್ನು ಒಂದು ಪದರ ನಿರ್ಮಿಸುವ ಪ್ರಕ್ರಿಯೆಯ ಮೂಲಕ ಚಲಿಸಲಾಗುತ್ತದೆ. ಇದರಿಂದಾಗಿಯೇ ಸ್ವಿಸ್ ಸೋರಿಕೆಗಳು, ಪನಾಮ ಪೇಪರ್ಸ್, ಬಹಾಮಾಸ್ ಸೋರಿಕೆಯನ್ನು ಮತ್ತು ಪ್ಯಾರಡೈಸ್ ಪೇಪರ್ಸ್ ಮುಂತಾದ ಕಡಲಾಚೆಯ ತೆರಿಗೆಮುಕ್ತಧಾಮಗಳ ಸೋರಿಕೆಯಾದ ದಾಖಲೆಗಳಲ್ಲಿ ಕೇವಲ ನೂರಾರು ಹೆಸರುಗಳು ಮಾತ್ರ ಮೂಡಿಬಂದಿದೆ. ಕಡಲಾಚೆಯ ತೆರಿಗೆಮುಕ್ತಧಾಮಗಳಲ್ಲಿ ಹಣವನ್ನು ಕೂಡಿಟ್ಟಿರುವ ಭಾರತೀಯರ ನಿಜವಾದ ಸಂಖ್ಯೆ ಲಕ್ಷಗಟ್ಟಲೆ ಇರಬೇಕು" ಎಂದು ಹೇಳಿದರು.

ಇದಲ್ಲದೆ, ಅರುಣ್ ಕುಮಾರ್ ಅವರು ಎಸ್‌ಎನ್‌ಬಿ ಅಂಕಿ ಅಂಶವು ಬ್ರಿಟಿಶ್ ಗ್ರಾಹಕರು ಅತಿ ಹೆಚ್ಚು ಹಣವನ್ನು ಕೂಡಿಟ್ಟಿದ್ದಾರೆ, ಉಕ್ರೇನ್ ಮತ್ತು ರಷ್ಯಾಗಳಂತಹ ರಾಷ್ಟ್ರಗಳಿಂದ ಕಡಿಮೆ ಠೇವಣಿಗಳು ಏಕೆ ಇವೆ ಎಂಬುದಕ್ಕೂ ಈ ಪದರ ನಿರ್ಮಾಣ ಪ್ರಕ್ರಿಯೆಯೇ ಕಾರಣ ಎನ್ನುತ್ತಾರೆ. ವಿಶ್ವದಾದ್ಯಂತದ ಸುಮಾರು 90 ತೆರಿಗೆ ಮುಕ್ತಧಾಮಗಳಲ್ಲಿ ಬಹಳಷ್ಟು ಕೇಮನ್ ದ್ವೀಪಗಳು, ಬ್ರಿಟಿಷ್ ವರ್ಜಿನ್ ದ್ವೀಪಗಳು, ಬರ್ಮುಡಾ ಮತ್ತು ಮುಂತಾದ ಯುನೈಟೆಡ್ ಕಿಂಗ್‌ಡಂ(ಯು.ಕೆ.)ನ 'ಕಡಲಾಚೆಯ ಪ್ರದೇಶ'(ಅವುಗಳು ಅತ್ಯಂತ ರಹಸ್ಯ ಹನಕಾಸು ಕೇಂದ್ರಗಳು ಎನಿಸಿಕೊಂಡಿವೆ) ಗಳಲ್ಲಿವೆ. ಪದರ ನಿರ್ಮಾಣದ ಪ್ರಕ್ರಿಯೆಯಿಂದಾಗಿ ಗ್ರಾಹಕರ ನೈಜ ಗುರುತನ್ನು ಅಡಗಿಸಿಡಲಾಗಿದೆ ಮತ್ತು ಶೆಲ್ ಕಂಪನಿಗಳು ಯು.ಕೆ. ವ್ಯಾಪ್ತಿಯಲ್ಲಿ ಬೀಳುವ ಈ ತೆರಿಗೆಧಾಮಗಳಲ್ಲಿ ನೋಂದಾಯಿಸಲ್ಪಟ್ಟಿರುವುದರಿಂದ, ಬ್ರಿಟಿಶ್ ತೆರಿಗೆ ಧಾಮಗಳು ಈಗಲೂ ಅತ್ಯಂತ ಹೆಚ್ಚು ಠೇವಣಿಗಳನ್ನು ಹೊಂದಿರುವ ಉನ್ನತ ದರ್ಜೆಯ ವ್ಯಾಪ್ತಿ ಹೊಂದಿವೆ.

ಕಳೆದ ವರ್ಷ ನವೆಂಬರ್‌ನಲ್ಲಿ ಸ್ವಿಸ್ ಬ್ಯಾಂಕ್‌ಗಳಲ್ಲಿ ಕೂಡಿಟ್ಟ ಕಪ್ಪು ಹಣದ ಮೇಲೆ ನಿಗಾ ಇಡಲು ಭಾರತ ಮತ್ತು ಸ್ವಿಟ್ಜರ್ಲೆಂಡ್ 'ಮಾಹಿತಿಯ ಸ್ವಯಂ ವಿನಿಮಯ' ಎಂಬ ಒಂದು ಜಂಟಿ ಘೋಷಣೆಗೆ ಸಹಿ ಹಾಕಿವೆ. ಇದು 2018–19 ರಿಂದೀಚೆಗೆ ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಅಂಕಿ–ಅಂಶಗಳನ್ನು ಪರಸ್ಪರ ಸಂಗ್ರಹಿಸಲು, ವಿನಿಮಯ ಮಾಡಿಕೊಳ್ಳಲು ಎರಡೂ ದೇಶಗಳಿಗೆ ಅವಕಾಶ ನೀಡುತ್ತದೆ. ಆದಾಗ್ಯೂ, ಕಪ್ಪು ಹಣವನ್ನು ಪತ್ತೆಹಚ್ಚಲು ಇದು ಸಾಕಾಗುವುದಿಲ್ಲ ಎಂದು ಕುಮಾರ್ ಅಭಿಪ್ರಾಯಪಟ್ಟರು.

ಪ್ರಧಾನಿ ಮೋದಿ ಅವರ ಆಳ್ವಿಕೆಯಡಿಯಲ್ಲಿ, ಸರ್ಕಾರವು ಮೂರು ವಿಭಿನ್ನ ಸಂದರ್ಭಗಳಲ್ಲಿ ಕಿಟಕಿಗಳನ್ನು ಒದಗಿಸಿ ತೆರಿಗೆದಾರರಿಗೆ ತಮ್ಮ ಬಹಿರಂಗಪಡಿಸದ ಸ್ವತ್ತುಗಳನ್ನು ಘೋಷಿಸಲು (ವಿದೇಶಿ ಸಂಪತ್ತು ಸೇರಿದಂತೆ) ಕರೆ ನೀಡಿತ್ತು. ಮೊದಲು, ಕಪ್ಪು ಹಣ (ಬಹಿರಂಗಪಡಿಸದ ವಿದೇಶಿ ವರಮಾನ ಮತ್ತು ಸ್ವತ್ತುಗಳು) ಮತ್ತು ತೆರಿಗೆ ವಿಧಿಸುವ ಕಾಯ್ದೆ, 2015 ನ್ನು ಜಾರಿಗೊಳಿಸಿದಾಗ, ಅದನ್ನನುಸರಿಸಿ 2016 ರ ಜೂನ್–ಸೆಪ್ಟೆಂಬರ್‌ನಲ್ಲಿ 'ವರಮಾನ ಘೋಷಣೆಯ ಯೋಜನ' (ಐಡಿಎಸ್)ನಲ್ಲಿ ಮತ್ತು ಮೂರನೇಯದಾಗಿ, ಡಿಸೆಂಬರ್ 2016 ರಲ್ಲಿ ಪ್ರಧಾನ್ ಮಂತ್ರಿ ಗರೀಬ್ ಕಲ್ಯಾಣ್ ಯೋಜನೆ (ಪಿಎಂಜಿಕೆವೈ) ಅಡಿಯಲ್ಲಿ ಅವಕಾಶ ನೀಡಿತ್ತು, ಈ ಎಲ್ಲಾ ಯೋಜನೆಗಳು ದೇಶದ ಬೃಹತ್ ಕಪ್ಪು ಆರ್ಥಿಕತೆಯನ್ನು ನಿಭಾಯಿಸುವಲ್ಲಿ ಏನೇನೂ ಫಲ ನೀಡಿಲ್ಲ ಎಂದು ತಜ್ಞರು ಪ್ರತಿಪಾದಿಸುತ್ತಿದ್ದಾರೆ. ನವೆಂಬರ್ 2016 ರ ನೋಟುರದ್ಧತಿ ನಡೆ ಕಪ್ಪು ಆರ್ಥಿಕತೆಯನ್ನು ಎದುರಿಸುವ ಹೆಸರಲ್ಲಿ ಸರ್ಕಾರವು ತೆಗೆದುಕೋಂಡ ಮತ್ತೊಂದು ವಿನಾಶಕಾರಿ ಕ್ರಮ.

---

### ಡಿಜಿಟಲ್ ವಸಾಹತೀಕರಣ

*ಕೇಳಿಸಿದ್ದು*

ಸರಿಯಾಗಿ ನಾಲ್ಕು ತಿಂಗಳ ಹಿಂದೆ ಈ ಬಗ್ಗೆ ಭಾರತದ ಡಿಜಿಟಲ್ ವಸಾಹತೀಕರಣದ ಬಗ್ಗೆ ಹೇಳಿದ್ದು ರಾಘವ್ ಬಹಾಲ್. ಕ್ವಿಂಟ್ ಎಂಬ ಅಂತರ್ಜಾಲ ಸುದ್ದಿ ಮಾಧ್ಯಮದ ಮುಖ್ಯಸ್ಥರಾಗಿರುವ ರಾಘವ್ ಈ ವಿಚಾರವನ್ನು ಹೇಳಿದಾಗ ಅವರೆದುರು ಇದ್ದದ್ದು ಆಪ್ ಆಧಾರಿತ ಟ್ಯಾಕ್ಸಿ ಸೇವೆ 'ಓಲಾ'ದ ಶೇಕಡ ಅರವತ್ತರಷ್ಟು ಷೇರುಗಳು ಜಪಾನಿನ ಸಾಫ್ಟ್ ಬ್ಯಾಂಕ್ ವಶವಾದ ವ್ಯವಹಾರವಿತ್ತು. ಪೇಟಿಎಂನಲ್ಲಿ ಚೀನಾದ ಅಲಿಬಾಬ ಸಂಸ್ಥೆಯ ಪಾಲು ಹೆಚ್ಚಾದ ಕಥೆಯಿತ್ತು. ಬೆಂಗಳೂರು ಮೂಲದ ಫ್ಲಿಪ್ಕಾರ್ಟ್ ಸಂಸ್ಥೆಯನ್ನು ಖರೀದಿಸುವುದಕ್ಕೆ ಅಮೆರಿಕದ ವಾಲ್ಮಾರ್ಟ್ ಮುಂದಾಗಿರುವ ಸುದ್ದಿ ಇತ್ತು. 'ಬೈಜೂಸ್' ಮತ್ತು 'ಮೇಕ್ ಮೈಟ್ರಿಪ್'ಗಳನ್ನು ಖರೀದಿಸಲು ಹಾತೊರೆಯುತ್ತಿರುವ ಸಂಸ್ಥೆಗಳ ಪಟ್ಟಿಯಿತ್ತು.

.. ..

ಈಗ ಇವೆಲ್ಲವೂ ಭೂತಕಾಲ. ಭಾರತದಲ್ಲಿ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿರುವವರ 100ಕ್ಕೂ ಹೆಚ್ಚು ಸಂಘಟನೆಗಳ ಒಕ್ಕೂಟವೊಂದಿದೆ. ಇದರ ಹೆಸರು ಅಖಿಲ ಭಾರತ ವ್ಯಾಪಾರ ಸಂಘಟನೆಗಳ ಮಹಾ ಒಕ್ಕೂಟ (ಸಿಎಐಟಿ). ಇದು, ಜುಲೈ ಎರಡರಂದು ದೇಶವ್ಯಾಪಿಯಾಗಿ ಪ್ರತಿಭಟನೆ ನಡೆಸಿತು. ದೇಶವ್ಯಾಪಿಯಾಗಿ ನೂರಕ್ಕೂ ಹೆಚ್ಚು ನಗರಗಳಲ್ಲಿ ಈ ಸಂಘಟನೆಯ ಸದಸ್ಯರು ಪ್ರತಿಭಟನೆ ನಡೆಸಿ ಫ್ಲಿಪ್ಕಾರ್ಟ್ ಸಂಸ್ಥೆಯನ್ನು ವಾಲ್ಮಾರ್ಟ್ ಖರೀದಿಸುವುದನ್ನು ತಡೆಯಬೇಕು ಎಂದು ಒತ್ತಾಯಿಸಿದರು.

.. ..

ಫ್ಲಿಪ್ಕಾರ್ಟ್ ಅನ್ನು ಖರೀದಿಸಲು ಮುಂದಾಗಿರುವ ವಾಲ್ಮಾರ್ಟ್ ಕೂಡಾ ಹೀಗೆಯೇ. ಅಮೆರಿಕದಲ್ಲಿ ದೊಡ್ಡ ದೊಡ್ಡ ಸೂಪರ್ ಮಾರ್ಕೆಟ್ಗಳನ್ನು ಹೊಂದಿರುವ ಈ ಸಂಸ್ಥೆಗೀಗ ಆನ್ ಲೈನ್ ಅಂಗಡಿಗಳ ಕ್ಷೇತ್ರವನ್ನು ತನ್ನದಾಗಿಸಿಕೊಳ್ಳಬೇಕಿದೆ. ಅಷ್ಟೇ ಅಲ್ಲ ತನ್ನ ಆಫ್ ಲೈನ್ ಅಂಗಡಿಗಳ ಜಾಲವನ್ನು ಭಾರತದಂಥ ದೇಶಗಳಿಗೂ ವಿಸ್ತರಿಸಬೇಕಿದೆ.

ಅಮೆಜಾನ್ ಎಂಬ ಅಮೆರಿಕ ಮೂಲದ ಅಂತರ್ಜಾಲ ಅಂಗಡಿಗೆ ಭಾರತದಲ್ಲಿ ದೊಡ್ಡ ಸವಾಲಾಗಿದ್ದ ಫ್ಲಿಪ್ಕಾರ್ಟ್ ಅನ್ನು ಖರೀದಿಸುವುದರ ಹಿಂದೆ ವಾಲ್ಮಾರ್ಟ್ ವಿಸ್ತರಣಾ ತಂತ್ರವಿದೆ. ಈ ವ್ಯಾಪಾರಿ ಆಸಕ್ತಿಗಳ ಆಚೆಗಿನ ಮತ್ತೊಂದು ಕಥೆಯೂ ಭಾರತದಲ್ಲಿ ಅನಾವರಣಗೊಳ್ಳುತ್ತಿದೆ. ಅಮೆಜ್ನ್ ಗೆ ಪ್ರತಿಸ್ಪರ್ಧಿಯಾಗಿದ್ದ ಭಾರತೀಯ ಸಂಸ್ಥೆಯೊಂದು ಮತ್ತೊಂದು ಅಮೆರಿಕ ಮೂಲದ ಕಂಪನಿಯ ಪಾಲಾಗುತ್ತಿದೆ. ಅಂದರೆ ಸ್ಪರ್ಧೆ ಇರುವುದು ಎರಡು ಅಮೆರಿಕನ್ ಕಂಪನಿಗಳ ನಡುವೆ. ಅದು ನಡೆಯುವ ಕ್ಷೇತ್ರ ಮಾತ್ರ ಭಾರತ.

ದತ್ತಾಂಶ ಅಥವಾ ಡೇಟಾ ಎಂಬುದು ವರ್ತಮಾನದ ತೈಲ ಎಂಬುದೂ ನಮಗೆ ಗೊತ್ತಿದೆ. ಆದರೆ ಅದನ್ನು ಗ್ರಹಿಸುವ ವಿಚಾರದಲ್ಲಿ ಮಾತ್ರ ಇತಿಹಾಸ ಮರುಕಳಿಸುತ್ತಿದೆ. ರಾಘವ್ ಬಹಾಲ್ ಅವರು ಹೇಳಿದ ಡಿಜಿಟಲ್ ವಸಾಹತೀಕಣ ಅಥವಾ ನಂದನ್ ನಿಲೇಕಣಿಯವರು ಹೇಳುವ ದತ್ತಾಂಶ ವಸಾಹತೀಕರಣಕ್ಕೆ ನಮ್ಮದೇ ಪ್ರಭುತ್ವ ಸಹಕರಿಸುತ್ತಿದೆ. ಇತಿಹಾಸ ಎರಡನೇ ಬಾರಿ ಮರುಕಳಿಸುವಾಗ ಅದು ನಗೆಪಾಟಲಿಗೀಡಾಗುವ ನಡವಳಿಕೆಯಾಗಿರುತ್ತದೆ ಎಂಬ ಮಾತು ನಿಜವಾಗುತ್ತಿದೆ.

– ಎನ್.ಎ.ಎಂ. ಇಸ್ಮಾಯಿಲ್ (ಪ್ರಜಾವಾಣಿ ಜುಲೈ 3)

ರಾಜ್ಯಗಳ ಸುತ್ತ

# ತಮಿಳುನಾಡು: ಕೇಂದ್ರದ ದಲಿತ-ವಿರೋಧಿ ಧೋರಣೆಯ ವಿರುದ್ಧ ರಾಜ್ಯವ್ಯಾಪಿ ರೈಲು ತಡೆ




ಪರಿಶಿಷ್ಟಜಾತಿ/ಬುಡಕಟ್ಟುಗಳ ಮೇಲೆ ದೌರ್ಜನ್ಯಗಳ ತಡೆ ಕಾಯ್ದೆಯನ್ನು ಹಿಂದಿದ್ದ ರೀತಿಯಲ್ಲೇ ಮುಂದುವರೆಸಬೇಕೆಂದು ಆಗ್ರಹಿಸಿ ಜುಲೈ 2ರಂದು ತಮಿಳುನಾಡಿನ 60 ಕೇಂದ್ರಗಳಲ್ಲಿ 20ಸಾವಿರಕ್ಕೂ ಹೆಚ್ಚು ಮಂದಿ ರೈಲು ತಡೆ ಕಾರ್ಯಾಚರಣೆಯಲ್ಲಿ ಭಾಗವಹಿಸಿದರು. ಸಿಪಿಐ(ಎಂ), ವಿಸಿಕೆಯು ಕಾರ್ಯಕರ್ತರಲ್ಲದೆ, ಸುಮಾರು 70 ದಲಿತ, ಪೆರಿಯಾರ್‌ವಾದಿ, ಅಲ್ಪಸಂಖ್ಯಾತ ಕಲ್ಯಾಣ ಸಂಘಟನೆಗಳ ಕಾರ್ಯಕರ್ತರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಸುಮಾರು 13 ಸಾವಿರ ಮಂದಿ ಬಂಧಿತರಾದರು.

ಇದಕ್ಕೆ ಮೊದಲು ಒಂದು ತಿಂಗಳ ಕಾಲ ರಾಜ್ಯಾದ್ಯಂತ ದಲಿತರ ಮೇಲೆ ದೌರ್ಜನ್ಯಗಳು, ಈಬಗ್ಗೆ ಕೇಂದ್ರ ಮತ್ತು ರಾಜ್ಯಸರಕಾರಗಳ ನಿರ್ಲಕ್ಷ್ಯದ ನಿಲುಮೆಯ ಬಗ್ಗೆ ವಾಪಕ ಪ್ರಚಾರಾಂದೋಲನ ನಡೆದಿತ್ತು. ಜುಲೈ 2ರ ಕಾರ್ಯಾಚರಣೆಯಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಜಿ.ರಾಮಕೃಷ್ಣನ್, ರಾಜ್ಯ ಕಾರ್ಯದರ್ಶಿಗಳಾದ ಕೆ.ಬಾಲಕೃಷ್ಣನ್ ಮತ್ತಿತರ ಮುಖಂಡರೂ ಭಾಗವಹಿಸಿದ್ದರು.



## ಮೂಲಭೂತವಾದಿ ಗೂಂಡಾಗಳ ಹಲ್ಲೆಗೆ ಬಲಿ

ಜುಲೈ 2 ರಂದು ಕೇರಳದ ಎರ್ನಾಕುಳಂ ನಲ್ಲಿ ಮಹಾರಾಜ ಕಾಲೇಜು ಹೃದಯವಿದ್ರಾವಕ ದೃಶ್ಯಗಳಿಗೆ ಸಾಕ್ಷಿಯಾಯಿತು. ಆ ದಿನ ನಸುಕಿನಲ್ಲಿ ಪಿಎಫ್‌ಐ ಗೆ ಸೇರಿದ ಇಸ್ಲಾಮ್‌ವಾದಿ ಗೂಂಡಾಗಳು ಕೊಲೆ ಮಾಡಿದ್ದ ಆ ಕಾಲೇಜಿನ ಎರಡನೇ ವರ್ಷ ಬಿಎಸ್‌ಸಿಯ ವಿದ್ಯಾರ್ಥಿ 20 ವರ್ಷದ ಅಭಿಮನ್ಯು ಗೆ ಅಂತಿಮ ನಮನ ಸಲ್ಲಿಸಲು ನೂರಾರು ವಿದ್ಯಾರ್ಥಿಗಳು ಮತ್ತು ಇತರರು ಸೇರಿದ್ದರು. ಆತನ ಬಡತಾಯಿಯ ಆಕ್ರಂದನ ಎಲ್ಲರನ್ನೂ ತಟ್ಟಿತ್ತು.

ಅಭಿಮನ್ಯು ಎಸ್‌ಎಫ್‌ಐನ ಇಡುಕ್ಕಿ ಜಿಲ್ಲಾಸಮಿತಿಯ ಸದಸ್ಯರಾಗಿದ್ದರು. ಪಿಎಫ್‌ಐ ಗೂಂಡಾಗಳು ಹಾಸ್ಟೆಲ್‌ಗೆ ನುಗ್ಗಿ ಎಸ್‌ಎಫ್‌ಐ ವಿದ್ಯಾರ್ಥಿಗಳ ಮೇಲ ಹಲ್ಲೆ ಮಾಡಿದ್ದರು. ಇನ್ನಿಬ್ಬರು ಎಸ್‌ಎಫ್‌ಐ ಸಸದಸ್ಯರು ಗಂಭೀರವಾಗಿ ಗಾಯಗೊಂಡಿದ್ದಾರೆ, ಅವರಲ್ಲಿ ಒಬ್ಬನ ಪರಿಸ್ಥಿತಿ ಬಹಳ ಗಂಭೀರವಾಗಿದೆ .

ಅಭಿಮನ್ಯು ತಮಿಳುನಾಡಿನಿಂದ ನಂದ ಆದಿವಾಸಿ ಸಮುದಾಯಕ್ಕೆ ಸೇರಿದ ಬಡ ರೈತ ಕುಟುಂಬದಿಂದ ಬಂದಾತ. ಅವರ ಕುಟುಂಬದಲ್ಲಿ ಮೊದಲಬಾರಿಗೆ ಕಾಲೇಜು ಮೆಟ್ಟಲೇರಿದ್ದ ಅಭಿಮನ್ಯು ಪ್ರತಿಭಾವಂತ ವಿಜ್ಞಾನ ವಿದ್ಯಾರ್ಥಿಯಾಗಿದ್ದು ಆತನನ್ನು ವಿಜ್ಞಾನಿಯಾಗಿಸುವ ಕನಸಿನಿಂದ ಸಾಲ-ಸೋಲ ಮಾಡಿ ಆತನ ಕುಟುಂಬದವರು ಕಾಲೇಜಗೆ ಸೇರಿಸಿದ್ದರು. ಮೂಲಭೂತವಾದ ಈಗ ಆ ಕನಸನ್ನು ನುಚ್ಚುನೂರು ಮಾಡಿದೆ.



# ಬಿಹಾರ: 101 ಮಹಾದಲಿತ ಕುಟುಂಬಗಳನ್ನು ನಿರ್ವಸಿತರನ್ನಾಗಿಸಿದ ಅಮಾನವೀಯ ಕೃತ್ಯ

ಬಿಹಾರದ ಮಧುಬನಿ ಜಿಲ್ಲೆಯ ವೀರಪುರ ಪಂಚಾಯತ್‌ನಲ್ಲಿ 50-60 ವರ್ಷಗಳಿಂದ ವಾಸವಿದ್ದ ಮಹಾದಲಿತ ಕುಟುಂಬಗಳ 101 ಮನೆಗಳನ್ನು ಕೆಡವಿ ಹಾಕಿರುವ ಘಟನೆಯನ್ನು ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ಇವರಿಗೆ ಜಮೀನು ಪಟ್ಟಾ ನೀಡಲಾಗಿತ್ತು, ವಿದ್ಯುತ್ ಸಂಪರ್ಕವನ್ನೂ ನೀಡಲಾಗಿತ್ತು. ಆದರೆ ಪಾಟ್ನಾ ಉಚ್ಚ ನ್ಯಾಯಾಲಯದ ಆದೇಶವನ್ನು ಜಾರಿ ಮಾಡುವ ಹೆಸರಿನಲ್ಲಿ ಈ ಬಡಕುಟುಂಬಗಳಿಗೆ ವಾಸಿಸಲು ಪರ್ಯಾಯ ವ್ಯವಸ್ಥೆಯನ್ನೇನೂ ಮಾಡದೆ ಅವರ ಮನೆಗಳನ್ನು ಕೆಡವಿ ಹಾಕಿರುವುದು ಒಂದು ಅಮಾನವೀಯ ಕೃತ್ಯ ಎಂದು ಸಿಪಿಐ (ಎಂ) ರಾಜ್ಯ ಸಮಿತಿ ಹೇಳಿದೆ.

ರಾಜ್ಯ ಕಾರ್ಯದರ್ಶಿ ಅವಧೇಶ್ ಕುಮಾರ್, ರಾಜ ಕಾರ್ಯದರ್ಶಿ ಮಂಡಳಿ ಸದಸ್ಯೆ ರಾಂಪರಿ ಮತ್ತು ಇತರ ಮುಖಂಡರಿದ್ದ ನಿಯೋಗವೊಂದು ವೀರಪುರಕ್ಕೆ ಭೇಟಿ ನೀಡಿ ಸಂತ್ರಸ್ತರ ಜತೆ ಮಾತನಾಡಿತು. ಸಂತ್ರಸ್ತರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು, ಈಗ ಆಗಿರುವ ನಷ್ಟಕ್ಕೆ ಪರಿಹಾರ ಒದಗಿಸಬೇಕು ಎಂದು ಸಿಪಿಐ(ಎಂ) ಈ ಭೇಟಿಯ ನಂತರ ಆಗ್ರಹಿಸಿದೆ.

# ತ್ರಿಪುರಾ ಪತ್ರಕರ್ತನ ಕೊಲೆ ತನಿಖೆ: ಮೂವರು ಐಪಿಎಫ್‌ಟಿ ಮುಖಂಡರ ಮೇಲೆ ಸಿಬಿಐ ಆಪಾದನೆ

ತ್ರಿಪುರಾದಲ್ಲಿ ಕಳೆದ ಸಪ್ಟಂಬರಿನಲ್ಲಿ ಅಗರ್ತಲಾದಲ್ಲಿ ಗಣಮುಕ್ತಿ ಪರಿಷದ್‌ನ ರ್‍ಯಾಲಿಗೆ ಬರುತ್ತಿದ್ದವರ ಮೇಲೆ ಈಗ ಸರಕಾರದಲ್ಲಿರುವ ಐಪಿಎಫ್‌ಟಿ ದಾಳಿ ನಡೆಸಿತ್ತು. ಮರುದಿನ ಈ ರ್‍ಯಾಲಿಯಲ್ಲಿ ಭಾಗವಹಿಸಿದವರ ಮನೆಗಳ ಮೇಲೆ ದಾಳಿ ನಡೆಸಿತು. ಇದನ್ನು ವರದಿ ಮಾಡಲು ಹೋಗಿದ್ದ ಪತ್ರಕರ್ತ ಶಂತನು ಭೌಮಿಕ್‌ರನ್ನು ಐಪಿಎಫ್‌ಟಿ ಮಂದಿ ಅಮಾನುಷವಾಗಿ ಸಾಯಿಸಿದ್ದರು. ಈ ಬಗ್ಗೆ ತನಿಖೆ ನಡೆಸಲು ಎಡರಂಗ ಸರಕಾರ ವಿಶೇಷ ತನಿಖಾ ತಂಡ(ಎಸ್‌ಐಟಿ) ವನ್ನು ರಚಿಸಿತ್ತು. ಅದು ಹನ್ನೆರಡು ವ್ಯಕ್ತಿಗಳ ಮೇಲೆ ಚಾರ್ಜ್‌ಶೀಟ್ ಸಲ್ಲಿಸಿತ್ತು. ಬಿಜೆಪಿ-ಐಪಿಎಫ್‌ಟಿ ಸರಕಾರ ಬಂದ ಮೇಲೆ ಈ ತನಿಖೆಯನ್ನು ಸಿಬಿಐಗೆ ಒಪ್ಪಿಸಿತು. ಸಿಬಿಐ ಈ ವಾರ ಮೂವರು ಐಪಿಎಫ್‌ಟಿ ಮುಖಂಡರ ಮೇಲೆ ಚಾರ್ಜ್‌ಶೀಟ್ ಹಾಕಿದೆ. ಇವರಲ್ಲಿ ಒಬ್ಬರು ಶಾಸಕರು ಎಂಬುದು ಗಮನಾರ್ಹ.ಈ ಮೂವರೂ ಈ ಹಿಂದೆ ಎಸ್‌ಐಟಿ ಪಟ್ಟಿ ಮಾಡಿದ್ದ 12 ಮಂದಿಯಲ್ಲಿ ಇದ್ದಾರೆ.

ಇದರ ನಂತರ ಐಪಿಎಫ್‌ಟಿ ಒಂದು ಪತ್ರಿಕಾ ಸಮ್ಮೇಳನದಲ್ಲಿ 2019ರ ಲೋಕಸಭಾ ಚುನಾವಣೆಗಳಲ್ಲಿ ಐಪಿಎಫ್‌ಟಿ ರಾಜ್ಯದ ಎರಡೂ ಕ್ಷೇತ್ರಗಳಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುವುದಾಗಿ ಪ್ರಕಟಿಸಿದೆ ಎಂಬುದು ಇನ್ನೊಂದು ಗಮನಾರ್ಹ ಸಂಗತಿ.

ಈ ನಡುವೆ ರಾಜ್ಯದಲ್ಲಿ 'ಮಕ್ಕಳನು ಕದಿಯುವವರು ಎಂಬ ಹೆಸರಿನಲ್ಲಿ ಜನಗಳನ್ನು ಬಡಿದು ಸಾಯಿಸಿರುವುದರ ವಿರುದ್ಧ ಅಗರ್ತಲಾದಲ್ಲಿ ಒಂದು ದೊಡ್ಡ ರ್‍ಯಾಲಿಯನ್ನು ಸಿಪಿಐ(ಎಂ) ನಡೆಸಿದೆ. ಬಿಜೆಪಿಯ ಕಾನೂನು ಮಂತ್ರಿಯ ಬೇಜವಾಬ್ದಾರಿ ಟಿಪ್ಪಣಿಗಳಿಂದಾಗಿ ರಾಜ್ಯದಲ್ಲಿ ಭೀತಿಯ ವಾತಾವರಣ ಉಂಟಾಗಿದೆ ಎಂದು ಆಪಾದಿಸಿರುವ ಸಿಪಿಐ(ಎಂ) ಆ ಮಂತ್ರಿಯ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಮತ್ತು ಸುಳ್ಳು ಸುದ್ದಿ ಹರಡಿಸಿರುವವರನ್ನು ಪತ್ತೆ ಹಚ್ಚಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಪಶ್ಚಿಮ ಬಂಗಾಲದಲ್ಲಿ ಆಳುವ ಪಕ್ಷ ಟಿಎಂಸಿ ಪಂಚಾಯತು ಚುನಾವಣೆಗಳಲ್ಲಿ ಮತ್ತು ನಂತರ ನಡೆಸಿರುವ ಭಾರೀ ಹಿಂಸಾಚಾರ ಮತ್ತು ಟಿಎಂಸಿ ಹಾಗೂ ಬಿಜೆಪಿಯ ನಡುವಿನ ಕೋಮುವಾದಿ ಸ್ಪರ್ಧೆಯಲ್ಲಿ ರಾಜ್ಯದಲ್ಲಿ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಹಿಂಸಾಚಾರದ ವಿರುದ್ಧ ಕೊಲ್ಕತಾದ ಧರಂತಾಲಾದಲ್ಲಿ ಮಹಿಳೆಯರ ನಿರಂತರ ಧರಣಿಗಳು ನಡೆದಿವೆ. ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ನಡೆದಿರುವ ಈ ಪ್ರತಿಭಟನೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದಾರೆ.



# ಎಡ ಪಂಥೀಯ ಮೆಕ್ಸಿಕೊ ಅಧ್ಯಕ್ಷ – ತೆರೆದ ಹೊಸ ಸಾಧ್ಯತೆಗಳು

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಮೆಕ್ಸಿಕೊ ಅಧ್ಯಕ್ಷೀಯ ಚುನಾವಣೆಯಲ್ಲಿ ಎಡ ಪಂಥೀಯ ಅಭ್ಯರ್ಥಿ- ಆಂಡ್ರೆಸ್ ಮ್ಯಾನುಯೆಲ್ ಲೋಪೆಜ್ ಒಬ್ರಡರ್- ಅವರನ್ನು ಎ.ಎಮ್. ಎಲ್.ಓ ಎಂದು ಪ್ರೀತಿಯಿಂದ ಕರೆಯಲ್ಪಡುತ್ತಾರೆ. ಇದೇ ಜುಲೈ 1 ರಂದು ಭಾನುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿ ಇತಿಹಾಸವನ್ನು ಸೃಷ್ಟಿಸಿದ್ದಾರೆ. ಒಬ್ರಡರ್ ಶೇ. 53 ರಷ್ಟು ಮತಗಳಿಸಿ ಪ್ರಚಂಡ ಬಹುಮತದಿಂದ ಆಯ್ಕೆಯಾಗಿದ್ದಾರೆ. 1988 ನಂತರ ಮೊದಲ ಅಧಿಕೃತ ಎಣಿಕೆಯಲ್ಲಿ ಬಹುಮತ ಗಳಿಸಿದ್ದು, 1934ರ ನಂತರ ಎಡ ಅಭ್ಯರ್ಥಿ ಅಧ್ಯಕ್ಷನಾಗಿ ಆಯ್ಕೆಯಾದ್ದು ಮೊದಲ ಬಾರಿಗೆ ಆಗಿತ್ತು. ಹಾಗೆಯೇ ಮೆಕ್ಸಿಕೊ ದೇಶದಲ್ಲಿನ ಎರಡು ಪ್ರಬಲವಾದ ಸ್ಥಾಪಿತ ಪಕ್ಷಗಳ ಹಲವು ದಶಕಗಳ ರಾಜಕಾರಣದ ಮೇಲಿನ ಏಕಸ್ವಾಮ್ಯ ಮತ್ತು ನವ-ಉದಾರವಾದಿ ನೀತಿಗಳ ಹಾದಿ ಮುರಿದು, ಒಂದು ಹೊಸ ಯುಗವನ್ನು ಆರಂಭಿಸಿದ್ದಾರೆ. ಇದೊಂದು ಎಡಪಥೀಯ ಸೈದ್ಧಾಂತಿಕ ಜಯವೆಂದು ಬಣ್ಣಿಸಲಾಗಿದೆ.

ಪಾರ್ಲಿಮೆಂಟಿಗೆ ಜತೆಗೆ ನಡೆದ ಚುನಾವಣೆಗಳಲ್ಲಿ ಒಬ್ರಡರ್ ರ ಪಕ್ಷ ಮೋರೆನಾ-MORENA (ನ್ಯಾಷನಲ್ ರೀ-ಜನರೇಷನ್ ಮೂವ್ಮೆಂಟ್), ಲೇಬರ್ ಪಾರ್ಟಿ ಮತ್ತು ಸೋಷಿಯಲ್ ಎನ್ ಕೌಂಟರ್ ಪಾರ್ಟಿ ಗಳನ್ನು ಒಳಗೊಂಡ ಮೈತ್ರಿ ಕೂಟವು ಕೆಳಸದನ (ಚೇಂಬರ್ ಆಫ್ ಡೆಪ್ಯೂಟೀಸ್) ದಲ್ಲಿ ಒಟ್ಟು ಸುಮಾರು 500 ಸ್ಥಾನಗಳಲ್ಲಿ 312 ಸ್ಥಾನ ಗಳನ್ನು ಗೆದ್ದಿದೆ. ಮೆಲ್ ಸದನದಲ್ಲಿ (ಸೆನೆಟ್) 128 ಸೀಟುಗಳಲ್ಲಿ 70 ಸೀಟುಗಳನ್ನು ಗೆದ್ದು ಪಾರ್ಲಿಮೆಂಟಿನಲ್ಲಿ ನಿಚ್ಚಳ ಬಹುಮತ ಸಾಧಿಸಿದೆ. ಕೆಳಸದನದ 500 ಸೀಟುಗಳಲ್ಲಿ 300 ಸೀಟುಗಳನ್ನು ಕ್ಷೇತ್ರದಲ್ಲಿ (ಭಾರತದಂತೆ) ನೇರ ಮತದಾನದ ಮೂಲಕ ಅತ್ಯಂತ ಹೆಚ್ಚು ಮತ ಪಡೆದ ಅಭ್ಯರ್ಥಿ. ಕೆಳಸದನದ ಉಳಿದ 200 ಸೀಟುಗಳನ್ನು ಐದು ಪ್ರದೇಶಗಳಲ್ಲಿ ಪಕ್ಷಗಳು ಪಡೆದ ಶೇಕಡಾವಾರು ಮತಗಳಿಕೆಯ ಪ್ರಮಾಣದಲ್ಲಿ ಹಂಚಲಾಗುತ್ತದೆ. ಮೇಲ್ ಸದನದ 128 ಸೀಟುಗಳಲ್ಲಿ 96 ಸೀಟುಗಳನ್ನು ರಾಜ್ಯಗಳಿಂದ ನೇರ ಚುನಾವಣೆಯ ಮೂಲಕ ಮತ್ತು ಉಳಿದ 32 ಸೀಟುಗಳನ್ನು ಶೇಕಡಾವಾರು ಮತಗಳಿಕೆಯ ಪ್ರಮಾಣದಲ್ಲಿ ಹಂಚಲಾಗುತ್ತದೆ. ಈ ಇಡೀ ಚುನಾವಣಾ ವ್ಯವಸ್ಥೆಯನ್ನು ಮೊದಲ ಬಾರಿಗೆ ಜಾರಿ ಮಾಡಲಾಗಿದೆ.



ಒಬ್ರಡರ್ ರವರು ಡೆಮಾಕ್ರಟಿಕ್ ರೆಸಲ್ಯೂಷನ್ ಪಾರ್ಟಿ( ಪಿ.ಆರ್.ಡಿ.) ಯನ್ನು ತೊರೆದು 2014 ರಲ್ಲಿ 'ಮೊರೆನಾ'. ಪಕ್ಷ ವನ್ನು ಸ್ಥಾಪಿಸಿದರು. ಅವರ ಈ ಅಧ್ಯಕ್ಷೀಯ ಗೆಲುವು, ಸಾಂವಿಧಾನಿಕ ಕ್ರಾಂತಿಕಾರಿ ಪಕ್ಷ (ಪಿ.ಆರ್.ಐ) ಮತ್ತು ರಾಷ್ಟ್ರೀಯ ಆಕ್ಷನ್ ಪಾರ್ಟಿ (ಪಿ.ಎ.ಎನ್.)ಗಳ ಕಳೆದ ಅರ್ಧ ಶತಮಾನದ ಸರದಿಯ ರಾಷ್ಟ್ರದ ಆಳ್ವಿಕೆಯ ಪ್ರಭಾವವನ್ನು ಕೊನೆಗಾಣಿಸಿದೆ. ಅಧ್ಯಕ್ಷೀಯ ಚುನಾವಣೆಗಳಲ್ಲಿ ಪಿ.ಎ.ಎನ್. ಅಭ್ಯರ್ಥಿ ರಿಕಾರ್ಡೊ ಅನಯ ಶೇ. 22.5 ಮತ್ತು ಪಿ.ಆರ್.ಐ ಅಭ್ಯರ್ಥಿ ಜೋಸ್ ಅಂಟೋನಿಯೊ ಮೀಡ್ ಶೇ. 16.5 ಮತ ಗಳಿಸಿ ಬಹಳ ಹಿಂದಿದ್ದರು.

ಒಬ್ರಡರ್ ನಾಯತ್ವದ ಮೈತ್ರಿಕೂಟ ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಶೇ. 43.5 ಮತ ಗಳಿಸಿದೆ. ಹಿಂದಿನ ಪ್ರಮುಖ ಪಕ್ಷಗಳಾದ ಪಿ.ಎ.ಎನ್. ಶೇ. 18 ಮತ್ತು ಪಿ.ಆರ್.ಐ ಶೇ. 16 ಮತಗಳಿಕೆಯೊಂದಿಗೆ ಬಹಳ ಹಿಂದೆ ಬಿದ್ದಿತ್ತು.

ಫಲಿತಾಂಶ ಹೊರಬಂದ ನಂತರ ಒಬ್ರಡರ್ ರವರು "ನಾವು ಪ್ರತಿಯೊಬ್ಬರನ್ನು ಗೌರವಿಸುತ್ತೇವೆ. ಮರೆತು ಹೋಗಿರುವ, ವಿಶೇಷವಾಗಿ ಮೆಕ್ಸಿಕೊದ ಸ್ಥಳೀಯ ಸಮುದಾಯಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತೇವೆ" ಎಂದು ಹೇಳಿದ್ದಾರೆ. ಈ ನಿಟ್ಟಿನಲ್ಲಿ, ಮೊದಲು ಮಾನವ ಹಕ್ಕುಗಳ ಗುಂಪುಗಳ ಪ್ರತಿನಿಧಿಗಳು, ಮತ್ತು ವಿಶ್ವಸಂಸ್ಥೆ ಯನ್ನು ಬೇಟಿ ಮಾಡಿ ಮೆಕ್ಸಿಕೊಗೆ ಶಾಂತಿ ತರಲು, ಹಾಗೂ ಎಲ್ಲರೊಂದಿಗೆ ಸಮನ್ವಯಕ್ಕೆ ಪ್ರಯತ್ನ ಮಾಡುತ್ತೇನೆ ಎಂದ್ದಿದ್ದಾರೆ.

ಮೆಕ್ಸಿಕೊ ನಗರದ ಮಾಜಿ ಮೇಯರ್ ಆಗಿದ್ದ ಒಬ್ರಡರ್ ರವರು, ಚುನಾವಣೆಯಲ್ಲಿ ಭ್ರಷ್ಟಾಚಾರವನ್ನು ತೊಡೆದು ಹಾಕುವ ಮತ್ತು ಪ್ರಸ್ತುತ ಅಧ್ಯಕ್ಷ ರಾದ ಎನ್ರಿಕೆ ನಿಯೆಟೊ ರವರು ಅನುಸರಿಸಿ ಕೊಂಡು ಬರುತ್ತಿದ್ದ, ನವ-ಉದಾರವಾದಿ ಧೋರಣೆಗಳನ್ನು ಹಿಮ್ಮೆಟ್ಟಿಸುವ ವೇದಿಕೆಯನ್ನು ಬಲಪಡಿಸಲು ಮುಂದಾಗುವುದಾಗಿ ತಿಳಿಸಿದ್ದಾರೆ. ಇಂಧನ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದ ಖಾಸಗೀಕರಣ ಮಾಡಿದ ಪರಿಣಾಮವಾಗಿ, ಮೆಕ್ಸಿಕೊ ದಲ್ಲಿ ಭಾರಿ ಹೋರಾಟ ಗಳು ನಡೆದು ನಿಯೊಟೊ ರವರ ಮೇಲೆ ಜನರಿಗೆ ತೀವ್ರ ಅಸಮದಾನ ಮೂಡಿತ್ತು. ಇವೆಲ್ಲವುದರ ಪರಿಣಾಮವಾಗಿ, ಅಸಮಾನತೆ ಹೆಚ್ಚಾಗಿ, ಹಲವು ದಶಕಗಳಿಂದ ಜನರ ಸಂಕಷ್ಟಗಳು ಹೇಳತೀರದಷ್ಟು ಶೋಚನೀಯ ವಾಗಿದೆ. ಆಕ್ಸ್‌ಫಾಮ್ ಪ್ರಕಾರ ದೇಶದ ಜನ ಸಂಖ್ಯೆಯಲ್ಲಿ ಶೇಕಡಾ. 1 ರಷ್ಟು ಶ್ರೀಮಂತರು ಅದರ ಸಂಪತ್ತಿನ ಶೇ. 43 ರಷ್ಟು ಭಾಗವನ್ನು ಹೊಂದ್ದಿದ್ದಾರೆ. ವಿಶ್ವದಲ್ಲೇ ಅತ್ಯಂತ ಅಸಮಾನ ದೇಶಗಳಲ್ಲಿ ಮೆಕ್ಸಿಕೊ ಒಂದಾಗಿದೆ. ಇದು ಬ್ರೆಜಿಲ್ ನಂತರ, ಲ್ಯಾಟಿನ್ ಅಮೆರಿಕದ ಎರಡನೆಯ ಪ್ರಮುಖ ಆರ್ಥಿಕತೆಯ ದೇಶವಾಗಿದೆ, ಆದರೆ, ದೇಶದಲ್ಲಿ 5 ಕೋಟಿಯಷ್ಟು ಜನರು ಬಡತನ ರೇಖೆಯ ಕೆಳಗಿದ್ದಾರೆ. ಕನಿಷ್ಠ ವೇತನ ಕೇವಲ 4.6 ಡಾಲರ್. ಇವೆಲ್ಲಾ ಅಧ್ಯಕ್ಷ ಎನ್ರಿಕ್ ಪೇನ ನಿಯೆಟೊ ರವರ ನವ ಉದಾರವಾದ ನೀತಿಯ ದುಷ್ಪರಿಣಾಮಗಳು.

**ಹೊಸ ಸಾಧ್ಯತೆ**

ಮತ್ತೊಂದೆಡೆ, ನಿಯೆಟೊ ರವರ ಅವಧಿಯಲ್ಲಿ ರಾಜಕೀಯ ಹಿಂಸಾಚಾರ ಎಲ್ಲೆ ಮೀರಿತ್ತು. ಒಂದು ಸಂಶೋಧನೆಯ ಪ್ರಕಾರ ಸೆಪ್ಟೆಂಬರ್ 8, 2017 ಮತ್ತು ಜೂನ್ 16, 2018ರ. ಮಧ್ಯೆ ನಡೆದ ರಾಜಕೀಯ ಹಿಂಸಾಚಾರದಲ್ಲಿ 129 ರಾಜಕೀಯ ಕೊಲೆಗಳು ನಡೆದಿವೆ. ಅವರಲ್ಲಿ 49 ಅಭ್ಯರ್ಥಿಗಳು ಅಥವಾ ಹಿಂದಿನ ಅಭ್ಯರ್ಥಿಗಳಾಗಿದ್ದರೆಂದು ವರದಿ ತಿಳಿಸಿದೆ.

ಎಡ ಪಂಥೀಯ ಅಧ್ಯಕ್ಷರಾಗಿ ಒಬ್ರಡರ್ ರಾಷ್ಟ್ರೀಯ ಅರಮನೆಗೆ ಮೊಟ್ಟ ಮೊದಲು ಪ್ರವೇಶ ಒಂದು ಐತಿಹಾಸಿಕವಾಗಿ ಹೊಸದಾದ ಸಾಧ್ಯತೆಗಳಿಗೆ ನಾಂದಿ ಎಂದು ವ್ಯಾಖ್ಯಾನಿಸಲಾಗಿದೆ. ದೇಶದ ಆಡಳಿತದ ಸ್ವರೂಪ ಬದಲಾಗಬೇಕಿದೆ. ಮೊರೆನಾ ಪಕ್ಷದ ಗೆಲುವನ್ನು ಲ್ಯಾಟಿನ್ ಅಮೆರಿಕಾದ ಅನೇಕರು ಅಭಿನಂದಿಸಿದ್ದಾರೆ. ಪ್ರಮುಖವಾಗಿ, ವೆನೆಜುವೆಲಾ ದ ಅಧ್ಯಕ್ಷ ರಾದ ನಿಕೊಲಸ್ ಮಡುರೊ, ಕ್ಯೂಬಾದ ಅಧ್ಯಕ್ಷ ಮಿಗುಯೆಲ್ಲೊ ಡಯಾಜ್-ಕ್ಯಾನಲ್, ಎಲ್. ಸಾಲ್ವಡಾರ್ ಅಧ್ಯಕ್ಷ ರಾದ ಸ್ಯಾಂಚೆಜ್ ಸೆರೆನ್, ಹಾಗೂ ಈಕ್ವೆಡಾರ್ ನ ಮಾಜಿ ಅಧ್ಯಕ್ಷ ರಾಫೆಲ್ಲ್ ಕೊರಿಯಾ, ಇವರೆಲ್ಲರೂ ಮೆಕ್ಸಿಕನ್ ಜನರನ್ನು ಹಾಗೂ ಚುನಾಯಿತ ಅಧ್ಯಕ್ಷ ರನ್ನು ಅಭಿನಂದಿಸಿ, ಜನರ ಸಾರ್ವಭೌಮತ್ವದ ಮತ್ತು ಸ್ನೇಹಕ್ಕಾಗಿ ವಿಶಾಲ ಮಾರ್ಗಗಳು ತೆರೆದಿವೆ ಎಂದಿದ್ದಾರೆ. ನಿಮ್ಮ ವಿಜಯ ಸುಳ್ಳಿನ ಮೇಲೆ ಸತ್ಯವನ್ನು ಗೆದ್ದಿದ್ದೀರಿ ಎಂದು ವೆನೆಜುವೇಲಾ ಮತ್ತು ಕ್ಯೂಬಾದ ಅಧ್ಯಕ್ಷರು ಹೇಳಿದ್ದಾರೆ.

**ಟ್ರಂಪ್ ರ ಗಡಿ ಗೋಡೆಯ ಬಗ್ಗೆ ಒಬ್ರಡರ್**

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡಾ, ಅಭಿನಂದನೆಗಳನ್ನು ಟ್ವಿಟರ್ ಮೂಲಕ ತಿಳಿಸಿದ್ದಾರೆ. "ಮೆಕ್ಸಿಕೊ-ಅಮೆರಿಕಾ ಗಡಿಯಲ್ಲಿ ವಲಸೆಗಾರರ ನ್ನು ತಡೆಯೊಡ್ಡಿ ಗೋಡೆ ನಿರ್ಮಿಸಿ, ಪರಸ್ಪರರ ಗೌರವಕ್ಕೆ ಹಾನಿ ಮಾಡಲಾಗಿದ್ದನ್ನು 'ತಮ್ಮ ಓಯ್ ಟ್ರಂಪ್ ಆಲಿಸಿ ನನ್ನ ಮಾತನ್ನು'. ಎಂಬ ಪುಸ್ತಕದಲ್ಲಿ, ಟ್ರಂಪ್ ನ ವಲಸೆ ಕಾಯಿದೆಯನ್ನು ವಿರೋಧಿಸಿದ್ದರು. ಒಬ್ರಡರ್ ರವರು ವಿಜಯದ ನಂತರದ ತಮ್ಮ ಮೊದಲ ಭಾಷಣದಲ್ಲಿ, ಪರಸ್ಪರ ಸಂಬಂಧಗಳನ್ನು ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ.

ನವ-ಉದಾರವಾದದ ದುಷ್ಪರಿಣಾಮಗಳನ್ನು ಹಿಮ್ಮೆಟ್ಟಿಸಲು, ಹೊಸ ಕ್ರಮಗಳನ್ನು ಅನುಸರಿಸಬೇಕಾಗಿದೆ. ಆ ನಿಟ್ಟಿನಲ್ಲಿ ತನ್ನ ಚುನಾವಣಾ ಭರವಸೆಗಳನ್ನು ಈಡೇರಿಸಲು ಕಾರ್ಯಕ್ರಮಗಳನ್ನು ರೂಪಿಸಬೇಕು. ಕನಿಷ್ಠ ವೇತನವನ್ನು ಏರಿಸುವುದು ಆದ್ಯತೆ. ಸಾರ್ವತ್ರಿಕ ಆರೋಗ್ಯ, ಶಿಕ್ಷಣ ವ್ಯವಸ್ಥೆಯನ್ನು ಸ್ಥಾಪಿಸಬೇಕಾಗಿದೆ. ಯುವಕರಿಗೆ ಉದ್ಯೋಗಗಳನ್ನು ಸೃಷ್ಟಿಸಬೇಕು. ಪ್ರಮುಖ ವಾಗಿ ಆಡಳಿತದಲ್ಲಿ ಹಾಸುಹೊಕ್ಕಾಗಿರುವ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಹೊಸ ಆದ್ಯಕ್ಷರಿಗೆ ಸವಾಲುಗಳು ಸಾಲು ಸಾಲಾಗಿವೆ. ಅವನ್ನು ಅವರು ಹೇಗೆ ನಿಭಾಯಿಸುತ್ತಾರೆ ಕಾದು ನೋಡಬೇಕು. ●

## ಹಲವು ಏಳುಬೀಳುಗಳ ಫುಟ್‌ಬಾಲ್ ವಿಶ್ವಕಪ್......

ಪುಟ 16 ರಿಂದ

ನಿರ್ಗಮಿಸಿತು. ಸೆಮಿಫೈನಲ್ ನಲ್ಲಿ ಅತಿಥೇಯ ಬ್ರೆಜಿಲ್ ಜರ್ಮನಿ ಯುವ ತಂಡದ ವಿರುದ್ಧ 7-1 ಗೋಲುಗಳ ಹೀನಾಯ ಸೋಲು ಕಂಡಿತು. ಇಡೀ ಬ್ರೆಜಿಲ್ ದೇಶ ಶೋಕದಲ್ಲಿ ಮುಳುಗಿತು. ಮೂರನೆಯ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಸಹಾ ಬ್ರೆಜಿಲ್ ಹಾಲೆಂಡ್ ವಿರುದ್ಧ ಸೋತಿತು. ವಿಶ್ವದ ಸರ್ವಶ್ರೇಷ್ಠ ಆಟಗಾರ ಲಯೊನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೈನಾ ಜರ್ಮನಿ ವಿರುದ್ಧ ಫೈನಲ್‌ನಲ್ಲಿ ಸೋತು ಎಲ್ಲರ ನಿರೀಕ್ಷೆಯಂತೆ ಜರ್ಮನಿ ನಾಲ್ಕನೆಯ ಬಾರಿ ವಿಶ್ವಕಪ್ ಎತ್ತಿ ಹಿಡಿಯಿತು.

2018 ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗಳು ರಷ್ಯಾದಲ್ಲಿ ಆರಂಭವಾಗಿದ್ದು ಅರ್ಹತೆ ಪಡೆದ 32 ದೇಶಗಳಲ್ಲಿ 8 ದೇಶಗಳು ಕ್ವಾರ್ಟರ್ ಫೈನಲ್ ತಲುಪಿವೆ. ಹಾಲಿ ಛಾಂಪಿಯನ್ ಜರ್ಮನಿ ಮೊದಲ ಸುತ್ತಿನಲ್ಲಿಯೇ ಹೀನಾಯವಾಗಿ ನಿರ್ಗಮಿಸಿತು. ಫುಟ್ಬಾಲ್‌ನಲ್ಲಿ ದೈತ್ಯ ಶಕ್ತಿ ಶಕ್ತಿ ಜರ್ಮನಿಯನ್ನು ಅಡಗಿಸಿದ ಕೀರ್ತಿ ಏಷ್ಯಾದ ಹಿರಿಮೆ ದಕ್ಷಿಣ ಕೊರಿಯಾಕ್ಕೆ ಸಲ್ಲುತ್ತದೆ. ಹಾಲಿ ವಿಶ್ವದ ಪ್ರಸಿದ್ಧ ಆಟಗಾರ ಲಯೊನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೈನಾ ಹಾಗೂ ಕ್ರಿಶ್ಚಿಯನ್ ರೊನಾಲ್ಡೋ ನೇತೃತ್ವದ ಪೋರ್ಚುಗಲ್ 16ನೇ ಹಂತದಲ್ಲಿ ನಿರ್ಗಮಿಸಿವೆ. ಅತಿಥೇಯ ರಷ್ಯಾ ಅಂತಿಮ ಎಂಟರ ಘಟ್ಟ ತಲುಪಿದೆ. ಕ್ವಾರ್ಟರ್ ಫೈನಲ್ಸ್ ಆಡುತ್ತಿರುವ ಎಂಟು ತಂಡಗಳೆಂದರೆ - ಉರುಗುವೇ ಫ್ರಾನ್ಸ್, ಬ್ರೆಜಿಲ್, ಬೆಲ್ಜಿಯಂ, ಸ್ವೀಡನ್, ಇಂಗ್ಲೆಂಡ್, ರಶ್ಯ, ಕ್ರೊವೆಶಿಯಾ. ●


## ವಿಶ್ವ ಕುಂದಾಪುರ ಹೊಸ ಅನುವಾದ ಕೃತಿ ದೇಶಪ್ರೇಮವೋ? ದೇಶದ್ರೋಹವೋ?:

ಪತ್ರಕರ್ತ-ಲೇಖಕ ವಿಶ್ವ ಕುಂದಾಪುರ ಇವರ ಹೊಸ ಅನುವಾದ ಕೃತಿ 'ದೇಶಪ್ರೇಮವೋ? ದೇಶದ್ರೋಹವೋ?'. ಪ್ರಕಟಗೊಂಡಿದೆ. ಕಾರ್ಲ್ ಮಾರ್ಕ್ಸ್‌ರ 200ನೇ ಜನ್ಮ ದಿನಾಚರಣೆ ಮಾಲಿಕೆಯಲ್ಲಿ ಗದಗದ ಲಡಾಯಿ ಪ್ರಕಾಶನ ಇದನ್ನು ಪ್ರಕಟಿಸಿದೆ. ಗೊದ್ದಂ ಕೋಟೇಶ್ವರ ರಾವ್ ಸಂಪಾದಿತ ಮೂಲ ಇಂಗ್ಲಿಷ್ ಲೇಖನಗಳ ಸಂಗ್ರಹ ಕೃತಿಯನ್ನು ಅಖಿಲ ಭಾರತ ವಿದ್ಯಾರ್ಥಿ ಫೆಡರೇಶನ್ (ಎಐಎಸ್‌ಎಫ್) ಮತ್ತು ವಿಶಾಲಾಂಧ್ರ ಪಬ್ಲಿಷಿಂಗ್ ಹೌಸ್ ಪ್ರಕಟಿಸಿದ್ದವು.

2016ರಲ್ಲಿ ದೇಶದ ಪ್ರತಿಷ್ಠಿತ ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯ (ಜೆಎನ್‌ಯು) ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹಯ್ಯಾ ಕುಮಾರ್ ಬಂಧನದ ಹಿನ್ನೆಲೆಯಲ್ಲಿ ಉದ್ಭವಿಸಿದ ದೇಶಪ್ರೇಮ, ದೇಶದ್ರೋಹ, ಜಾತ್ಯತೀತತೆ, ಪ್ರಜಾಪ್ರಭುತ್ವದ ಮೇಲಿನ ದಾಳಿ, ಕೋಮುವಾದ ಮುಂತಾದ ವಿಚಾರಗಳ ಹಿನ್ನೆಲೆಯಲ್ಲಿ ಮಾಧ್ಯಮ ತಜ್ಞರು, ಕಾನೂನು ತಜ್ಞರು, ಸಾಮಾಜಿಕ ಕಾರ್ಯಕರ್ತರು ಮುಂತಾಗಿ ವಿವಿಧ ವಿಭಾಗಗಳ ಜನರು ಲೇಖನಗಳು ಹಾಗೂ ಭಾಷಣಗಳಲ್ಲಿ, ಸಂಸತ್ತಿನ ಚರ್ಚೆಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಈ ಕೃತಿಯಲ್ಲಿವೆ. ಜೆಎನ್‌ಯು ಪ್ರಕರಣವು ವಸಾಹತುಶಹಿ ಯುಗದ ಭಾರತೀಯ ದಂಡಸಂಹಿತೆಯ (ಐಪಿಸಿ) 124-ಎ ಸೆಕ್ಷನ್‌ನ ಸಿಂಧುತ್ವದ ಕುರಿತೇ ಒಂದು ಸಂವಾದವನ್ನು ಹುಟ್ಟುಹಾಕಿದ್ದು ಆ ಬಗ್ಗೆಯೂ ಹಲವು ವಿಚಾರಗಳು ಇದರಲ್ಲಿವೆ.

ಕ್ಯಾಂಪಸ್‌ಗಳು ಹಾಗೂ ಸಮಾಜದಲ್ಲಿ ವಿದ್ಯಾರ್ಥಿ ಸಂಘಟನೆಗಳು, ಚಳವಳಿಗಳು ನಿರ್ವಹಿಸಬೇಕಾದ ಪಾತ್ರ ಹಾಗೂ ಯಾವುದೇ ದೇಶದ ಅಭಿವೃದ್ಧಿಯಲ್ಲಿ ವಿಶ್ವವಿದ್ಯಾನಿಲಯಗಳ ಮಹತ್ವದ ಮೇಲೆಯೂ ಇಲ್ಲಿನ ಹಲವು ಲೇಖನಗಳು ಬೆಳಕು ಚೆಲ್ಲುತ್ತವೆ.

ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ರಾಜ್ಯಸಭೆಯಲ್ಲಿ ಮಾಡಿದ ಭಾಷಣ, ಭಾರತೀಯ ನೌಕಾಪಡೆಯ ನಿವೃತ್ತ ಮುಖ್ಯಸ್ಥ ಅಡ್ಮಿರಲ್ ಎಲ್. ರಾಮದಾಸ್, ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್, ಹಿರಿಯ ಪತ್ರಕರ್ತ ರಾಜದೀಪ್ ಸರ್‌ದೇಸಾಯಿ, ಮದ್ರಾಸ್ ಹೈಕೋರ್ಟ್ ವಕೀಲ ಸುಹೃತ್ ಪಾರ್ಥಸಾರಥಿ, ಖ್ಯಾತ ಪತ್ರಕರ್ತೆ ಬರ್ಖಾ ದತ್, ಎಬಿವಿಪಿ ಮಾಜಿ ನಾಯಕ ವಿಕಾಸ್ ಪಾಠಕ್ ಮುಂತಾದವರ ಲೇಖನಗಳು ವಿಶೇಷವಾಗಿ ಗಮನಾರ್ಹವಾಗಿವೆ. ●



JANASHAKTHI KANNADA VARA PATRIKE JULY 9-15, 2018 Price: Rs. 10/- Date of Publication: 6 JULY 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

# ಕಾಲಾ : ದುಡಿಯುವ ಜನರ ಮತ್ತು ಭೂಗಳ್ಳರ ಸಂಘರ್ಷ



**ಮೇಲ್ನೋಟಕ್ಕೆ ಕಾವೇರಿ ನೀರಿನ ಪ್ರಶ್ನೆ ಎದ್ದು ಕಾಣುತ್ತಿದೆಯಾದರೂ ವಾಸ್ತವದಲ್ಲಿ ಅದೊಂದು ಪ್ರಬಲ 'ಭೂಗಳ್ಳರ ಮತ್ತು ಮತಾಂಧ ಶಕ್ತಿಗಳ ದುಷ್ಟತನವನ್ನು ಬಯಲಿಗೆಳೆದ' ಸಿನಿಮಾ. ಆದ್ದರಿಂದಲೇ ಕನ್ನಡ ಮಾಧ್ಯಮ, ಅದರಲ್ಲೂ ಬಹುತೇಕ 'ಭಕ್ತಪ್ರಿಯ' ಟಿ.ವಿ.ಚಾನಲ್ಲುಗಳು 'ಕಾಲಾ' ವಿರುದ್ಧ ಎಲ್ಲಿಲ್ಲದ ಅಪಪ್ರಚಾರ ನಡೆಸಿದವು.**

**ಟಿ.ಸುರೇಂದ್ರ ರಾವ್**

ಮುಂಬಯಿಯ ಧಾರಾವಿ ಕೊಳಚೆ ಪ್ರದೇಶದಲ್ಲಿನ ಕೆಳ ವರ್ಗದ ದುಡಿಯುವ ಜನರು ತಮ್ಮ ಜಮೀನನ್ನು ಉಳಿಸಿಕೊಳ್ಳಲು ಶ್ರೀಮಂತ ಭೂಗಳ್ಳರ ವಿರುದ್ಧ ನಡೆಸಿದ ರಾಜಿಯಿಲ್ಲದ ಸಮರಶೀಲ ಹೋರಾಟದ ಕತೆಯೇ 'ಕಾಲಾ'. ಜನರ ಆಸೆ ಆಕಾಂಕ್ಷೆಗಳು, ಕನಸುಗಳು, ಬಡತನ ಮತ್ತು ಪಟಾಲಂಗಳ ಬಗ್ಗೆ ಅದರಲ್ಲಿ ಚಿತ್ರಿಸಲಾಗಿದೆ. ಅವರ ಬದುಕು ಹಾಗೂ ಆ ನೆಲದ ಬಗೆಗಿನ ಅವರ ಅವಿನಾಭಾವ ಸಂಬಂಧ ಮತ್ತು ಆ ಜಮೀನನ್ನು ಲಪಟಾಯಿಸಲು ಶ್ರೀಮಂತರು ಹೇಗೆ ನಗರ ಸೌಂದರ್ಯ ಮತ್ತು ಸ್ವಚ್ಛತೆಯ ಹೆಸರಿನಲ್ಲಿ ಅವರನ್ನು ಒಕ್ಕಲೆಬ್ಬಿಸುವ ಹುನ್ನಾರ ನಡೆಸುತ್ತಾರೆ ಎಂಬುದನ್ನು ಮನಮುಟ್ಟುವಂತೆ ಸೆರೆಹಿಡಿಯಲಾಗಿದೆ. ಈ ರಾಜಕೀಯ ಕಾದಾಟದಲ್ಲಿ ಜನಸಮುದಾಯದ ಧಾರ್ಮಿಕ, ದೈವಿಕ ಭಾವನೆಗಳನ್ನು ದುರ್ಬಳಕೆ ಮಾಡಿ ಜಮೀನು ಕಸಿಯುವ 'ಕೋಮುವಾದಿ' ತಂತ್ರವನ್ನು ಅತ್ಯಂತ ಸಮರ್ಥವಾಗಿ ಈ ಸಿನಿಮಾದಲ್ಲಿ ಬಯಲಿಗೆಳೆಯಲಾಗಿದೆ.

ಕಾವೇರಿ ನದಿ ನೀರಿನ ಹಂಚಿಕೆ ಕುರಿತು ರಜನೀಕಾಂತ್ ನೀಡಿದ ವಿವಾದಾತ್ಮಕ ಹೇಳಿಕೆಯಿಂದ ಕನ್ನಡದ ರಜನೀಕಾಂತ್ ಅವರ ತಮಿಳು ಸಿನಿಮಾ 'ಕಾಲಾ' ಹೆಚ್ಚು ಜನಪ್ರಿಯವಾಗಿದೆ. ಈ 'ಕಾಲಾ' ಸಿನಿಮಾವನ್ನು ಕರ್ನಾಟಕದಲ್ಲಿ ಎಲ್ಲೂ ಬಿಡುಗಡೆಗೆ ಅವಕಾಶ ನೀಡುವುದಿಲ್ಲ ಎಂದು ಕನ್ನಡಪರ ಸಂಘಟನೆಗಳು ಮತ್ತು ಕರ್ನಾಟಕ ಫಿಲ್ಮ್ ಛೇಂಬರ್ ಆಫ್ ಕಾಮರ್ಸ್ ಹಟಹಿಡಿದಿದ್ದವು. ನಂತರ ರಾಜ್ಯ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮಧ್ಯಪ್ರವೇಶದಿಂದ ಸಿನಿಮಾ ಬಿಡುಗಡೆಯಾಗಿ ಥಿಯೇಟರುಗಳಲ್ಲಿ ಪ್ರದರ್ಶಿತಗೊಳ್ಳುತ್ತಿದೆ.

ಚೆನ್ನೈನ ತಮ್ಮ ಮನೆಯ ಹೊರಗೆ ಕನ್ನಡದಲ್ಲಿ ಮಾತನಾಡಿದ ರಜನೀಕಾಂತ್ "ನಾನೇನೂ ತಪ್ಪು ಮಾಡಿಲ್ಲ. ಸುಪ್ರೀಂ ಕೋರ್ಟು ತೀರ್ಪಿನ ಪ್ರಕಾರ ಕಾವೇರಿ ನಿರ್ವಹಣಾ ಮಂಡಳಿಯ ತೀರ್ಮಾನಕ್ಕೆ ಕರ್ನಾಟಕ ಬದ್ಧವಾಗಿರಬೇಕು ಎಂದಷ್ಟೇ ನಾನು ಹೇಳಿದ್ದು. ಆದ್ದರಿಂದ ದಯವಿಟ್ಟು ಸಿನಿಮಾ ನೋಡಲು ಬಯಸುವವರಿಗೆ ತೊಂದರೆ ಕೊಡಬೇಡಿ. ನಿಮ್ಮ ಸಹಕಾರ ಬೇಡುತ್ತೇನೆ." ಎಂದಿದ್ದಾರೆ.

ಆದ್ದರಿಂದ ಪ್ರಶ್ನೆ ಇರುವುದು ಕೇವಲ ಅದಷ್ಟಕ್ಕಾಗಿಯೇ 'ಕಾಲಾ' ಪ್ರದರ್ಶನದ ವಿರುದ್ಧ ಪ್ರತಿಭಟನೆಗಳಾದುವೋ ಅಥವಾ ಬೇರೆ ಕಾರಣಗಳೂ ಇವೆಯೋ? ಈ ಸಿನಿಮಾ ನೋಡಿದ ಮೇಲೆ ಅನಿಸಿದ್ದು ಒಂದು ಪ್ರಬಲ ಬೇರೆ ಕಾರಣವೂ ಇದೆ ಎಂಬುದು. ಮೇಲ್ನೋಟಕ್ಕೆ ಕಾವೇರಿ ನೀರಿನ ಪ್ರಶ್ನೆ ಎದ್ದು ಕಾಣುತ್ತಿದೆಯಾದರೂ ವಾಸ್ತವದಲ್ಲಿ ಅದೊಂದು ಪ್ರಬಲ 'ಭೂಗಳ್ಳರ ಮತ್ತು ಮತಾಂಧ ಶಕ್ತಿಗಳ ದುಷ್ಟತನವನ್ನು ಬಯಲಿಗೆಳೆದ' ಸಿನಿಮಾ. ಆದ್ದರಿಂದಲೇ ಕನ್ನಡ ಮಾಧ್ಯಮ, ಅದರಲ್ಲೂ ಬಹುತೇಕ 'ಭಕ್ತಪ್ರಿಯ' ಟಿ.ವಿ.ಚಾನಲ್ಲುಗಳು 'ಕಾಲಾ' ವಿರುದ್ಧ ಎಲ್ಲಿಲ್ಲದ ಅಪಪ್ರಚಾರ ನಡೆಸಿದವು.

**ಸ್ವಚ್ಛತೆ, ಪರಿಶುದ್ಧತೆ, ಒಕ್ಕಲೆಬ್ಬಿಸುವುದು ಮತ್ತು ಸಾರ್ಟ್ ಸಿಟಿ**

ಸ್ವಚ್ಛತೆ ಮತ್ತು ಪರಿಶುದ್ಧತೆ ಈ ಎರಡು ಮಹತ್ವದ ವಿಷಯಗಳನ್ನು ಕೇಂದ್ರ ವಸ್ತುವಾದ ಜಮೀನಿನ ಜತೆ ಅತ್ಯಂತ ಜಾಣತನದಿಂದ ಹೆಣೆಯಲಾಗಿದೆ. ಸ್ವಚ್ಛತೆ ಎನ್ನುವುದು ಕೊಳಚೆ ಪ್ರದೇಶಕ್ಕೆ ತಳಕುಹಾಕಿಕೊಂಡ ಕೇವಲ ಬಾಹ್ಯ ಭೌತಿಕ ಆಯಾಮ ಮಾತ್ರವಾಗಿರದೆ ಜಾತಿಗೆ ಅಂಟಿಕೊಳ್ಳುವ ಸೈದ್ಧಾಂತಿಕ ಪ್ರಶ್ನೆ ಕೂಡ. ಕೊಳಕುತನ ದಲಿತರ ಬದುಕು ಹಾಗೂ ಕಸುಬುಗಳ ಜತೆ ಹಾಸುಹೊಕ್ಕಾಗಿದೆ ಎಂಬ 'ಮೇಲ್ಜಾತಿ'ಗಳ ಕಾಲ್ಪನಿಕ ಹುಚ್ಚುತನವನ್ನು ಎತ್ತಿತೋರಿಸಿದೆ.

ಕೊಳೆಗೇರಿಗಳಿಗೆ ಅಂಟಿಕೊಂಡಿರುವ ಈ ಸ್ವಚ್ಛತೆ ಮತ್ತು ಪರಿಶುದ್ಧತೆಯ ಪ್ರಶ್ನೆ ಜಾತಿ ಮತ್ತು ಮತ(ಧರ್ಮ)ಗಳ ಜತೆಯೂ ತಳುಕುಹಾಕಿಕೊಂಡಿರುತ್ತದೆ. ಈ ಕೊಳೆಗೇರಿಗಳಲ್ಲಿ ದಲಿತರಲ್ಲದೇ ಮುಸ್ಲಿಮರು ಮುಂತಾದ ಇತರರೂ ತಮ್ಮ ಬದುಕು ಸಾಗಿಸುತ್ತಿದ್ದಾರೆ. ಕೊಳೆಗೇರಿಗಳಿಂದ ಅವರನ್ನು ಒಕ್ಕಲೆಬ್ಬಿಸುವುದೆಂದರೆ ನಗರವನ್ನು ಸೌಂದರ್ಯಗೊಳಿಸುವ ವಿಷಯ ಮಾತ್ರವಲ್ಲ ಅದು. ದಲಿತರು, ಮುಸ್ಲಿಮರು ಮತ್ತು ಇತರರನ್ನು ನಗರದಿಂದ ಹೊರಗಟ್ಟುವುದು ಮತ್ತು ಆ ಮೂಲಕ ನಗರವನ್ನು ಮೇಲ್ಜಾತಿ ಮತ್ತು ಮೇಲ್ವರ್ಗದವರಿಗೆ ಮಾತ್ರ ಮೀಸಲಿಡುವ ತಂತ್ರ ಕೂಡ ಆಗಿದೆ. ಶ್ರೀಮಂತರು, ಮೇಲ್ಜಾತಿಯವರು, ಧಾರ್ಮಿಕ ಅಸ್ಮಿತೆ ಮತ್ತು ಪ್ರಭುತ್ವ(ಸರ್ಕಾರ) ತಾವು ಹುಟ್ಟಿದ್ದೇ ಆಳಲು ಎಂಬ ಮನೋಭಾವದ 'ಕಾಲಾ'ದ ಖಳನಾಯಕ(ಶ್ರೀಮಂತ ಭೂಗಳ್ಳ)ನ ಹಿಂದಿನ ಶಕ್ತಿ. ಇದು ಇಂದಿನ ಭಾರತದ ನಗರಗಳ ಸ್ಥಿತಿ. ನಮ್ಮ ಸರ್ಕಾರಗಳ 'ಸ್ವಚ್ಛ ಭಾರತ ಅಭಿಯಾನ' ಮತ್ತು 'ಸ್ಮಾರ್ಟ್ ಸಿಟಿ' ಯೋಜನೆಗಳ ಹಿಂದಿರುವ ಸಿದ್ಧಾಂತ ಕೂಡ ಇದೆ.

**ಶಿವ ಮತ್ತು ಲೆನಿನ್:**

ನಾಯಕ ನಟನಿಗೆ ಇಬ್ಬರು ಮಕ್ಕಳು, ಶಿವ ಹಾಗೂ ಲೆನಿನ್. ಸಮಸ್ಯೆಗಳ ಪರಿಹಾರಕ್ಕೆ ಶಿವ ತನ್ನ ಭುಜಬಲವನ್ನು ಬಳಸಲು ಮುಂದಾದರೆ, ಲೆನಿನ್ ಜನರನ್ನು ಸಂಘಟಿಸಿ ಹೋರಾಟಕ್ಕೆ ಅಣಿನೆರೆಸುತ್ತಾನೆ. ತನ್ನ ತಂದೆಯ ರಕ್ಷಣೆ ಮಾಡುವಾಗ ಶಿವ ತನ್ನ ಜೀವ ಕಳೆದುಕೊಳ್ಳುತ್ತಾನೆ, ಲೆನಿನ್ ಬದುಕುಳಿಯುತ್ತಾನೆ. ನಾಯಕನಟ ತನ್ನ ಮಗ ಲೆನಿನ್‌ನ್ನು ಎಂದೂ ಬೈಯುವುದಿಲ್ಲ. ಏಕೆಂದರೆ ಅವನ ಹೆಸರು ಒಬ್ಬ ಕ್ರಾಂತಿಕಾರಿಯದು. ಲೆನಿನ್‌ಗೆ ಬುದ್ಧಿವಾದ ಹೇಳುತ್ತಾ 'ಎರಡು ಮೂರು ಪುಸ್ತಕ ಓದುವುದರಿಂದ ಸಮಾಜ ಬದಲು ಮಾಡಲಾಗುವುದಿಲ್ಲ, ಜನಸಮುದಾಯದ ಜತೆ ಬೆರೆತು ಅವರ ಬದುಕನ್ನು ಅರಿಯಬೇಕು" ಎಂದು ದುಡಿಯುವ ಜನರ ಮುಖಂಡನಾಗಬೇಕಾದವನು ಹೇಗಿರಬೇಕೆಂದು ಸೂಕ್ಷ್ಮವಾಗಿ ಸಲಹೆ ನೀಡುತ್ತಾನೆ.

ಕೊಳೆಗೇರಿಯ ಜನರ ಐಕ್ಯತೆಯನ್ನು ಒಡೆಯಲು ಮತ್ತು ಜಂಘಾಬಲವನ್ನು ಉಡುಗಿಸಲು ನೀರು ಪೂರೈಕೆ, ವಿದ್ಯುತ್ ಪೂರೈಕೆ ಮುಂತಾದ ಅಗತ್ಯ ಸೇವೆಗಳನ್ನು ನಿಲ್ಲಿಸಿ ಕೋಮು ಗಲಭೆಗಳನ್ನು ಹುಟ್ಟುಹಾಕಲು ಭೂಗಳ್ಳ ಶ್ರೀಮಂತರು ಮುಂದಾದಾಗ ಮುಷ್ಕರಕ್ಕೆ ಕರೆ ನೀಡಿ, ದುಡಿಯುವ ಜನರ ಪ್ರಮುಖ ಅಸ್ತ್ರ ಶ್ರಮಶಕ್ತಿಯ ಸದುಪಯೋಗ ಮಾಡುತ್ತಾನೆ. ಅವರ ಮುಷ್ಕರದಿಂದಾಗಿ ಇಡೀ ನಗರ ಗೊಂದಲದ ಗೂಡಾಗುತ್ತದೆ. ನಾಯಕ ನಟ ಬಳಸುವ ಬಟ್ಟೆಯ ಬಣ್ಣದ – ಕಪ್ಪು, ನೀಲಿ ಮತ್ತು ಕೆಂಪು – ಮೂಲಕ ದುಡಿಯುವ ಜನ ಒಂದಾಗಬೇಕಾದ ಅಗತ್ಯ, ಅನಿವಾರ್ಯತೆ ಮತ್ತು ತುರ್ತಿನ ಬಗ್ಗೆ ಸ್ಪಷ್ಟವಾಗಿ ಸಿನಿಮಾ ಸೂಚಿಸುತ್ತದೆ.

ಮಹಿಳೆಯರ ಹಕ್ಕು ಮತ್ತು ಶಕ್ತಿಯ ಕುರಿತೂ ಕೆಲವು ದೃಶ್ಯಗಳಲ್ಲಿ ಮಾತುಗಳು ಬರುತ್ತವೆ. ನಾಯಕ ನಟ ಹೊರಗಡೆ ಹೀರೋ ಆಗಿದ್ದು ಮನೆಯಲ್ಲಿ ತನ್ನ ಸಂಗಾತಿಯ ಮಾತನ್ನು ಗೌರವಿಸುತ್ತಾನೆ. ಮನೆಯಲ್ಲಿ ಪುರುಷರು ಅಡಿಗೆ ಮಾಡಲು ಮಹಿಳೆಯರಿಗೆ ನೆರವಾಗಬೇಕೆನ್ನುತ್ತಾನೆ.

ಒಟ್ಟಿನಲ್ಲಿ ನಿರ್ದೇಶಕ ಪ.ರಂಜಿತ್ ಸಿನಿಮಾದುದ್ದಕ್ಕೂ ತಮ ಛಾಪನ್ನು ಒತ್ತಿದ್ದಾರೆ. ಸಂಸ್ಕೃತಿಯನ್ನು ಬಳಸಿ ಆಳುವ ವರ್ಗ, ಮೇಲ್ಜಾತಿಯ ಯಜಮಾನಿಕೆ ಮತ್ತು ಕೋಮುವಾದಿ ಶಕ್ತಿಗಳನ್ನು ಹೇಗೆ ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸಬಹುದೆಂದು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ●



**ಪ್ರಚಾರದ ಪೋಸ್ಟರುಗಳಲ್ಲಿ ಅಂಬೇಡ್ಕರ್ ಮತ್ತು ಚೆಗುವಾರ ಫೋಟೋಗಳನ್ನು ಬಳಸುವ ಮೂಲಕ ಯಾವ ಜನವಿಭಾಗದ ಜನ ಈ ಸಿನಿಮಾವನ್ನು ಹೆಚ್ಚು ನೋಡಬೇಕೆನ್ನುವುದನ್ನು ಸೂಚ್ಯವಾಗಿ ತಿಳಿಸಲಾಗಿದೆ.**

## ಹಲವು ಏಳುಬೀಳುಗಳ ಫುಟ್‌ಬಾಲ್ ವಿಶ್ವಕಪ್...... ಪುಟ 11 ರಿಂದ




ಫ್ರಾನ್ಸ್ ಆತಿಥ್ಯ ನೀಡಿತ್ತು. ಮೊದಲ ಬಾರಿಗೆ ಅಂತಿಮ ಸುತ್ತಿನ ಅರ್ಹತಾ ತಂಡಗಳ ಸಂಖ್ಯೆಯನ್ನು ಈ ಪಂದ್ಯಾವಳಿಯಲ್ಲಿ 32 ಕ್ಕೆ ಏರಿಸಲಾಯಿತು. ಬ್ರೆಜಿಲ್, ಜರ್ಮನಿ, ಇಟಲಿ, ಅರ್ಜೆಂಟೈನಾ ಹಾಗೂ ಅತಿಥೇಯ ಫ್ರಾನ್ಸ್ ಬಲಿಷ್ಟ ತಂಡಗಳಾಗಿದ್ದವು. ಅಂದು ವಿಶ್ವಶೇಷ್ಟ ಫುಟ್ಬಾಲ್ ಆಟಗಾರನಾಗಿದ್ದ ರೊನಾಲ್ಡೊ ನೇತೃತ್ವದ ಬ್ರೆಜಿಲ್ ವಿಜೇತ ರಾಷ್ಟ್ರವಾಗಲಿದೆ ಎಂದು ಪರಿಣಿತರ ಅಭಿಪ್ರಾಯವಾಗಿತ್ತು. ಅಲ್ಜೀರಿಯಾ ಮೂಲದ ಫ್ರಾನ್ಸ್‌ನ ಆಟಗಾರ ಜೈದಿನ್ ಜಿದೇನ್‌ನ ಅಪ್ರತಿಮ ಆಟದಿಂದ ಅತಿಥೇಯ ಫ್ರಾನ್ಸ್ ಮೊದಲ ಬಾರಿಗೆ ವಿಶ್ವಕಪ್ ಅನ್ನು ತನ್ನದಾಗಿಸಿಕೊಂಡಿತು. ಫೈನಲ್‌ನಲ್ಲಿ ಫ್ರಾನ್ಸ್ ಶ್ರೇಷ್ಟ ತಂಡ ಬ್ರೆಜಿಲ್ ಅನ್ನು 3–0 ಗೋಲುಗಳಿಂದ ಸೋಲಿಸಿತು. ಫೈನಲ್‌ನಲ್ಲಿ ಜಿದೇನ್ ಸ್ವತಃ ಎರಡು ಗೋಲುಗಳನ್ನು ಗಳಿಸಿದ್ದ. ಈ ಪಂದ್ಯಾವಳಿಯಲ್ಲಿ ಇರಾನ್ ಅಮೆರಿಕಾವನ್ನು ಸೊಲಿಸಿದ್ದು ಒಂದು ಐತಿಹಾಸಿಕ ಘಟನೆಯಾಗಿ ಉಳಿದಿದೆ. ಅಮೆರಿಕಾ ಸೋಲಿಗೆ ಇರಾನ್‌ನಲ್ಲಿ ಬೃಹತ್ ಸಂಭ್ರಮಾಚರಣೆ ನಡೆಯಿತು. ಯುಗೋಸ್ಲೋವಿಯಾ ವಿಘಟನೆಗೊಂಡ ನಂತರ ಉದಯಿಸಿದ ರಾಷ್ಟ್ರ ಕ್ರೊಯೇಷಿಯಾ ಮೊದಲ ಬಾರಿಗೆ ಭಾಗವಹಿಸಿ 3ನೇ ಸ್ಥಾನ ಗಳಿಸಿ ವಿಶ್ವದ ಗಮನ ಸೆಳೆಯಿತು. ಇಂದಿಗೂ ಕ್ರೊಯೇಷಿಯಾ ಬಲಿಷ್ಟ ತಂಡವಾಗಿ ಮುಂದುವರೆದಿದೆ.

2002ರಲ್ಲಿ 17ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗೆ ಜಪಾನ್ ಹಾಗೂ ದಕ್ಷಿಣ ಕೊರಿಯಾ ಜಂಟಿಯಾಗಿ ಆತಿಥ್ಯ ನೀಡಿದವು. ವಿಶ್ವದ ಶ್ರೇಷ್ಟ ತರಬೇತುದಾರ ಹಾಲೆಂಡ್‌ನ ಗಸ್ ಹಿಡಿಂಕ್ ಗರಡಿಯಲ್ಲಿ ಪಳಗಿದ ಅತಿಥೇಯ ದಕ್ಷಣ ಕೊರಿಯಾ ಅದ್ಭುತ ಆಟ ಆಡಿತು. ದಕ್ಷಿಣ ಕೊರಿಯಾ ಮೊದಲ ಸುತ್ತಿನಲ್ಲಿ ಬಲಿಷ್ಟ ಪೋಲೆಂಡ್, ಅಮೆರಿಕಾ, ವಿಶ್ವಶ್ರೇಷ್ಟ ಆಟಗಾರರಾದ ಲೂಯಿಸ್ ಫಿಗೋ, ರೂಯಿ ಕೋಸ್ಟಾ ರನ್ನು ಒಳಗೊಂಡ ಪೋರ್ಚುಗಲ್ ತಂಡಗಳನ್ನು ಸೋಲಿಸಿ ವಿಜಯದ ಹಾದಿಯಲ್ಲಿ ಮುನ್ನಡೆಯಿತು. 16ರ ಘಟ್ಟದಲ್ಲಿ ದ. ಕೊರಿಯಾ ಬಲಿಷ್ಟ ಸ್ಪೇನ್ ತಂಡವನ್ನು ಸೋಲಿಸಿ ಸೆಮಿಫೈನಲ್ ತಲುಪಿತು. ಸೆಮಿಫೈನಲ್‌ನಲ್ಲಿ ಧೀರೋದ್ಧಾತ ಹೋರಾಟ ನಡೆಸಿದ್ದ ದ. ಕೊರಿಯಾ ವಿಶ್ವಶ್ರೇಷ್ಟ ತಂಡಗಳಲ್ಲಿ ಒಂದಾದ ಜರ್ಮನಿಗೆ ಮಣಿಯಿತು. 2002ರ ಪಂದ್ಯಾವಳಿಯ ಫೈನಲ್‌ನಲ್ಲಿ ಜರ್ಮನಿ ವಿರುದ್ಧ ಗೆದ್ದ ಬ್ರೆಜಿಲ್ 5ನೇ ಬಾರಿಗೆ ವಿಶ್ವಕಪ್ ಎತ್ತಿ ಹಿಡಿದು ದಾಖಲೆ ನಿರ್ಮಿಸಿತು.

2006ರಲ್ಲಿ 18ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿ ಜರ್ಮನಿಯಲ್ಲಿ ನಡೆಯಿತು. ಅಂದು ವಿಶ್ವ ಫುಟ್ಬಾಲ್‌ನಲ್ಲಿ ಉತ್ತುಂಗದಲ್ಲಿದ್ದ ಜೈದಿನ್ ಜಿದೇನ್ ಇದ್ದ ಫ್ರಾನ್ಸ್ ತಂಡ ಪುನಃ ಫೈನಲ್ ತಲುಪಿ ಇಟಲಿ ವಿರುದ್ಧ ಸೋಲು ಕಂಡಿತು. ಈ ಪಂದ್ಯದಲ್ಲಿ ಇಟಲಿ ಆಟಗಾರನ ಮೇಲೆ ಹಲ್ಲೆ ನಡೆಸಿದ ಫ್ರಾನ್ಸ್‌ನ ಜಿದೇನ್ ಫೈನಲ್ ಪಂದ್ಯದಲ್ಲಿ ಹೊರದೂಡಲ್ಪಟ್ಟ. ಜಿದೇನ್ ಇಲ್ಲದೆ ಹೆಚ್ಚುವರಿ ಸಮಯದಲ್ಲಿ ಫ್ರಾನ್ಸ್ ಇಟಲಿ ವಿರುದ್ಧ ಸೋತಿತು. ಇಟಲಿ ನಾಲ್ಕನೇ ಬಾರಿ ವಿಶ್ವಕಪ್‌ನ್ನು ಎತ್ತಿ ಹಿಡಿಯಿತು.

**ಮೆಸ್ಸಿ ಏಳುಬೀಳು**

2010ರಲ್ಲಿ ದಕ್ಷಿಣ ಆಫ್ರಿಕಾ 19ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯ ಆತಿಥ್ಯ ನೀಡಿತ್ತು. ಅತಿಥೇಯ ದಕ್ಷಿಣ ಆಫ್ರಿಕಾ 1998ರ ಛಾಂಪಿಯನ್ ಫ್ರಾನ್ಸ್ ವಿರುದ್ಧ ಗೆಲುವು ಸಾಧಿಸಿದ್ದು ವಿಶೇಷವಾಗಿತ್ತು. ತನ್ನ ಸಮೀಪದ ಪಾಸ್‌ಗಳ ಮೂಲಕ ವಿಶ್ವದ ಗಮನ ಸೆಳೆದಿದ್ದ ಹಾಗೂ ಜಗತ್ತಿನ ಸರ್ವಶ್ರೇಷ್ಟ ಫುಟ್ಬಾಲ್ ಕ್ಲಬ್ ಬಾರ್ಸಿಲೋನಾದ ಆಟಗಾರರಿಂದ ಕೂಡಿದ್ದ ಸ್ಪೇನ್ ಮತ್ತೊಂದು ಬಲಿಷ್ಟ ರಾಷ್ಟ್ರ ಹಾಲೆಂಡನ್ನು ಸೋಲಿಸಿ ಮೊದಲ ಬಾರಿಗೆ ವಿಶ್ವಕಪ್ ಜಯಿಸಿತು.

2014ರ 20ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗೆ ಬ್ರೆಜಿಲ್ ಆತಿಥ್ಯ ನೀಡಿತ್ತು. ಆರ್ಥಿಕ ಹಿನ್ನಡೆ ಅನುಭವಿಸುತ್ತಿದ್ದ ಬ್ರೆಜಿಲ್ ವಿಶ್ವಕಪ್ ನ ಆತಿಥ್ಯ ವಹಿಸಬಾರದು ಎಂದು ಬ್ರೆಜಿಲ್ ದೇಶಾದ್ಯಂತ ಪ್ರತಿಭಟನೆಗಳು ಸಹಾ ನಡೆದಿದ್ದವು. 2014ರ ಪಂದ್ಯಾವಳಿಯಲ್ಲಿ ಜರ್ಮನಿ ತಂಡ ಯುವಕರಿಂದ ಕೂಡಿತ್ತು. ಜರ್ಮನಿಯ ಪ್ರಸಿದ್ಧ ಕ್ಲಬ್‌ಗಳ ತರಬೇತಿ ಅಕಾಡೆಮಿಗಳಿಂದ ಹೊರಹೊಮ್ಮಿದ ಜರ್ಮನಿಯ ಯುವ ಆಟಗಾರರು ವಿಶ್ವದ ಗಮನ ಸೆಳೆದರು. ಈ ಪಂದ್ಯಾವಳಿಯಲ್ಲಿ ಹಾಲಿ ಛಾಂಪಿಯನ್ ಸ್ಪೇನ್ ಮೊದಲ ಸುತ್ತಿನಲ್ಲಿಯೇ

ಪುಟ 15 ನೋಡಿ



**JANASHAKTHIKANNADAVARAPATRIKE:** Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**